2010

JANUARY 'TO' DECEMBER

ರಾಮಕೃಷ್ಣ ಮಹಾಸಂಘದ ಏಕೈಕ ಕನ್ನಡ ಮಾಸಪತ್ರಿಕೆ

ವಿವೇಕಪ್ರಭ

ಪರಿಪೂರ್ಣ ಜೀವನದ ಪರಮಾಪ್ತ ಪತ್ರಿಕೆ



ಶ್ರೀಮಾತಾ ಸ್ಮೃತಿಸೌರಭ

10/- ಡಿಸೆಂಬರ್ 2010


ಸುದ್ದಿ ಸಂಚಯ

ಸಂಭ್ರಮ, ಅಚ್ಚುಕಟ್ಟುಗಳಿಂದ ನಡೆದ 'ವಿವೇಕಪ್ರಭ' ಭಕ್ತಸಮಾವೇಶ



ಅಕ್ಟೋಬರ್ ತಿಂಗಳ ದಿನಾಂಕ ೨೩ ಮತ್ತು ೨೪ ರಂದು ಮೈಸೂರಿನ ಕೆಂಪೇಗೌಡ ಮೆಮೋರಿಯಲ್ ಹಾಲಿನಲ್ಲಿ ಹಬ್ಬದ ವಾತಾವರಣ ಏರ್ಪಟ್ಟಿತ್ತು. ಕರ್ನಾಟಕದಾದ್ಯಂತ ಬಂದಿದ್ದ 'ವಿವೇಕಪ್ರಭ'ದ ೫೫೦ಕ್ಕೂ ಹೆಚ್ಚು ಚಂದಾ ಸಂಗ್ರಾಹಕರು ಮತ್ತು ಹಿತೈಷಿಗಳು ಅಲ್ಲಿ ನೆರೆದಿದ್ದರು. ೨೩.೧೦.೨೦೧೦ರ ಬೆಳಗ್ಗೆ ೬ ಗಂಟೆಗೆ ಸ್ತೋತ್ರ ಮತ್ತು ಧ್ಯಾನದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಸ್ವಾಮಿ ಸ್ವಾತ್ಮಾರಾಮಾನಂದಜಿ ಅವುಗಳನ್ನು ನಡೆಸಿಕೊಟ್ಟರು. ೮ ಗಂಟೆಗೆ ವಿದ್ವಾನ್ ಶ್ರೀ ಗುರುರಾಜ್ ಅವರಿಂದ ಭಜನೆ ನಡೆಯಿತು. ೯ ಗಂಟೆಗೆ ಸರಿಯಾಗಿ ಪರಮಪೂಜ್ಯ ಸ್ವಾಮಿ ಹರ್ಷಾನಂದಜಿ ಮಹಾರಾಜ್ ಅವರು ಸಮಾವೇಶವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿ ನಾಲ್ಕು ನೂತನ ಪುಸ್ತಕಗಳನ್ನು ಬಿಡುಗಡೆ ಮಾಡಿದರು. ಅನಂತರ 'ಶ್ರೀರಾಮಕೃಷ್ಣ' ರ ವಿಷಯವಾಗಿ ಪ್ರವಚನ ನೀಡಿದರು.

ಮೊದಲನೆಯ ದಿನದಂದು, ಮಾತಾ ವಿವೇಕಮಯಿ ಅವರು ಶ್ರೀಮಾತೆಯವರ ಬಗ್ಗೆ ಭಾಷಣ ಮಾಡಿದರೆ, ಸ್ವಾಮಿ ಜಿತಕಾಮಾನಂದಜಿ ಅವರು ಧ್ಯಾನದ ಆವಶ್ಯಕತೆಯ ಬಗ್ಗೆ ತಿಳಿಸಿಕೊಟ್ಟರು. ಬೆಳಗ್ಗೆ 'ವಿವೇಕಪ್ರಭ' ಪತ್ರಿಕೆಯ ಬಗ್ಗೆ ಸಮಾಲೋಚನೆ ನಡೆಯಿತು. ಸಂಜೆ ೪.೪೫ಕ್ಕೆ ಬೇಲಿ ಮಠದ ಪೂಜ್ಯ ಶ್ರೀ ಶಿವರುದ್ರ ಸ್ವಾಮೀಜಿಯವರ ಆಶೀರ್ವಚನ ಜರುಗಿತು. ಅಂದು ಸಂಜೆ ಸಂಧ್ಯಾರತಿಯ ಅನಂತರ ಏರ್ಪಡಿಸಿದ್ದ ಮತ್ತೂರು ಶ್ರೀ ಮಾರ್ಕಂಡೇಯ ಅವಧಾನಿ ಮತ್ತು ಶ್ರೀ ಕುಮಾರಸ್ವಾಮಿ ಅವರ ಕಾವ್ಯವಾಚನ–ವ್ಯಾಖ್ಯಾನವು ನೆರೆದಿದ್ದ ಸಭಿಕರೆಲ್ಲರ ಮನಸ್ಸುಗಳನ್ನು ಸೂರೆಗೊಂಡಿತು.



ಎರಡನೆಯ ದಿನದ ಸ್ತೋತ್ರ, ಧ್ಯಾನ ಮತ್ತು ಭಜನೆ ಕಾರ್ಯಕ್ರಮವನ್ನು ನಡೆಸಿಕೊಟ್ಟವರು ಸ್ವಾಮಿ ಸ್ವಾತ್ಮಾರಾಮಾನಂದಜಿ ಅವರು. ಅಂದು ಬೆಳಗ್ಗೆ ಸ್ವಾಮಿ ಮುಕ್ತಿದಾನಂದಜಿ ಅವರು 'ಸೇವೆಯ ಮಹತ್ವ'ದ ಬಗ್ಗೆ ಮಾತನಾಡಿದರೆ, ಸ್ವಾಮಿ ತ್ಯಾಗೀಶ್ವರಾನಂದಜಿ ಅವರು 'ಸ್ವಾಮಿ ವಿವೇಕಾನಂದ'ರ ಬಗ್ಗೆ ಭಾಷಣ ಮಾಡಿದರು. ಅನಂತರ ನಡೆದ ಹಿರೇಮಗಳೂರು ಕಣ್ಣನ್ ಅವರ ಭಾಷಣ ಜನರನ್ನು ಆಕರ್ಷಿಸಿತು. ಮಧ್ಯಾಹ್ನ ೨.೩೦ ಗಂಟೆಗೆ ನಡೆದ ಸಮಾರಂಭದಲ್ಲಿ ಡಾ.ಎಚ್. ಎನ್. ಮುರಳೀಧರ ಸಮಾರೋಪ ಭಾಷಣ ಮಾಡಿದರು.



ಅನಂತರ 'ಶಾರದಾ ಜ್ಞಾನಸುಧಾ ರಸಪ್ರಶ್ನೆ ಕಾರ್ಯಕ್ರಮ –೨೦೧೦'ರ ಬಹುಮಾನ ವಿತರಣೆ ಕಾರ್ಯಕ್ರಮ ಜರುಗಿತು, ಮುಖ್ಯ ಅತಿಥಿಗಳಾದ ಡಾ. ವುಡೇ ಪಿ. ಕೃಷ್ಣ ಅವರು ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಮಕ್ಕಳಲ್ಲಿ ಪರಿಚಯಿಸುವ ಆವಶ್ಯಕತೆಯನ್ನು ಒತ್ತಿಹೇಳಿದರು. ಇದೇ ಸಂದರ್ಭದಲ್ಲಿ ರಸಪ್ರಶ್ನೆ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಸತೀಶ್ ಪವಾರ್ ಅವರನ್ನು ಸನ್ಮಾನಿಸಲಾಯಿತು. ಸ್ವಾಮಿ ನಿತ್ಯಸ್ಥಾನಂದಜಿ ಮತ್ತು ಸ್ವಾಮಿ ಜಗದಾತ್ಮಾನಂದಜಿ ಅವರ ಆಶೀರ್ವಚನಗಳ ನಂತರ, ವಿಜೇತರಿಗೆ ಡಾ. ವುಡೇ ಪಿ. ಕೃಷ್ಣ ಬಹುಮಾನಗಳನ್ನು ವಿತರಿಸಿದರು. ಸಂಜೆ, ಹುಬ್ಬಳ್ಳಿಯ ಡಾ. ಪವನ್ ಶ್ರೀಪಾದ ಭಟ್ ಅವರಿಂದ ಹರಿಕಥೆ ಏರ್ಪಾಡಾಗಿತ್ತು.



ಶಿಬಿರಾರ್ಥಿಗಳಿಗೆ ವಸತಿ ಸೌಕರ್ಯ, ಊಟದ ವ್ಯವಸ್ಥೆ, ಸಾರಿಗೆ ವ್ಯವಸ್ಥೆ ಮುಂತಾದವನ್ನು ಅಚ್ಚುಕಟ್ಟಾಗಿ ಮಾಡಲಾಗಿತ್ತು. ಒಟ್ಟಿನಲ್ಲಿ, ಮುಂಬರುವ ದಿನಗಳಲ್ಲಿ 'ವಿವೇಕಪ್ರಭ' ಪತ್ರಿಕೆಯನ್ನು ಇನ್ನೂ ಜನಪ್ರಿಯವನ್ನಾಗಿ ಮಾಡುವ ಸಂಕಲ್ಪಕ್ಕೆ ಈ ಸಮಾವೇಶವು ನಾಂದಿ ಹಾಡಿತು.

ಈ ಸಂಜೆ

ಮಂಗಳವಾರ, 28 ಡಿಸೆಂಬರ್, 2010



ನಗರದ ಗಾಂಧಿಭವನದಲ್ಲಿ ನಡೆದ ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಪತ್ರಕರ್ತ, ನಾಡೋಜ ಪಾಟೀಲಪುಟ್ಟಪ್ಪ ಅವರಿಗೆ ಮಾಡೆ ಪ್ರತಿಷ್ಠಾನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕಾನೂನು ವಿವಿ ಕುಲಪತಿ ಡಾ.ಜಿ.ಎಸ್.ಪಾಟೀಲ್, ಪ್ರೊ.ಡಾ.ವೆಂಕಟರಾಮ್, ಪ್ರತಿಷ್ಠಾನದ ಡಾ.ಮಾಡೆ ಪಿ.ಕೃಷ್ಣ ಶರ್ಮ, ಡಾ.ಶ್ರೀನಿವಾಸಯ್ಯ, ಡಾ.ದಾಸೇಗೌಡ, ದೇವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾವಾಣಿ
ಸೋಮವಾರ 27 ಡಿಸೆಂಬರ್ 2010



ಗಾಂಧಿ ಭವನದಲ್ಲಿ ನಡೆದ ಡಬ್ಲ್ಯು.ಹೆಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಸರ್ವೋದಯ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆ ಮಾಡಿರುವ ಹೆಸರಾಂತ ಪತ್ರಕರ್ತ ನಾಡೋಜ ಪಾಟೀಲ ಪುಟ್ಟಪ್ಪ ಅವರಿಗೆ ವೊಡೇ ಪ್ರತಿಷ್ಠಾನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಡಾ.ಜೆ.ಎಸ್. ಪಾಟೀಲ, ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಡಾ. ಆರ್. ವೆಂಕಟರಾವ್, ಗಾಂಧಿ ಶಾಂತಿ ಪ್ರತಿಷ್ಠಾನ ಅಧ್ಯಕ್ಷ ಡಾ.ವೊಡೇ ಪಿ. ಕೃಷ್ಣ, ಕಾರ್ಯದರ್ಶಿ ಸಿದ್ಧಾರ್ಥ ಶರ್ಮ, ನಿಧಿಯ ಅಧ್ಯಕ್ಷ ಡಾ.ಹೋ. ಶ್ರೀನಿವಾಸಯ್ಯ, ಪ್ರೊ.ಹೆಚ್.ಆರ್. ದಾಸೇಗೌಡ, ಡಬ್ಲ್ಯು.ಹೆಚ್. ದೇವಕುಮಾರ್ ಹಾಗೂ ಇತರರು ಉಪಸ್ಥಿತರಿದ್ದರು.

ಉದಯವಾಣಿ

ಭಾನುವಾರ | ಡಿಸೆಂಬರ್ | 26 | 2010



ಬೆಂಗಳೂರಿನ ಗಾಂಧಿ ಭವನದಲ್ಲಿ ನಡೆದ ಡಬ್ಲ್ಯೂಎಚ್ ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ನಾಡೋಜ ಪಾಟೀಲ್ ಪುಟ್ಟಪ್ಪ ಅವರಿಗೆ ವೂಡೇ ಪ್ರತಿಷ್ಠಾನ ಪ್ರಶಸ್ತಿ ಪ್ರದಾನ ಮಾಡಲಾಯಿತು. ರಾಜ್ಯ ಕಾನೂನು ವಿವಿ ಕುಲಪತಿ ಡಾ. ಜಿ.ಎಸ್ . ಪಾಟೀಲ್, ರಾಷ್ಟ್ರೀಯ ಕಾನೂನು ವಿವಿ ಪ್ರೊ. ಆರ್. ವೆಂಕಟರಾವ್, ಗಾಂಧಿ ಶಾಂತಿ ಪ್ರತಿಷ್ಠಾನ ಅಧ್ಯಕ್ಷ ವೂಡೇ ಪಿ. ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ | ಬೆಂಗಳೂರು 25-12-2010

ಅನ್ಯಾಯದ ವಿರುದ್ಧ ದನಿ ಎತ್ತದ ವಿದ್ಯಾವಂತರು–ವಿಷಾದ



ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಸರ್ವೋದಯ ಕ್ಷೇತ್ರದ ವಿಶಿಷ್ಟ ಸಾಧನೆಗೆ ನೀಡಲಾಗುವ ವೂಡೆ ಪ್ರತಿಷ್ಠಾನದ ಪ್ರಶಸ್ತಿಯನ್ನು ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ ಅವರಿಗೆ ಪ್ರದಾನ ಮಾಡಿದ ಸಂದರ್ಭದಲ್ಲಿ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಆರ್. ವೆಂಕಟರಾವ್, ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಡಾ. ಜೆ.ಎಸ್. ಪಾಟೀಲ್, ಪ್ರತಿಷ್ಠಾನದ ವೂಡೆ ಪಿ. ಕೃಷ್ಣ, ಗಾಂಧಿ ಪ್ರತಿಷ್ಠಾನದ ಡಾ. ಹೊ. ಶ್ರೀನಿವಾಸಯ್ಯ ಮುಂತಾದವರು ಉಪಸ್ಥಿತರಿದ್ದರು.

ಬೆಂಗಳೂರು, ಡಿ. 24: ದೇಶದಲ್ಲಿ ವಿವಿಧ ವಲಯದ ವಿದ್ಯಾವಂತರಿದ್ದರೂ ಅನ್ಯಾಯದ ವಿರುದ್ಧ ದನಿ ಎತ್ತುತ್ತಿಲ್ಲ ಎಂದು ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ ವಿಷಾದ ವ್ಯಕ್ತಪಡಿಸಿದರು.

ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಸರ್ವೋದಯ ಕ್ಷೇತ್ರದ ವಿಶಿಷ್ಟ ಸಾಧನೆಗೆ ನೀಡಲಾಗುವ ವೂಡೆ ಪ್ರತಿಷ್ಠಾನದ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ಹಿಂದೆ ಅನಕ್ಷರಸ್ಥರಿದ್ದರೂ ಅನ್ಯಾಯ ಮಾಡಲು ಭಯವಾಗುತ್ತಿತ್ತು. ಆದರೆ, ಈಗ ಶೇ. 67ರಷ್ಟು ಮಂದಿ ಅಕ್ಷರಸ್ಥರಾಗಿದ್ದರೂ ಭಯದ ವಾತಾವರಣ ಇದೆ. ಇಷ್ಟಿದ್ದರೂ ಅನ್ಯಾಯದ ವಿರುದ್ಧ ಹೋರಾಟ ಮಾಡಲು ಯಾರೂ ಮುಂದಾಗುತ್ತಿಲ್ಲ ಎಂದರು.

ಗಾಂಧೀಜಿ ವಿದೇಶದಿಂದ ಭಾರತಕ್ಕೆ ಬಂದಾಗ ಅನೇಕ ಮಂದಿ ಅನಕ್ಷರಸ್ಥರಿದ್ದರು. ಆಗ ಭಯ ಎಂಬುದಿರಲಿಲ್ಲ. ಈಗ ಅಕ್ಷರಸ್ಥರು, ವಿದ್ಯಾವಂತರು ಬಹಳಷ್ಟಿದ್ದರೂ ತಮ್ಮ ಮುಂದೆ ಅನ್ಯಾಯ ನಡೆದರೂ ಬಾಯಿಮುಚ್ಚಿಕೊಂಡಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಇಂದು ಉನ್ನತ ಮಟ್ಟದಲ್ಲಿರುವವರು ಕೀಳುಮಟ್ಟದ ಚಿಂತನೆ ಮಾಡುತ್ತಾ ಹಣದ ದಾಸರಾಗಿದ್ದಾರೆ. ದೇಶದ ನಾಯಕರ ದಾರಿಯನ್ನು ಅನುಸರಿಸಿದರೆ ದೇವರೇ ಗತಿ. ಸರಳ ಜೀವನ ಎಂಬುದು ಮರೆಯಾಗುತ್ತಿದೆ. ಹಳ್ಳಿಗಳ ಸ್ಥಿತಿ ಸಾಯುತ್ತಿದೆ. ಹಳ್ಳಿಗಳ ಕೈಗಾರಿಕೆಗಳು ಹೀನಾಯ ಸ್ಥಿತಿಗೆ ತಲುಪಿವೆ. ವಿದೇಶಿ ವ್ಯಾಮೋಹ ಅಂಟಿಸಿಕೊಂಡಿರುವವರಿಗೆ ಸ್ವದೇಶಿ ಉತ್ಪನ್ನ ಬೇಡವಾಗಿದೆ. ಈಗ ಸ್ವದೇಶಿ ಉತ್ಪನ್ನ ಬೇಕಾಗಿರುವುದು ಕೇವಲ ರೈಲ್ವೆ ಮಂಡಳಿಗೆ ಮಾತ್ರ. ಉಳಿದ ಇಲಾಖೆಗಳು ಇತ್ತ ಗಮನವನ್ನೇ ಹರಿಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ದೇಶವನ್ನು ಆಳುವ ಪ್ರತಿಯೊಬ್ಬ ನಾಯಕರು ಸರಳ ಜೀವನ ನಡೆಸಿ ಮೇಲ್ಪಂಕ್ತಿ ಹಾಕಿಕೊಡಬೇಕು. ಆದರೆ, ಇಂದಿನ ದಿನಗಳಲ್ಲಿ ಮಂತ್ರಿಗಳು ಹೊರಟ ಕಾರನ್ನು ಹಲವು ಕಾರುಗಳು ಹಿಂಬಾಲಿಸುತ್ತವೆ. ಹಲವು ಹಿಂಬಾಲಕರೂ ತಮ್ಮ ವಾಹನಗಳಲ್ಲಿ ಅವುಗಳನ್ನು ಹಿಂಬಾಲಿಸುತ್ತಾರೆ. ಇದನ್ನು ನೋಡಿದರೆ ಇಂಧನ ಸ್ವಾವಲಂಬನೆ ಸಾಧಿಸಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.


ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಆರ್. ವೆಂಕಟರಾವ್ ಅವರು ಮಹಾತ್ಮಗಾಂಧಿಯವರ ನಿರಂತರ ಮೌಲ್ಯಗಳ ಕುರಿತು ಉಪನ್ಯಾಸ ನೀಡಿ, ಗಾಂಧೀಜಿ ಹೇಗೆ ಸತ್ಯ, ಧರ್ಮ, ಪ್ರಾಮಾಣಿಕತೆಗೆ ಹತ್ತಿರವಾಗಿದ್ದರೋ ಅವರ ವಿಚಾರಧಾರೆ ಇಂದಿಗೂ ಪ್ರಸ್ತುತ. ಅವರ ಸತ್ಯಾಗ್ರಹವಿರಲಿ, ವಿವಿಧ ಧರ್ಮಗಳ ಕುರಿತ ಆಚರಣೆ ಇರಲಿ ಅವೆಲ್ಲವೂ ಮಾದರಿ. ಶಾಂತಿ ಎಲ್ಲರಿಗೂ ಬೇಕು. ಆದರೆ, ಅದನ್ನು ಸ್ಥಾಪಿಸಲು ಯಾರೂ ಮುಂದೆ ಬರುವುದಿಲ್ಲ ಎಂದರು.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಡಾ. ಜೆ.ಎಸ್. ಪಾಟೀಲ್, ಗಾಂಧಿ ಪ್ರತಿಷ್ಠಾನದ ಡಾ. ಹೊ. ಶ್ರೀನಿವಾಸಯ್ಯ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡಪ್ರಭ, ಶನಿವಾರ, 25 ಡಿಸೆಂಬರ್ 2010

ಗೌರವ...

ಗಾಂಧಿ ಶಾಂತಿ ಪ್ರತಿಷ್ಠಾನ ಹಮ್ಮಿಕೊಂಡಿದ್ದ ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಪಾಟೀಲ್ ಪುಟ್ಟಪ್ಪ ಅವರನ್ನು ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ಹೋ. ಶ್ರೀನಿವಾಸಯ್ಯ ಗೌರವಿಸಿದರು. ವೊಡೇಕೃಷ್ಣ, ಪ್ರೊ.ಆರ್. ವೆಂಕಟರಾವ್ ಇದ್ದರು.



ಜಾತಿ ಆಧಾರದ ಮೇಲೆ ಭ್ರಷ್ಟರ ಪರಿಗಣನೆ ಸಲ್ಲ

▪ ವಿಕ ಸುದ್ದಿಲೋಕ ಬೆಂಗಳೂರು

ಭ್ರಷ್ಟ ರಾಜಕಾರಣಿಗಳನ್ನು ಜಾತಿ ಆಧಾರದ ಮೇಲೆ ಪರಿಗಣಿಸುವುದು ಸರಿಯಲ್ಲ ಎಂದು ಡಾ.ಪಾಟೀಲ ಪುಟ್ಟಪ್ಪ ಆತಂಕ ವ್ಯಕ್ತಪಡಿಸಿದರು.

ಗಾಂಧಿ ಶಾಂತಿ ಪ್ರತಿಷ್ಠಾನ, ಗಾಂಧಿ ಸ್ಮಾರಕ ನಿಧಿ ಹಾಗೂ ವೂಡೇ ಪ್ರತಿಷ್ಠಾನದ ಸಹಯೋಗದಲ್ಲಿ ಬೆಂಗಳೂರಿನಲ್ಲಿ ಶುಕ್ರವಾರ ಏರ್ಪಡಿಸಿದ್ದ ಡಬ್ಲ್ಯು.ಎಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ ಮತ್ತು ವೂಡೇ ಪ್ರತಿಷ್ಠಾನದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

ಭ್ರಷ್ಟರನ್ನು ಜಾತಿ ಆಧಾರದ ಮೇಲೆ ನೋಡುವ ಬದಲು, ಅವರದ್ದೇ ಒಂದು ಜಾತಿಯೆಂದು ಪರಿಗಣಿಸಬೇಕು. ದೇಶದ ತುಂಬೆಲ್ಲ ನಾಯಕರೇ ತುಂಬಿದ್ದಾರೆ. ಆದರೆ, ನಾಯಕತ್ವದ ಗುಣ ಹೊಂದಿಲ್ಲ. ಸರಳ ಜೀವನ ಶೈಲಿ ಇವರಲ್ಲಿ ವಿರಳ. ರಾಜಕಾರಣಿಗಳು ಸರಳ ಜೀವನ ನಡೆಸುವ ಮೂಲಕ ಇತರರಿಗೆ ಮಾದರಿಯಾಗಬೇಕು ಎಂದು ಸಲಹೆ ನೀಡಿದರು.

ನೇಕಾರಿಕೆ ಮತ್ತು ಕುಂಬಾರಿಕೆ ಮತ್ತಿತರ ಗುಡಿ ಕೈಗಾರಿಕೆಗಳು ಕಣ್ಮರೆಯಾಗುತ್ತಿವೆ. ಸ್ವದೇಶಿ ವಸ್ತುಗಳ ಬಳಕೆ ಯಾರಿಗೂ ಬೇಕಿಲ್ಲ ಎಂದು ವಿಷಾದಿಸಿದರು.

ಮಹಾತ್ಮ ಗಾಂಧೀಜಿ ಅವರ ಮೌಲ್ಯಗಳ ವಿಷಯ ಕುರಿತು ಮಾತನಾಡಿದ ರಾಷ್ಟ್ರೀಯ ಕಾನೂನು ವಿವಿ ಕುಲಪತಿ ಡಾ.ಆರ್. ವೆಂಕಟರಾಮು, ಗಾಂಧೀಜಿ ವಿಚಾರಗಳು ಎಂದೆಂದಿಗೂ ಪ್ರಸ್ತುತ ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ಹೊ. ಶ್ರೀನಿವಾಸಯ್ಯ, ಶೇಷಾದ್ರಿಪುರಂ ಶಿಕ್ಷಣ ದತ್ತಿ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ರಾಜ್ಯ ಕಾನೂನು ವಿವಿ ಕುಲಪತಿ ಡಾ. ಜೆ.ಎಸ್. ಪಾಟೀಲ್ ಮತ್ತಿತರರು ಪಾಲ್ಗೊಂಡಿದ್ದರು.



ಬೆಂಗಳೂರಿನ ಗಾಂಧಿ ಭವನದಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ ನಾಡೋಜ ಪಾಟೀಲ ಪುಟ್ಟಪ್ಪ ಅವರಿಗೆ ಗಣ್ಯರು ವೂಡೇ ಪ್ರತಿಷ್ಠಾನ ಪ್ರಶಸ್ತಿ ಪ್ರದಾನ ಮಾಡಿದರು. ವೂಡೇ ಪಿ. ಕೃಷ್ಣ, ಡಾ. ಜೆ.ಎಸ್. ಪಾಟೀಲ್ ಮತ್ತು ಡಾ. ಹೊ. ಶ್ರೀನಿವಾಸಯ್ಯ ಉಪಸ್ಥಿತರಿದ್ದರು.

ಪ್ರಜಾವಾಣಿ
ಶನಿವಾರ 25ನೇ ಡಿಸೆಂಬರ್ 2010

ಭ್ರಷ್ಟರದ್ದೇ ಒಂದು ಜಾತಿ: ಪಾಪು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭ್ರಷ್ಟ ನಾಯಕರನ್ನು ಅವರ ಜಾತಿ ಆಧಾರದ ಮೇಲೆ ಪರಿಗಣಿಸುವ ಬದಲು ಭ್ರಷ್ಟಾಚಾರಿಗಳದ್ದೇ ಒಂದು ಜಾತಿ ಎಂದು ಪರಿಗಣಿಸಬೇಕು' ಎಂದು ಹಿರಿಯ ಪತ್ರಕರ್ತ ಡಾ. ಪಾಟೀಲ ಪುಟ್ಟಪ್ಪ ಪ್ರತಿಪಾದಿಸಿದರು.

ಇಲ್ಲಿಯ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ವೂಡೇ ಪ್ರತಿಷ್ಠಾನದ ಸಹಯೋಗದಲ್ಲಿ ಶುಕ್ರವಾರ ಏರ್ಪಡಿಸಿದ್ದ ಡಬ್ಲ್ಯೂ. ಎಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ ಹಾಗೂ ವೂಡೇ ಪ್ರತಿಷ್ಠಾನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

ಇಂದು ದೇಶದ ತುಂಬೆಲ್ಲ ನಾಯಕರೇ ತುಂಬಿದ್ದಾರೆ. ಆದರೆ ನಾಯಕರಾಗುವ ಗುಣವನ್ನು ಹೊಂದಿಲ್ಲ. ಸರಳ ಜೀವನ ಶೈಲಿ ಅವರಲ್ಲಿ ಕಾಣುವುದಿಲ್ಲ. ರಾಜಕೀಯ ವ್ಯಕ್ತಿಗಳಲ್ಲದೇ ಅವರ ಹಿಂಬಾಲಕರಿಗೂ ಕಾರು, ಹಣ ದಕ್ಕುತ್ತಿದೆ. ಇದೆಲ್ಲ ಎಲ್ಲಿಂದ ಬರುತ್ತದೆ ಎಂದು ಪ್ರಶ್ನಿಸಿದ ಅವರು, ಇನ್ನಾದರೂ ಸರಳ ಜೀವನ ನಡೆಸುವ ಮೂಲಕ ಇತರರಿಗೆ ಮೇಲ್ಪಂಕ್ತಿ ಹಾಕಬೇಕು' ಎಂದು ಸಲಹೆ ನೀಡಿದರು.

'ಗ್ರಾಮೀಣ ಗುಡಿ ಕೈಗಾರಿಕೆಗಳಾದ ನೇಕಾರಿಕೆ, ಕುಂಬಾರಿಕೆಯಂಥವು ಕಣ್ಮರೆಯಾಗುತ್ತಿವೆ. ಸ್ವದೇಶಿ ವಸ್ತುಗಳ ಬಳಕೆ ಯಾರಿಗೂ ಬೇಕಿಲ್ಲ' ಎಂದು ನುಡಿದರು.

'ಮಹಾತ್ಮ ಗಾಂಧೀಜಿ ಅವರ ನಿರಂತರ ಮೌಲ್ಯಗಳು' ಎಂಬ ವಿಷಯ ಕುರಿತು ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಡಾ. ಆರ್. ವೆಂಕಟರಾಮು ಮಾತನಾಡಿ, 'ಗಾಂಧೀಜಿ ವ್ಯಕ್ತಿತ್ವದಂತೆ, ಅವರ ವಿಚಾರಗಳೂ ಎಂದೆಂದಿಗೂ ಪ್ರಸ್ತುತ' ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ಹೋ. ಶ್ರೀನಿವಾಸಯ್ಯ, ಕರ್ನಾಟಕ ರಾಜ್ಯ ಕಾನೂನು ವಿವಿ ಕುಲಪತಿ ಡಾ. ಜೆ. ಎಸ್. ಪಾಟೀಲ್, ವೂಡೇ ಪ್ರತಿಷ್ಠಾನದ ಅಧ್ಯಕ್ಷ ವೂಡೇ ಪಿ. ಕೃಷ್ಣ ಇನ್ನಿತರರು ಉಪಸ್ಥಿತರಿದ್ದರು.




ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಡಬ್ಲ್ಯೂ. ಎಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ ಹಾಗೂ ವೂಡೇ ಪ್ರತಿಷ್ಠಾನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ (ಎಡದಿಂದ) ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಡಾ. ಆರ್. ವೆಂಕಟರಾಮು, ಪ್ರಶಸ್ತಿ ಪುರಸ್ಕೃತರಾದ ಹಿರಿಯ ಪತ್ರಕರ್ತ ಡಾ. ಪಾಟೀಲ ಪುಟ್ಟಪ್ಪ, ಕರ್ನಾಟಕ ರಾಜ್ಯ ಕಾನೂನು ವಿವಿ ಕುಲಪತಿ ಡಾ. ಜೆ. ಎಸ್. ಪಾಟೀಲ್ ಭಾಗವಹಿಸಿದ್ದರು.

ನಾವು ಕನ್ನಡಿಗರು

ಗುರುವಾರ
23-12-2010

ಕಾಲೇಜಿನಲ್ಲಿ ರಾಜ್ಯೋತ್ಸವ



ಶೇಷಾದ್ರಿಪುರ ಸಂಜೆ ಪದವಿ ಪೂರ್ವ ಕಾಲೇಜು ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಕಾಲೇಜಿನ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಆಡಳಿತ ಸಮಿತಿಯ ಸದಸ್ಯ ಅಧ್ಯಕ್ಷ ಎಸ್. ವೀರಬದ್ರಯ್ಯ, ಎನ್.ಆರ್. ಪಂಡಿತಾರಾಧ್ಯ, ಆರ್. ಮಹಾಲಕ್ಷ್ಮೀ ಹಾಜರಿದ್ದರು.

ಪ್ರಜಾವಾಣಿ, ಸೋಮವಾರ 22ನೇ ನವೆಂಬರ್ 2010

ಸ್ಥಿರ ನಿಧಿ: ಖಾಸಗಿ ಕಾಲೇಜುಗಳ ವಿರೋಧ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಅನುದಾನಿತ ಕಾಲೇಜುಗಳಲ್ಲಿ ಪ್ರತಿಯೊಂದು ಕೋರ್ಸ್ ಮತ್ತು ತರಗತಿಗಳಿಗೆ ಅನುಗುಣವಾಗಿ ಸ್ಥಿರ ನಿಧಿ ಸ್ಥಾಪಿಸುವ ವಿಶ್ವವಿದ್ಯಾನಿಲಯದ ಪ್ರಸ್ತಾವವನ್ನು ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳ ಸಂಘ ವಿರೋಧಿಸಿದೆ.

ಅಲ್ಲದೆ ಸಂಯೋಜನಾ ಶುಲ್ಕ ಏರಿಸಿರುವುದು ಸರಿಯಲ್ಲ, ಅದನ್ನು ಹಿಂದಿನ ಪಠ್ಯಕ್ರಮಾನುಸಾರ ಕಟ್ಟಿಸಿಕೊಳ್ಳುವುದು ಒಳ್ಳೆಯದು ಎಂದು ಸಂಘದ ಅಧ್ಯಕ್ಷ ಎಂ.ಕೆ.ಪಾಂಡುರಂಗ ಶೆಟ್ಟಿ, ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಅವರು ಕುಲಪತಿ ಡಾ.ಎನ್.ಪ್ರಭುದೇವ್ ಅವರಿಗೆ ಮನವಿ ಮಾಡಿದ್ದಾರೆ. ವಿದ್ಯಾರ್ಥಿಗಳಿಗೆ ನೀಡುವ ಒಎಂಆರ್ ಹಾಳೆಗಳಿಗೆ ರೂ. 15 ಶುಲ್ಕ ವಿಧಿಸುವುದು ಅಸಮಂಜಸ, ವಿವಿ ಸಂಯೋಜನೆ ಪಡೆದಿರುವ ಪತ್ರವನ್ನು ದಾಖಲಾತಿ ಕೊನೆಯ ದಿನಾಂಕಕ್ಕಿಂತ ಮುನ್ನ ನೀಡಬೇಕೆಂದು ಕೋರಿದ್ದಾರೆ.

ವಿವಿ ವಿಭಜನೆಗೆ ಸಂಬಂಧಿಸಿದ ಡಾ. ಎನ್.ರುದ್ರಯ್ಯ ಅಧ್ಯಕ್ಷತೆ ಸಮಿತಿ ನೀಡಿರುವ ವರದಿಯು ಲಭ್ಯವಾಗಬೇಕು. ಸ್ನಾತಕೋತ್ತರ ಪದವಿ ತರಗತಿಗಳಲ್ಲಿ ಖಾಲಿ ಉಳಿಯುವ ಸೀಟುಗಳನ್ನು ಅಗತ್ಯವುಳ್ಳವರಿಗೆ ನೀಡಲು ಕಾಲೇಜುಗಳ ಆಡಳಿತ ಮಂಡಳಿಗಳಿಗೆ ಅನುಮತಿ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಈ ಸಂಜೆ 21-11-2010

ಕನ್ನಡ ಸ್ವಾಭಿಮಾನದ ಬದುಕು ನೀಡಲಿದೆ

ಶೇಷಾದ್ರಿಪುರಂ ಸಂಜೆ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವ ಸಂಭ್ರಮ

ಬೆಂಗಳೂರು, ನ.21-ಜೀವನದಲ್ಲಿ ಸ್ವಾಭಿಮಾನಿಗಳಾಗಿ ಬದುಕಬೇಕು, ಆ ಸ್ವಾಭಿಮಾನವನ್ನು ನಮ್ಮ ಕನ್ನಡ ಭಾಷೆ ಕಲಿಸುತ್ತದೆ ಎಂದು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ ತಿಳಿಸಿದರು.

ಶೇಷಾದ್ರಿಪುರಂ ಸಂಜೆ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿ, ನಾವೆಲ್ಲರೂ ಜೀವನದಲ್ಲಿ ಸ್ವಾಭಿಮಾನಿಗಳಾಗಿ ಜೀವಿಸಬೇಕೆಂದು ಹಿತವಚನ ನೀಡಿದರು.

ಕಲಾ ಶ್ರೀ ಲಕ್ಷ್ಮಣ್ ದಾಸ್ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ, ಕನ್ನಡ ನಾಡು ಮತ್ತು ಅದರ ಹಿನ್ನೆಲೆ ಪುರಾಣದಲ್ಲಿಯೂ ಉಲ್ಲೇಖವಾಗಿರುವುದನ್ನು ತಿಳಿಸುತ್ತಾ ಕನ್ನಡದ ಶ್ರೇಷ್ಠ ಕವಿಗಳಾದ ಪಂಪ ಮತ್ತು ಕುವೆಂಪುರವರ ಜೀವನ ಸಾಧನೆಯನ್ನು ಪದ್ಯಗಳ ಮೂಲಕ ಅತ್ಯಂತ ಹೃದಯಂಗಮವಾಗಿ ತಿಳಿಸಿಕೊಟ್ಟರು.

ಆಡಳಿತ ಸಮಿತಿ ಅಧ್ಯಕ್ಷ ಎಸ್.ವೀರಭದ್ರಯ್ಯ ಮಾತನಾಡುತ್ತಾ, ಕನ್ನಡ ಭಾಷೆಯು ಮಾನವನಲ್ಲಿರುವ ಮಾನವತೆಯನ್ನು ಬಲಗೊಳಿಸುತ್ತದೆ. ಆ ಭಾಷೆಯನ್ನು ಉತ್ತಮವಾಗಿ ಉಳಿಸಿ ನೀವೆಲ್ಲರೂ ವಿದ್ಯಾವಂತರಾಗಿ ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಬೇಕೆಂದು ಹಿತವಚನ ನುಡಿದರು.



ವಂದನಾರ್ಪಣೆಯನ್ನು ಕನ್ನಡ ಉಪನ್ಯಾಸಕಿಯಾದ ಡಾ.ಲಕ್ಷ್ಮೀದೇವಿ ನೆರವೇರಿಸಿದರು.

ಕಾರ್ಯಕ್ರಮದ ನಿರೂಪಣೆಯನ್ನು ಕನ್ನಡ ಉಪನ್ಯಾಸಕ ಬಿ.ಎನ್.ಮಧು ನಡೆಸಿಕೊಟ್ಟರು.

ಪ್ರಜಾವಾಣಿ
ಭಾನುವಾರ 21ನೇ ನವೆಂಬರ್ 2010

ಪದಾಧಿಕಾರಿಗಳ ಆಯ್ಕೆ

ಬೆಂಗಳೂರು ವಿಶ್ವವಿದ್ಯಾಲಯದ ಖಾಸಗಿ ಕಾಲೇಜುಗಳ ಸಂಘದಲ್ಲಿ ಇತ್ತೀಚೆಗೆ ನಡೆದ ಕಾರ್ಯಕಾರಿಣಿ ಸಭೆಯಲ್ಲಿ ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್‌ನ ಅಧ್ಯಕ್ಷ ಡಾ. ಎಂ.ಕೆ.ಪಾಂಡುರಂಗ ಶೆಟ್ಟಿ ಅವರನ್ನು ಸಂಘದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ.

ಉಪಾಧ್ಯಕ್ಷರಾಗಿ ಪ್ರೊ. ಬಿ.ಆರ್. ಶೇಷಾದ್ರಿ ಅಯ್ಯಂಗಾರ್, ಟಿ.ವಿ. ಮಾರುತಿ ಆಯ್ಕೆ ಆಗಿದ್ದಾರೆ. ಕಾರ್ಯದರ್ಶಿ ಡಾ. ವೂಡೇ ಪಿ.ಕೃಷ್ಣ, ಸಹ ಕಾರ್ಯದರ್ಶಿ ಪ್ರೊ.ವೈ.ಅಜೀಜ್ ಅಹಮದ್, ಖಜಾಂಚಿ ಎ.ವಿ.ಎಸ್. ಮೂರ್ತಿ ಅವರನ್ನು ಆಯ್ಕೆ ಮಾಡಲಾಗಿದೆ.

ಈ ಸಂಜೆ ಭಾನುವಾರ, 21 ನವೆಂಬರ್, 2010

ಪದಾಧಿಕಾರಿಗಳ ಆಯ್ಕೆ

ಬೆಂಗಳೂರು, ನ.21- ಬೆಂಗಳೂರು ವಿಶ್ವ ವಿದ್ಯಾಲಯ ಖಾಸಗಿ ಕಾಲೇಜುಗಳ ಸಂಘವು ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಕೆ.ಪಾಂಡುರಂಗ ಶೆಟ್ಟಿ ಅವರನ್ನು ಸಂಘದ ಅಧ್ಯಕ್ಷರನ್ನಾಗಿ ಪುನರಾಯ್ಕೆ ಮಾಡಿದೆ.

ಪ್ರೊ.ಬಿ.ಆರ್.ಶೇಷಾದ್ರಿ ಐಯ್ಯಂಗಾರ್, ಟಿ.ವಿ.ಮಾರುತಿ ಉಪಾಧ್ಯಕ್ಷರು,
ಡಾ.ವೂಡೇ ಪಿ.ಕೃಷ್ಣ ಕಾರ್ಯದರ್ಶಿ, ಪ್ರೊ.ವೈ.ಅಜೀಜ್ ಅಹ್ಮದ್ ಸಹ ಕಾರ್ಯದರ್ಶಿ, ಎ.ವಿ.ಎಸ್.ಮೂರ್ತಿ ಕೋಶಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.


ಸಂಜೆ ವಾಣಿ

ಶನಿವಾರ 20 ನವೆಂಬರ್ 2010

ಪಾಂಡುರಂಗ ಶೆಟ್ಟಿ ಪುನರಾಯ್ಕೆ

ಬೆಂಗಳೂರು, ನ. ೨೦- ಬೆಂಗಳೂರು ವಿಶ್ವ ವಿದ್ಯಾಲಯ ಖಾಸಗಿ ಕಾಲೇಜುಗಳ ಸಂಘದ ಅಧ್ಯಕ್ಷರಾಗಿ ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಅಧ್ಯಕ್ಷ ಡಾ. ಎಂ.ಕೆ. ಪಾಂಡುರಂಗ ಶೆಟ್ಟಿಯವರು ಪುನರಾಯ್ಕೆಯಾಗಿದ್ದಾರೆ. ಉಳಿದಂತೆ ಸಂಘದ ಪದಾಧಿಕಾರಿಗಳ ಪಟ್ಟಿ ಇಂತಿದೆ, ಉಪಾಧ್ಯಕ್ಷರಾಗಿ ಪ್ರೊ. ಬಿ.ಆರ್. ಶೇಷಾದ್ರಿ ಐಯ್ಯಂಗಾರ್, ಟಿ.ವಿ. ಮಾರುತಿ, ಕಾರ್ಯದರ್ಶಿಯಾಗಿ ಡಾ. ವೂಡೇ ಪಿ.ಕೃಷ್ಣ, ಸಹ ಕಾರ್ಯದರ್ಶಿಯಾಗಿ ಪ್ರೊ. ವೈ. ಅಜೀಜ್ ಅಹ್ಮದ್, ಕೋಶಾಧ್ಯಕ್ಷರಾಗಿ ಎ.ವಿ.ಎಸ್. ಮೂರ್ತಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕನ್ನಡಪ್ರಭ, ಗುರುವಾರ, 18 ನವೆಂಬರ್ 2010



ರಾಜ್ಯೋತ್ಸವ...

ಶೇಷಾದ್ರಿಪುರ ಸಂಜೆ ಪದವಿ ಪೂರ್ವ ಕಾಲೇಜು ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಕಾಲೇಜಿನ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಆಡಳಿತ ಸಮಿತಿಯ ಅಧ್ಯಕ್ಷ ಎಸ್. ವೀರಭದ್ರಯ್ಯ, ಎನ್.ಆರ್. ಪಂಡಿತಾರಾಧ್ಯ, ಆರ್.ಮಹಾಲಕ್ಷ್ಮೀ ಇತರರು ಹಾಜರಿದ್ದರು.

ಸಂಯುಕ್ತ ಕರ್ನಾಟಕ | 18-11-2010



ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಅಂಕಣಕಾರ ಎಸ್.ಷಡಕ್ಷರಿ ಅವರನ್ನು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಗೌರವ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಮಣಿ ಷಡಕ್ಷರಿ ಮತ್ತಿತರರು ಉಪಸ್ಥಿತರಿದ್ದರು.

ಸಂಜೆವಾಣಿ

ಬುಧವಾರ 17 ನವೆಂಬರ್ 2010



ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಅಂಕಣಕಾರ ಎಸ್. ಷಡಕ್ಷರಿ ಅವರನ್ನು ಇತ್ತೀಚೆಗೆ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಎನ್ ಆರ್ ಪಂಡಿತಾರಾಧ್ಯ, ಗೌರವ ಕಾರ್ಯದರ್ಶಿ ಡಾ. ವೂಡೇ ಪಿ ಕೃಷ್ಣ, ಮಣಿ ಷಡಕ್ಷರಿ ಹಾಗೂ ಇತರರು ಉಪಸ್ಥಿತರಿದ್ದರು.

ಈ ಸಂಜೆ

ಮಂಗಳವಾರ, 16 ನವೆಂಬರ್, 2010



ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಅಂಕಣಕಾರ ಷಡಕ್ಷರಿ ದಂಪತಿಯನ್ನು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಪಂಡಿತಾರಾಧ್ಯ, ಗೌರವ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಸನ್ಮಾನಿಸಿದರು.

ಉದಯವಾಣಿ
ಬುಧವಾರ | ನವೆಂಬರ್ | 10 | 2010



ಸಂವಾದ

ಶೇಷಾದ್ರಿಪುರಂ ಕಾಲೇಜಿನಲ್ಲಿ ಮಂಗಳವಾರ ಏರ್ಪಡಿಸಿದ್ದ ವಿದ್ಯಾರ್ಥಿನಿಯರ ಮಾನಸಿಕ ಸಮಸ್ಯೆಗಳ ಕುರಿತ ಕಾರ್ಯಾಗಾರದಲ್ಲಿ ಸ್ತ್ರೀ ತಜ್ಞೆ ಡಾ। ಪದ್ಮಿನಿ ಪ್ರಸಾದ್ ವಿದ್ಯಾರ್ಥಿನಿಯರ ಜತೆ ಸಂವಾದ ನಡೆಸಿದರು. ಶಿಕ್ಷಣ ಸಂಸ್ಥೆ ಅಧ್ಯಕ್ಷ ವೂಡೆ ಪಿ. ಕೃಷ್ಣ ಉಪಸ್ಥಿತರಿದ್ದರು.

ಈ ಸಂಜೆ

ಮಂಗಳವಾರ, 09 ನವೆಂಬರ್, 2010



ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ ರಾಷ್ಟ್ರೀಯ ಸೇವಾ ಯೋಜನೆಯಡಿ ನಗರದಲ್ಲಿಂದು ಹಮ್ಮಿಕೊಂಡಿದ್ದ ಬಾಲಕಿಯರ ಹದಿಹರೆಯದ ಸಮಸ್ಯೆಗಳು ಹಾಗೂ ಮಾನಸಿಕ ಒತ್ತಡಗಳು ಕುರಿತ ಒಂದು ದಿನದ ತರಬೇತಿ ಶಿಬಿರದಲ್ಲಿ ಸ್ತ್ರೀ ರೋಗ ತಜ್ಞೆ ಡಾ.ಪದ್ಮಿನಿ ಪ್ರಸಾದ್ ವಿದ್ಯಾರ್ಥಿಗಳ ಜತೆ ಸಂವಾದದಲ್ಲಿ ತೊಡಗಿರುವುದು. ಕಾಲೇಜಿನ ಅಧ್ಯಕ್ಷ ಬಿ.ಎಂ.ಪಾರ್ಥಸಾರಥಿ, ಪ್ರೊಡೆ ಪಿ.ಕೃಷ್ಣ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ವಿಜಯ ಕರ್ನಾಟಕ
ಶನಿವಾರ, 23 ಅಕ್ಟೋಬರ್ 2010, ಬೆಂಗಳೂರು

ಅಮೆರಿಕ ಹಿಂದಿಕ್ಕಲಿರುವ ಭಾರತದ ಮಾಧ್ಯಮ

▪ ವಿಕ ಸುದ್ದಿಲೋಕ ಬೆಂಗಳೂರು

ಮಾಧ್ಯಮ ಕ್ಷೇತ್ರದಲ್ಲಿ 2013ರ ವೇಳೆಗೆ ಅಮೆರಿಕವನ್ನು ಭಾರತ ಹಿಂದಿಕ್ಕಲಿದೆ ಎಂದು ಕರ್ನಾಟಕ ಪತ್ರಿಕೋದ್ಯಮ ಮತ್ತು ಸಂವಹನ ಅಧ್ಯಾಪಕರ ಸಂಘದ ಅಧ್ಯಕ್ಷ ಡಾ. ಬಿ.ಕೆ. ರವಿ ಹೇಳಿದ್ದಾರೆ.

ಕರ್ನಾಟಕ ಮಾಧ್ಯಮ ಅಕಾಡೆಮಿ ಮತ್ತು ಶೇಷಾದ್ರಿಪುರಂ ಕಾಲೇಜು ಆಶ್ರಯದಲ್ಲಿ ಗುರುವಾರ ನಡೆದ 'ಮಾಧ್ಯಮಗಳಲ್ಲಿ ಆಧುನಿಕ ತಂತ್ರಜ್ಞಾನದ ಪಾತ್ರ' ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಮಾಧ್ಯಮ ಕ್ಷೇತ್ರದಲ್ಲಿ ತಂತ್ರಜ್ಞಾನದಿಂದಾಗಿ ಕ್ರಾಂತಿಕಾರಿ ಬದಲಾವಣೆಗಳಾಗಿವೆ. ಮುದ್ರಣ, ದೃಶ್ಯ, ರೇಡಿಯೋ, ಸಿನೆಮಾ ಸೇರಿದಂತೆ ಎಲ್ಲ ಮಾಧ್ಯಮಗಳು ಪೈಪೋಟಿಯಿಂದ ಸಮಾನ ಬೆಳವಣಿಗೆ ಕಾಣುತ್ತಿವೆ ಎಂದರು.

ಭಾರತದಲ್ಲಿ ತಂತ್ರಜ್ಞಾನದ ದುರುಪಯೋಗದಿಂದ ಮಾಧ್ಯಮಗಳು ಅವೈಜ್ಞಾನಿಕ ಬೆಳವಣಿಗೆ ಕಂಡಿವೆ ಎಂದು ವಿಷಾದಿಸಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೆ ಪಿ. ಕೃಷ್ಣ ಆಧುನಿಕ ತಂತ್ರಜ್ಞಾನದಿಂದ ಕನ್ನಡದ ಪತ್ರಿಕೆಗಳು ಅಂತಾರಾಷ್ಟ್ರೀಯ ಮಟ್ಟದ ಗುಣಮಟ್ಟ ಕಾಪಾಡಿಕೊಂಡಿವೆ. ಪೀತ ಪತ್ರಿಕೋದ್ಯಮವೂ ಇಂದು ಕಡಿಮೆಯಾಗಿದೆ ಎಂದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಪ್ರಾಚಾರ್ಯ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯಂ, ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಡಿ.ಪಿ. ಪರಮೇಶ್ವರ, ಕಾರ್ಯದರ್ಶಿ ಡಾ. ಬಿ.ಆರ್. ಮಮತಾ, ಪತ್ರಕರ್ತರಾದ ಅನಿಲ್ ಕುಮಾರ್, ಟಿ.ಎಂ. ಸತೀಶ್ ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ

18-10-2010



ಶೇಷಾದ್ರಿಪುರಂ ಕಾಲೇಜು ಮತ್ತು ಭಾರತೀಯ ಇಂಜನಿಯರುಗಳ ಸಂಸ್ಥೆ ಏರ್ಪಡಿಸಿದ್ದ 'ಭಾರತರತ್ನ ಸರ್ ಎಂ.ವಿಶ್ವೇಶ್ವರಯ್ಯ ಅವರ ಸಂಸ್ಕೃತಿ ಮತ್ತು ಸಮಾಜದ ದೃಷ್ಟಿಕೋನ' ವಿಷಯದ ಕುರಿತ ರಾಷ್ಟ್ರಮಟ್ಟದ ವಿಚಾರಗೋಷ್ಠಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಬಿ.ಆರ್.ಜಯರಾಮರಾಜೇ ಅರಸ್ ಉದ್ಘಾಟಿಸಿದರು. ಇಂಜನಿಯರ್ ಸಂಸ್ಥೆ ಅಧ್ಯಕ್ಷ ಡಾ.ಎಲ್.ವಿ.ಮುರಳಿಕೃಷ್ಣ ರೆಡ್ಡಿ, ಬೆಂಗಳೂರು ವಿವಿ ವಿಶ್ರಾಂತ ಪ್ರಾಧ್ಯಾಪಕ ಡಾ.ಎಂ.ಪಿ.ಚೌಡಯ್ಯ, ಡಿ.ವಿ.ನಾಗಭೂಷಣ, ಡಾ.ವೂಡೆ ಪಿ.ಕೃಷ್ಣ, ಪ್ರಾಚಾರ್ಯ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯಂ, ಸಂಚಾಲಕ ಪ್ರೊ.ಎಂ.ಡಿ.ಲಕ್ಷ್ಮಣ ಉಪಸ್ಥಿತರಿದ್ದರು.

ಪ್ರಜಾವಾಣಿ
ಶುಕ್ರವಾರ 8 ಅಕ್ಟೋಬರ್ 2010




ಶೇಷಾದ್ರಿಪುರಂನ ಸಂಜೆ ಪದವಿ ಕಾಲೇಜು ಹಮ್ಮಿಕೊಂಡಿದ್ದ ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯ ಅವರ ಸಂಸ್ಕೃತಿ ಮತ್ತು ಸಮಾಜದ ದೃಷ್ಟಿಕೋನ ಕುರಿತ ವಿಚಾರಗೋಷ್ಠಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಬಿ.ಆರ್. ಜಯರಾಮರಾಜೇ ಅರಸ್ ಉದ್ಘಾಟಿಸಿದರು. ಡಾ. ಎಲ್.ವಿ. ಮುರಳಿ ಕೃಷ್ಣರೆಡ್ಡಿ, ಬೆಂಗಳೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ. ಎಂ.ಪಿ. ಚೌಡಯ್ಯ, ಡಿ.ವಿ. ನಾಗಭೂಷಣ್, ಡಾ. ವೂಡೇ ಪಿ. ಕೃಷ್ಣ ಇದ್ದಾರೆ.



ಶೇಷಾದ್ರಿಪುರಂ ಕಾಲೇಜು ಹಾಗೂ ಭಾರತೀಯ ಎಂಜಿನಿಯರುಗಳ ಸಂಸ್ಥೆ ಏರ್ಪಡಿಸಿದ್ದ ರಾಷ್ಟ್ರಮಟ್ಟದ ಸರ್ ಎಂವಿ ವಿಚಾರಗೋಷ್ಠಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಬಿ.ಆರ್.ಜಯರಾಮರಾಜೇ ಅರಸ್, ಸಂಸ್ಥೆಯ ಅಧ್ಯಕ್ಷ ಡಾ.ಎಲ್.ವಿ.ಮುರಳಿಕೃಷ್ಣ ರೆಡ್ಡಿ, ವಿಶ್ರಾಂತ ಪ್ರಾಧ್ಯಾಪಕ ಡಾಕ್ಟರ್ ಎಂ.ಪಿ.ಚೌಡಯ್ಯ, ಡಿ.ವಿ.ನಾಗಭೂಷಣ್, ವುಡೇ ಪಿ.ಕೃಷ್ಣ, ನರಹಳ್ಳಿ ಬಾಲಸುಬ್ರಹ್ಮಣ್ಯ, ಎಂ.ಡಿ.ಲಕ್ಷ್ಮಣ್ ಮತ್ತಿತರರು ಹಾಜರಿದ್ದರು.

ಕನ್ನಡಪ್ರಭ, ಗುರುವಾರ, 7 ಅಕ್ಟೋಬರ್ 2010



ಉದ್ಘಾಟನೆ...

ಶೇಷಾದ್ರಿಪುರ ಕಾಲೇಜ್ ಭಾರತೀಯ ಎಂಜಿನಿಯರ್‌ಗಳ ಸಂಸ್ಥೆ ಸಹಯೋಗದೊಂದಿಗೆ ಏರ್ಪಡಿಸಿದ್ದ ವಿಶ್ವೇಶ್ವರಯ್ಯ ಸಂಸ್ಕೃತಿ ಮತ್ತು ಸಮಾಜ ದೃಷ್ಟಿಕೋನದ ವಿಚಾರ ಸಂಕಿರಣವನ್ನು ಬಿ.ಆರ್.ಜಯರಾಮ ರಾಜೇ ಅರಸ್ ಉದ್ಘಾಟಿಸಿದರು. ಡಾ|ಎಲ್.ವಿ.ಮುರಳಿಕೃಷ್ಣ ರೆಡ್ಡಿ, ಡಾ|ಎಂ.ಪಿ.ಚೌಡಯ್ಯ ಇದ್ದರು.

ಪ್ರಜಾವಾಣಿ
ಬುಧವಾರ 6ನೇ ಅಕ್ಟೋಬರ್ 2010

ಹತ್ತು ಸರ್ಕಾರಗಳ ಕೆಲಸ ಮಾಡಿದ ಸರ್. ಎಂ. ವಿ.

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹತ್ತು ಸರ್ಕಾರಗಳು ಮಾಡಲು ಸಾಧ್ಯವಾಗದೇ ಇರುವ ಕೆಲಸವನ್ನು ದಿವಾನರಾಗಿ ಸರ್. ಎಂ. ವಿಶ್ವೇಶ್ವರಯ್ಯ ಅವರು ಸಮರ್ಥವಾಗಿ ನಿರ್ವಹಿಸಿದ್ದಾರೆ' ಎಂದು ಕನ್ನಡ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಬಿ. ಆರ್. ಜಯರಾಮರಾಜೇ ಅರಸ್ ಅವರು ತಿಳಿಸಿದರು.

ಶೇಷಾದ್ರಿಪುರ ಶಿಕ್ಷಣ ದತ್ತಿಯು ಹಾಗೂ ಎಂಜಿನಿಯರುಗಳ ಸಂಸ್ಥೆ ಜಂಟಿಯಾಗಿ ಸರ್ ಎಂ. ವಿಶ್ವೇಶ್ವರಯ್ಯ ಅವರ 150 ನೇ ಜನ್ಮದಿನಾಚರಣೆ ಅಂಗವಾಗಿ 'ಸರ್ ಎಂ.ವಿ. ದೃಷ್ಟಿಯಲ್ಲಿ ಸಂಸ್ಕೃತಿ ಹಾಗೂ ಸಮಾಜ' ಕುರಿತು ಶೇಷಾದ್ರಿಪುರಂ ಕಾಲೇಜಿನಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ರಾಷ್ಟ್ರ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

'ಆಧುನಿಕತೆಯ ಭರದಲ್ಲಿ ಕೊಚ್ಚಿ ಹೋಗುತ್ತಿರುವ ಯುವ ಸಮುದಾಯ ಸರ್ ಎಂ.ವಿ ಅವರ ಮೌಲ್ಯಾಧಾರಿತ ಜೀವನವನ್ನು ಅಳವಡಿಸಿಕೊಂಡು ರಾಷ್ಟ್ರದ ಶಕ್ತಿಯಾಗಿ ಹೊರಹೊಮ್ಮಬೇಕಿದೆ' ಎಂದು ಅಭಿಪ್ರಾಯಪಟ್ಟರು. ಇದೇ ಸಂದರ್ಭದಲ್ಲಿ ಎಂಜಿನಿಯರುಗಳ ಸಂಸ್ಥೆಯ ಮಾಜಿ ಅಧ್ಯಕ್ಷ ಡಾ.ವಿ. ನಾಗಭೂಷಣ್ ಮತ್ತು ನಿವೃತ್ತ ಪ್ರಾಧ್ಯಾಪಕ ಎಂ.ಟಿ. ಚೌಡಯ್ಯ ಅವರನ್ನು ಸನ್ಮಾನಿಸಲಾಯಿತು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ಡಾ. ವೂಡೇ.ಪಿ. ಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ಎಂಜಿನಿಯರುಗಳ ಸಂಸ್ಥೆಯ ರಾಜ್ಯ ಶಾಖೆಯ ಮುಖ್ಯಸ್ಥ ಎಲ್.ವಿ. ಮುರಳಿ ಕೃಷ್ಣ ರೆಡ್ಡಿ, ಕಾಲೇಜಿನ ಪ್ರಾಂಶುಪಾಲ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ದತ್ತಿ ಸಮಿತಿಯ ಮುಖ್ಯಸ್ಥ ಎಂ. ಎಸ್. ನಟರಾಜ್ ಅವರು ಉಪಸ್ಥಿತರಿದ್ದರು.

ಪ್ರಜಾವಾಣಿ
3ನೇ ಅಕ್ಟೋಬರ್ 2010

ಗಾಂಧಿ ಜಯಂತಿಯಂದು ಸಿಎಂ ಯಡಿಯೂರಪ್ಪ ಘೋಷಣೆ

ಗಾಂಧಿ ಭವನ ನಿರ್ಮಾಣಕ್ಕೆ 3 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗಾಂಧಿ ಭವನ ನಿರ್ಮಾಣಕ್ಕೆ ಮೂರು ಕೋಟಿ ರೂಪಾಯಿ ಹಾಗೂ ರಾಜ್ಯದಾದ್ಯಂತ 'ಗಾಂಧಿ ಸ್ಮಾರಕ ನಿಧಿ'ಯ ಸುವರ್ಣ ಮಹೋತ್ಸವ ಸಮಾರಂಭ ಆಚರಣೆಗೆ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಘೋಷಿಸಿದರು.

ನಗರದಲ್ಲಿ ಗಾಂಧಿ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ, ರಾಜ್ಯ ಕಾನೂನು ವಿಶ್ವವಿದ್ಯಾಲಯ, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಮತ್ತಿತರ ಸಂಘಟನೆಗಳ ಸಹಯೋಗದಲ್ಲಿ ಶನಿವಾರ ಏರ್ಪಡಿಸಿದ್ದ ಮಹಾತ್ಮ ಗಾಂಧೀಜಿ ಅವರ 141ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಗಾಂಧಿ ಭವನ ನಿರ್ಮಾಣಕ್ಕೆ ಸಂಬಂಧಪಟ್ಟ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿಕೊಟ್ಟರೆ ಶೀಘ್ರವೇ ಹಣ ಮಂಜೂರು ಮಾಡಲಾಗುವುದು. ಎರ[illegible] ವರ್ಷಗಳಲ್ಲಿಯೇ ಕಟ್ಟಡ ಸಿದ್ಧವಾಗಬೇಕು' ಎ[illegible] ವರು ಸೂಚಿಸಿದರು.

'ಮಹಾತ್ಮ ಗಾಂಧೀಜಿ ರಾಮರಾಜ್ಯದ ಕನಸನ್ನು ಕಂಡಿದ್ದರು. ಅವರ ನಂಬಿಕೆಗೆ ಪೂರಕವಾಗಿಯೇ ಅಯೋಧ್ಯೆ ರಾಮಜನ್ಮಭೂಮಿಗೆ ಸಂಬಂಧಪಟ್ಟಂತೆ ತೀರ್ಪು ಪ್ರಕಟವಾಗಿದೆ. ಈ ತೀರ್ಪು ಗಾಂಧೀಜಿ ಅವರಿಗೆ ಸಲ್ಲಿಸುವ ಗೌರವವಾಗಿದೆ. ಈ ತೀರ್ಪನ್ನು ಸಾರ್ವಜನಿಕರೂ ಸ್ವೀಕರಿಸಿದ್ದಾರೆ' ಎಂದು ಅವರು ಅಭಿಪ್ರಾಯಪಟ್ಟರು.

'ನಾನು ಅಧಿಕಾರಕ್ಕೆ ಬಂದ ದಿನದಿಂದಲೂ ಶಕ್ತಿ ಮೀರಿ ರಾಜ್ಯದ ಅಭಿವೃದ್ಧಿ ಕಾರ್ಯಗಳಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿದ್ದರೆ ಅದನ್ನು ತೊಡಗಿಸಿ ಕೊಂಡಿದ್ದೇನೆ. ಯಾರೇ ಆದರೂ ಸಹಿಸುವುದಿಲ್ಲ' ಎಂದು ಅವರು ಎಚ್ಚರಿಸಿದರು.



ಬೆಂಗಳೂರಿನ ಗಾಂಧಿಭವನದಲ್ಲಿ ಶನಿವಾರ ಏರ್ಪಡಿಸಿದ್ದ ಗಾಂಧಿ ಸ್ಮಾರಕ ನಿಧಿಯ ಸುವರ್ಣ ಮಹೋತ್ಸವವನ್ನು ರಾಜ್ಯಪಾಲ ಎಚ್.ಆರ್. ಭಾರದ್ವಾಜ್ ಉದ್ಘಾಟಿಸಿದರು. ಹಿರಿಯ ಪತ್ರಕರ್ತ ಡಾ. ಪಾಟೀಲ ಪುಟ್ಟಪ್ಪ, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಸಚ್ಚಿದಾನಂದ ಹೆಗಡೆ, ಕಾನೂನು ವಿಶ್ವವಿದ್ಯಾಲಯದ ಕುಲಪತಿ ಡಾ. ಜೆ.ಎಸ್. ಪಾಟೀಲ, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ವೂಡೆ ಪಿ. ಕೃಷ್ಣ ಹಾಗೂ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ಹೊ. ಶ್ರೀನಿವಾಸಯ್ಯ ಚಿತ್ರದಲ್ಲಿದ್ದಾರೆ. -ಪ್ರಜಾವಾಣಿ ಚಿತ್ರ

ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ ಮಾತನಾಡಿ, 'ಇಂದಿನ ವಿದ್ಯಾವಂತ ಯುವಕರು ಬಾಯಿಮುಚ್ಚಿ ಕುಳಿತು ಕೊಂಡಿದ್ದರಿಂದಲೇ ಸಮಾಜದಲ್ಲಿ ಅನ್ಯಾಯ, ಅನಾಚಾರಗಳು ನಡೆಯುತ್ತಿವೆ. ಯುವಕರು ಅನ್ಯಾಯದ ವಿರುದ್ಧ ಪ್ರತಿಭಟಿಸುತ್ತಿಲ್ಲ' ಎಂದು ಅವರು ವಿಷಾದಿಸಿದರು.

ಇಂದು ಸರಳ ಜೀವನ ಮಾಯವಾಗುತ್ತಿದೆ. ಲಾಲ್ ಬಹಾದ್ದೂರ್ ಶಾಸ್ತ್ರಿ ಅವರು ತಮ್ಮ ಸಂಬಳವನ್ನು ಕಡಿಮೆಗೊಳಿಸುವಂತೆ ಸರ್ಕಾರಕ್ಕೆ ಪತ್ರ ಬರೆದಿದ್ದರು. ಆ ಬದ್ಧತೆ ಇಂದಿನ ರಾಜಕಾರಣಿಗಳಲ್ಲಿ ಮಾಯವಾಗಿದೆ ಎಂದು ಅವರು ವಿಷಾದಿಸಿದರು.

ಹಿರಿಯರು ಸರಳ ಜೀವನ ನಡೆಸುವ ಮೂಲಕ ಕಿರಿಯರಿಗೆ ಮೇಲ್ಪಂಕ್ತಿ ಹಾಕಿಕೊಡಬೇಕು ಎಂದು ಅವರು ಸಲಹೆ ನೀಡಿದರು.

ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಕಳೆದ 25 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಡಾ. ಹೊ. ಶ್ರೀನಿವಾಸಯ್ಯ ಅವರನ್ನು ಯಡಿಯೂರಪ್ಪ ಸನ್ಮಾನಿಸಿದರು.

ಸಂಸದ ಡಿ.ಬಿ. ಚಂದ್ರೇಗೌಡ, ಹುಬ್ಬಳ್ಳಿಯಲ್ಲಿರುವ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಡಾ. ಜೆ.ಎಸ್. ಪಾಟೀಲ, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಸಚ್ಚಿದಾನಂದ ಹೆಗಡೆ, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೆ ಪಿ. ಕೃಷ್ಣ, ಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿ ಎಚ್.ಆರ್. ದಾಸೇಗೌಡ ಹಾಗೂ ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಗಾಂಧಿ ಆದರ್ಶ ಪಾಲನೆಗೆ ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಕ್ಷಿಣ ಆಫ್ರಿಕಾದ ಹಿರಿಯ ನಾಯಕ ನೆಲ್ಸನ್ ಮಂಡೇಲಾ ಸೇರಿದಂತೆ ಹಲವಾರು ಆಫ್ರಿಕನ್ ನಾಯಕರೂ ಸೇರಿದಂತೆ ಅಸಂಖ್ಯಾತ ಜನರು ಗಾಂಧೀಜಿ ಅವರ ಆದರ್ಶಗಳನ್ನು ಪಾಲಿಸುವ ಮೂಲಕ ಗಾಂಧಿವಾದಿಗಳಾಗಿದ್ದಾರೆ' ಎಂದು ರಾಜ್ಯಪಾಲ ಎಚ್.ಆರ್.ಭಾರದ್ವಾಜ್ ನುಡಿದರು.

ನಗರದ ಗಾಂಧಿ ಭವನದಲ್ಲಿ ಶನಿವಾರ ಭಾರತ ಸೇವಾದಳ, ರಾಜ್ಯ ಮದ್ಯಪಾನ ಸಂಯಮ ಮಂಡಳಿ, ರಾಜ್ಯ ಕಾನೂನು ವಿಶ್ವವಿದ್ಯಾಲಯ ಹಾಗೂ ನೆಹರು ಯುವಕ ಸಂಘದ ಆಶ್ರಯದಲ್ಲಿ ಗಾಂಧಿ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ಗಾಂಧಿ ಜಯಂತಿಯಲ್ಲಿ ಅವರು ಮಾತನಾಡಿದರು.

'ಗಾಂಧೀಜಿ ಅವರು ಉದಾತ್ತ ವ್ಯಕ್ತಿತ್ವವನ್ನು ಗುರುತಿಸಿದ ವಿಶ್ವಸಂಸ್ಥೆಯು ಅವರ ತತ್ವಗಳನ್ನು ಜಾಗತಿಕ ಮಟ್ಟದಲ್ಲಿ ಪ್ರಸಾರ ಮಾಡುತ್ತಿದೆ. ಅವರ ವಿಚಾರಗಳನ್ನು ಕುರಿತು ಇನ್ನಷ್ಟು ಕೃತಿಗಳನ್ನು ಪ್ರಕಟಿಸಿ ಇಂದಿನ ಯುವ ಪೀಳಿಗೆಗೆ ತಲುಪಿಸಬೇಕು' ಎಂದು ಅವರು ಸಲಹೆ ನೀಡಿದರು.

'ಗಾಂಧೀಜಿ ಅವರ ನೇತೃತ್ವದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯಿಂದಾಗಿಯೇ ನಾವು ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದೇವೆ. ಆದರೆ ಅವರ ಚಿಂತನೆಗಳಿಂದ ವಿಮುಖರಾಗುತ್ತಿರುವ ಬೆಳವಣಿಗೆಯನ್ನು ನಾವು ಕಾಣುತ್ತಿದ್ದೇವೆ' ಎಂದು ರಾಜ್ಯಪಾಲರು ವಿಷಾದಿಸಿದರು.

ಹಲವು ಜಾತಿ, ಮತ, ಧರ್ಮಗಳಿದ್ದರೂ ನಾವು ಭಾರತೀಯರು ಎಂಬ ಭಾವನೆ ಎಲ್ಲರಲ್ಲಿಯೂ ಬೆಳೆಯ ಬೇಕು. 'ವಸುಧೈವ ಕುಟುಂಬಕಂ' (ವಿಶ್ವವೇ ಕುಟುಂಬ) ಎಂಬ ಸಂದೇಶವನ್ನು ಅಳವಡಿಸಿಕೊಳ್ಳ ಬೇಕಾಗಿದೆ ಎಂದು ಅವರು ಸಲಹೆ ನೀಡಿದರು.

ರಾಜ್ಯ ಕಾನೂನು ವಿವಿಯ ಕುಲಪತಿ ಡಾ. ಜೆ.ಎಸ್. ಪಾಟೀಲ ಮಾತನಾಡಿ, 'ಕಾನೂನು ವಿವಿ ವ್ಯಾಪ್ತಿಯಲ್ಲಿ ಬರುವ 92 ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಖಾದಿ ಬಳಕೆ ಕಡ್ಡಾಯ ಮಾಡಲಾಗಿದೆ. ಗಾಂಧಿ ತತ್ವಗಳನ್ನು ಪ್ರಚುರಪಡಿಸಲೂ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ' ಎಂದು ಅವರು ಹೇಳಿದರು.

ಇದೇ ಸಂದರ್ಭದಲ್ಲಿ 'ಜಯಶ್ರೀ ದತ್ತಿ ಪುರಸ್ಕಾರ'ವನ್ನು ಮಂಡ್ಯ ಜಿಲ್ಲೆ ಮದ್ದೂರು ಸರ್ಕಾರಿ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಲೀಲಾ ಅಪ್ಪಾಜಿ ಅವರಿಗೆ ರಾಜ್ಯಪಾಲರು ಪ್ರದಾನ ಮಾಡಿದರು.

ಅಪ್ಪಗೆರೆ ತಿಮ್ಮರಾಜು ಅವರು ಸಂಗೀತ ಸಂಯೋಜಿಸಿದ ಗಾಂಧಿ ಗೀತೆಗಳ ಸಿ.ಡಿ, ಐದು ಪುಸ್ತಕಗಳನ್ನು ಬಿಡುಗಡೆ ಮಾಡಿದರು.

ಗಾಂಧಿ ಸಂದೇಶ ಕುರಿತು ಗಾಂಧಿ ಶಾಂತಿ ಪ್ರತಿಷ್ಠಾನ ನಡೆಸಿದ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಣೆ ಮಾಡಲಾಯಿತು.

ಪ್ರಜಾವಾಣಿ

ಭಾನುವಾರ 3ನೇ ಅಕ್ಟೋಬರ್ 2010

ಗಾಂಧಿ ಜಯಂತಿಯಂದು ಸಿಎಂ ಯಡಿಯೂರಪ್ಪ ಘೋಷಣೆ

ಗಾಂಧಿ ಭವನ ನಿರ್ಮಾಣಕ್ಕೆ 3 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗಾಂಧಿ ಭವನ ನಿರ್ಮಾಣಕ್ಕೆ ಮೂರು ಕೋಟಿ ರೂಪಾಯಿ ಹಾಗೂ ರಾಜ್ಯದಾದ್ಯಂತ 'ಗಾಂಧಿ ಸ್ಮಾರಕ ನಿಧಿ'ಯ ಸುವರ್ಣ ಮಹೋತ್ಸವ ಸಮಾರಂಭ ಆಚರಣೆಗೆ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಘೋಷಿಸಿದರು.

ನಗರದಲ್ಲಿ ಗಾಂಧಿ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ, ರಾಜ್ಯ ಕಾನೂನು ವಿಶ್ವವಿದ್ಯಾಲಯ, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಮತ್ತಿತರ ಸಂಘಟನೆಗಳ ಸಹಯೋಗದಲ್ಲಿ ಶನಿವಾರ ಏರ್ಪಡಿಸಿದ್ದ ಮಹಾತ್ಮ ಗಾಂಧೀಜಿ ಅವರ 141ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಗಾಂಧಿ ಭವನ ನಿರ್ಮಾಣಕ್ಕೆ ಸಂಬಂಧಪಟ್ಟ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿಕೊಟ್ಟರೆ ಶೀಘ್ರವೇ ಹಣ ಮಂಜೂರು ಮಾಡಲಾಗುವುದು. ಎರಡು ವರ್ಷಗಳಲ್ಲಿಯೇ ಕಟ್ಟಡ ಸಿದ್ಧವಾಗಬೇಕು' ಎಂದು ಅವರು ಸೂಚಿಸಿದರು.

'ಮಹಾತ್ಮ ಗಾಂಧೀಜಿ ರಾಮರಾಜ್ಯದ ಕನಸನ್ನು ಕಂಡಿದ್ದರು. ಅವರ ನಂಬಿಕೆಗೆ ಪೂರಕವಾಗಿಯೇ ಅಯೋಧ್ಯೆ ರಾಮಜನ್ಮಭೂಮಿಗೆ ಸಂಬಂಧಪಟ್ಟಂತೆ ತೀರ್ಪು ಪ್ರಕಟವಾಗಿದೆ. ಈ ತೀರ್ಪು ಗಾಂಧೀಜಿ ಅವರಿಗೆ ಸಲ್ಲಿಸುವ ಗೌರವವಾಗಿದೆ. ಈ ತೀರ್ಪನ್ನು ಸಾರ್ವಜನಿಕರೂ ಸ್ವೀಕರಿಸಿದ್ದಾರೆ' ಎಂದು ಅವರು ಅಭಿಪ್ರಾಯಪಟ್ಟರು.

'ನಾನು ಅಧಿಕಾರಕ್ಕೆ ಬಂದ ದಿನದಿಂದಲೂ ಶಕ್ತಿ ಮೀರಿ ರಾಜ್ಯದ ಅಭಿವೃದ್ಧಿ ಕಾರ್ಯಗಳಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿದ್ದರೆ ಅದನ್ನು ತೊಡಗಿಸಿ ಕೊಂಡಿದ್ದೇನೆ. ಯಾರೇ ಆದರೂ ಸಹಿಸುವುದಿಲ್ಲ' ಎಂದು ಅವರು ಎಚ್ಚರಿಸಿದರು.



ಬೆಂಗಳೂರಿನ ಗಾಂಧಿಭವನದಲ್ಲಿ ಶನಿವಾರ ಏರ್ಪಡಿಸಿದ್ದ ಗಾಂಧಿ ಸ್ಮಾರಕ ನಿಧಿಯ ಸುವರ್ಣ ಮಹೋತ್ಸವವನ್ನು ರಾಜ್ಯಪಾಲ ಎಚ್.ಆರ್. ಭಾರದ್ವಾಜ್ ಉದ್ಘಾಟಿಸಿದರು. ಹಿರಿಯ ಪತ್ರಕರ್ತ ಡಾ. ಪಾಟೀಲ ಪುಟ್ಟಪ್ಪ, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಸಚ್ಚಿದಾನಂದ ಹೆಗಡೆ, ಕಾನೂನು ವಿಶ್ವವಿದ್ಯಾಲಯದ ಕುಲಪತಿ ಡಾ. ಜೆ.ಎಸ್. ಪಾಟೀಲ, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ವೂಡೆ ಪಿ. ಕೃಷ್ಣ ಹಾಗೂ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ಹೊ. ಶ್ರೀನಿವಾಸಯ್ಯ ಚಿತ್ರದಲ್ಲಿದ್ದಾರೆ. –ಪ್ರಜಾವಾಣಿ ಚಿತ್ರ

ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ ಮಾತನಾಡಿ, 'ಇಂದಿನ ವಿದ್ಯಾವಂತ ಯುವಕರು ಬಾಯಿಮುಚ್ಚಿ ಕುಳಿತು ಕೊಂಡಿದ್ದರಿಂದಲೇ ಸಮಾಜದಲ್ಲಿ ಅನ್ಯಾಯ, ಅನಾಚಾರಗಳು ನಡೆಯುತ್ತಿವೆ. ಯುವಕರು ಅನ್ಯಾಯದ ವಿರುದ್ಧ ಪ್ರತಿಭಟಿಸುತ್ತಿಲ್ಲ' ಎಂದು ಅವರು ವಿಷಾದಿಸಿದರು.

'ಇಂದು ಸರಳ ಜೀವನ ಮಾಯವಾಗುತ್ತಿದೆ. ಲಾಲ್ ಬಹಾದ್ದೂರ್ ಶಾಸ್ತ್ರಿ ಅವರು ತಮ್ಮ ಸಂಬಳವನ್ನು ಕಡಿಮೆಗೊಳಿಸುವಂತೆ ಸರ್ಕಾರಕ್ಕೆ ಪತ್ರ ಬರೆದಿದ್ದರು. ಆ ಬದ್ಧತೆ ಇಂದಿನ ರಾಜಕಾರಣಿಗಳಲ್ಲಿ ಮಾಯವಾಗಿದೆ' ಎಂದು ಅವರು ವಿಷಾದಿಸಿದರು.

'ಹಿರಿಯರು ಸರಳ ಜೀವನ ನಡೆಸುವ ಮೂಲಕ ಕಿರಿಯರಿಗೆ ಮೇಲ್ಪಂಕ್ತಿ ಹಾಕಿಕೊಡಬೇಕು' ಎಂದು ಅವರು ಸಲಹೆ ನೀಡಿದರು.

ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಕಳೆದ 25 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಡಾ. ಹೊ. ಶ್ರೀನಿವಾಸಯ್ಯ ಅವರನ್ನು ಯಡಿಯೂರಪ್ಪ ಸನ್ಮಾನಿಸಿದರು.

ಸಂಸದ ಡಿ.ಬಿ. ಚಂದ್ರೇಗೌಡ, ಹುಬ್ಬಳ್ಳಿಯಲ್ಲಿರುವ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಡಾ. ಜೆ.ಎಸ್. ಪಾಟೀಲ, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಸಚ್ಚಿದಾನಂದ ಹೆಗಡೆ, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೆ ಪಿ. ಕೃಷ್ಣ, ಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿ ಎಚ್.ಆರ್. ದಾಸೇಗೌಡ ಹಾಗೂ ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಗಾಂಧಿ ಜಯಂತಿ ಅಂಗವಾಗಿ ಗಾಂಧಿಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹೊ.ಶ್ರೀನಿವಾಸಯ್ಯ ಅವರನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸನ್ಮಾನಿಸಿದರು. ಈ ಸಂದರ್ಭದಲ್ಲಿ ನಾಡೋಜ ಪಾಟೀಲ ಪುಟ್ಟಪ್ಪ, ಸಂಸದ ಡಿ.ಬಿ.ಚಂದ್ರೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಸರ್ವಧರ್ಮ ಸಮಾನತೆಯ ನಾಡು

ಬೆಂಗಳೂರು, ಅ. 2: ಜಾತಿ-ಧರ್ಮಗಳೆಂದು ಭೇದ ಮಾಡದೇ ಸರ್ವ ಧರ್ಮಗಳ ಸಮಾನತೆಯ ನಾಡನ್ನು ಕಟ್ಟಲು ರಾಜ್ಯ ಸರ್ಕಾರ ಪ್ರಾಮಾಣಿಕ ಪ್ರಯತ್ನ ನಡೆಸುತ್ತಿದೆ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ.

ಗಾಂಧಿ ಜಯಂತಿ ಅಂಗವಾಗಿ 'ಅಂತಾರಾಷ್ಟ್ರೀಯ ಅಹಿಂಸಾ ದಿನಾಚರಣೆ'ಯಲ್ಲಿ ಪಾಲ್ಗೊಂಡು ಮಾತನಾಡಿ, ಗಾಂಧೀಜಿ, ಬುದ್ಧ, ಬಸವಣ್ಣ ಸೇರಿದಂತೆ ಅನೇಕ ಮಹಾತ್ಮರು ಸಾರಿರುವ ಸಮಾನತೆಯ ತತ್ವದ ಹಾದಿಯಲ್ಲೇ ರಾಜ್ಯ ಸರ್ಕಾರ ಮುನ್ನಡೆಯುತ್ತಿದೆ.

ಇದೇ ಧ್ಯೇಯವನ್ನು ಮುಂದಿಟ್ಟುಕೊಂಡು ರಾಜ್ಯ ಸರ್ಕಾರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ನಿರಂತರವಾಗಿ ಶ್ರಮಿಸುತ್ತಿದೆ. ಪ್ರಸ್ತುತ ದಿನಗಳಲ್ಲಿ ಗಾಂಧೀಜಿಯವರ ಅಹಿಂಸಾ ತತ್ವ ಅತ್ಯಂತ ಅವಶ್ಯಕವಾಗಿದೆ. ಸಮಾಜದ ಒಳಿತಿಗಾಗಿ ಅಹಿಂಸಾ ತತ್ವವನ್ನು ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆಯಬೇಕಾಗಿದೆ. ಗಾಂಧೀಜಿಯವರ ತತ್ವಾದರ್ಶಗಳು ಸಮಾಜದಲ್ಲಿ ಸದ್ಭಾವನೆ ಮೂಡಿಸಲು ಅತ್ಯಂತ ಸಹಾಯಕವಾಗಿದೆ ಎಂದು ಹೇಳಿದರು.

ರಾಮ ರಾಜ್ಯದ ಕನಸನ್ನು ಹೊತ್ತಿದ್ದ ಗಾಂಧೀಜಿಯವರು ದೇಶದ ಜನತೆಯಲ್ಲಿ ವಿನಮ್ರತೆ, ಸದ್ಭಾವನೆ ಮೂಡಿಸುವಲ್ಲಿ ಯಶಸ್ವಿಯಾಗಿದ್ದರು. ಈ ಸದ್ಭಾವನೆಯ ಪ್ರತೀಕ ಎಂಬಂತೆ ಇತ್ತೀಚೆಗೆ ಶ್ರೀ ರಾಮಜನ್ಮ ಭೂಮಿ-ಬಾಬರಿ ಮಸೀದಿ' ಕುರಿತು ಅಲಹಾಬಾದ್ ಹೈಕೋರ್ಟ್ ನೀಡಿರುವ ತೀರ್ಪು ಮತ್ತಷ್ಟು ಗಟ್ಟಿಗೊಳಿಸಿದೆ ಎಂದು ಹೇಳಿದರು.

ಅಯೋಧ್ಯ ಕುರಿತಾದ ಹೊರಬಂದಿರುವ ತೀರ್ಪು ಐತಿಹಾಸಿಕವಾಗಿದ್ದು, ದೇಶದ ಎಲ್ಲ ಸಮುದಾಯದವರಲ್ಲಿ ಸೌಹಾರ್ದತೆ ಮೂಡಿಸಲು ಸಹಕಾರಿಯಾಗಿದೆ. ಚುನಾಯಿತ ಪ್ರತಿನಿಧಿಗಳು ಕೂಡಾ ಗಾಂಧೀಜಿಯವರ ತತ್ವಗಳನ್ನು ಪಾಲನೆ ಮಾಡಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ನಾಡೋಜ ಪಾಟೀಲ್ ಪುಟ್ಟಪ್ಪ ಮಾತನಾಡಿ, ಖಾದಿ ಮತ್ತು ಗ್ರಾಮೋದ್ಯೋಗಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ಈ ನಿಟ್ಟಿನಲ್ಲಿ ಸರ್ಕಾರ ಉದಾರ ಮನಸ್ಸಿನಿಂದ ಮುಂದಾಗಬೇಕು. ಪ್ರಸ್ತುತ ದಿನಮಾನಗಳನ್ನು ಗಮನಿಸಿದಾಗ, ಮಹಾತ್ಮಾ ಗಾಂಧಿಯವರನ್ನು ಮರೆತು ಬಿಟ್ಟಿದ್ದೇವೆ ಎಂದೆನಿಸುತ್ತದೆ. ನ್ಯಾಯ, ನೀತಿ, ಸದ್ವರ್ತನೆ ಕಳೆದು ಹೋಗಿವೆ. ಪುನಃ ಗಾಂಧೀವಾದದತ್ತ ಸಮಾಜ ಮರಳಬೇಕಿದೆ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಕಾನೂನು ವಿ.ವಿ. ಕುಲಪತಿ ಡಾ.ಜೆ.ಎಸ್.ಪಾಟೀಲ್, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಸಚ್ಚಿದಾನಂದ ಹೆಗಡೆ, ಗಾಂಧೀ ಪ್ರತಿಷ್ಠಾನ ಅಧ್ಯಕ್ಷ ಡಾ.ವುಡೆ.ಪಿ.ಕೃಷ್ಣ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಹಿರಿಯ ಗಾಂಧಿವಾದಿ ಡಾ.ಹೊ.ಶ್ರೀನಿವಾಸಯ್ಯ ಅವರನ್ನು ಸನ್ಮಾನಿಸಲಾಯಿತು.

'ಗಾಂಧಿ ಸ್ಮಾರಕ ನಿಧಿ'

'ಗಾಂಧಿ ಸ್ಮಾರಕ ನಿಧಿ' ಸುವರ್ಣ ಮಹೋತ್ಸವ ನಿಮಿತ್ತ ನಿರ್ಮಿಸಲಿರುವ ಭವನಕ್ಕೆ ಮೂರು ಕೋಟಿ ರೂ. ನೀಡುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಘೋಷಿಸಿದ್ದಾರೆ. ಗಾಂಧಿ ಭವನದಲ್ಲಿ ಆಯೋಜಿಸಲಾಗಿದ್ದ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡುತ್ತ ಈ ಭರವಸೆ ನೀಡಿದ ಅವರು, ಸುವರ್ಣ ಮಹೋತ್ಸವದ ಅಂಗವಾಗಿ 'ಗಾಂಧಿ ಸ್ಮಾರಕ ನಿಧಿ' ನಾಡಿನ ಉದ್ದಗಲಕ್ಕೂ ಒಂದು ವರ್ಷ ಕಾಲ ಹಮ್ಮಿಕೊಳ್ಳಲಿರುವ ಕಾರ್ಯಕ್ರಮಗಳಿಗೆ ಒಂದು ಕೋಟಿ ರೂ. ನೀಡುವುದಾಗಿ ಹೇಳಿದರು. ಮಹಾತ್ಮಾ ಗಾಂಧಿ ಅವರ ವಿಚಾರ ಧಾರೆಗಳನ್ನು ಯುವ ಪೀಳಿಗೆಯಲ್ಲಿ ಬಿತ್ತಬೇಕಿದೆ. ಈ ನಿಟ್ಟಿನಲ್ಲಿ ಶಾಲೆ-ಕಾಲೇಜುಗಳಲ್ಲಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳಿಗೆ ಹಣ ನೀಡಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

C ವಿಜಯ ಕರ್ನಾಟಕ
ಭಾನುವಾರ, 3 ಅಕ್ಟೋಬರ್ 2010, ಬೆಂಗಳೂರು

ಸಮಾನತೆಯ ತತ್ತ್ವ ಅನುಸರಿಸುತ್ತಿರುವ ಸರಕಾರ

▪ ವಿಕ ಸುದ್ದಿಲೋಕ ಬೆಂಗಳೂರು

ಗಾಂಧೀಜಿ, ಬುದ್ಧ, ಬಸವಣ್ಣ ಸೇರಿದಂತೆ ಅನೇಕ ಮಹಾತ್ಮರು ಸಾರಿರುವ ಸಮಾನತೆಯ ತತ್ತ್ವದ ಹಾದಿಯಲ್ಲೇ ನಮ್ಮ ಸರಕಾರ ಮುನ್ನಡೆಯುತ್ತಿದೆ ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಹೇಳಿದ್ದಾರೆ.

ನಗರದ ಗಾಂಧಿ ಭವನದಲ್ಲಿ ಗಾಂಧಿ ಜಯಂತಿ ಅಂಗವಾಗಿ ಶನಿವಾರ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಅಹಿಂಸಾ ದಿನಾಚರಣೆಯಲ್ಲಿ ಮಾತನಾಡಿದರು.

ಪ್ರಸ್ತುತ ಸಮಾಜಕ್ಕೆ ಗಾಂಧೀಜಿಯವರ ಅಹಿಂಸಾ ತತ್ತ್ವದ ಅಗತ್ಯವಿದೆ. ಸಮಾಜದ ಹಿತಕ್ಕಾಗಿ ಪ್ರತಿಯೊಬ್ಬರೂ ಈ ತತ್ತ್ವವನ್ನು ಮೈಗೂಡಿಸಿಕೊಳ್ಳಬೇಕು. ರಾಮರಾಜ್ಯದ ಕನಸು ಕಂಡಿದ್ದ ಗಾಂಧೀಜಿ, ದೇಶದ ಜನತೆಯಲ್ಲಿ ಸದ್ಭಾವನೆ ಮೂಡಿಸುವಲ್ಲಿ ಯಶಸ್ವಿಯಾಗಿದ್ದರು. ಈ ಸದ್ಭಾವನೆಯನ್ನು ಇತ್ತೀಚೆಗೆ ಬಂದ ಅಯೋಧ್ಯೆ ಹೈಕೋರ್ಟ್ ತೀರ್ಪು ಮತ್ತಷ್ಟು ಗಟ್ಟಿಗೊಳಿಸಿದೆ. ಈ ನಿಟ್ಟಿನಲ್ಲಿ ನ್ಯಾಯಾಲಯ ಐತಿಹಾಸಿಕ ತೀರ್ಪು ನೀಡಿದೆ ಎಂದು ಹೇಳಿದರು.



ನಗರದ ಗಾಂಧಿ ಭವನದಲ್ಲಿ ಗಾಂಧಿ ಜಯಂತಿ ಅಂಗವಾಗಿ ಶನಿವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪಾಟೀಲ ಪುಟ್ಟಪ್ಪ ಅವರೊಡನೆ ಸಂಭಾಷಣೆಯಲ್ಲಿ ನಿರತರಾಗಿರುವ ಮುಖ್ಯಮಂತ್ರಿ ಯಡಿಯೂರಪ್ಪ.

ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ, ಖಾದಿ ಮತ್ತು ಗ್ರಾಮೋದ್ಯೋಗಕ್ಕೆ ಹೆಚ್ಚಿನ ಆದ್ಯತೆ ನೀಡಲು ಸರಕಾರ ಮುಂದಾಗಬೇಕು. ಇತ್ತೀಚಿನ ದಿನಗಳಲ್ಲಿ ನಾವು ಗಾಂಧಿಯನ್ನು ಮರೆಯುತ್ತಿದ್ದೇವೆ. ಯುವ ಜನತೆಗೆ ಗಾಂಧೀಜಿ ತತ್ತ್ವ ಸಿದ್ಧಾಂತಗಳು ಬೇಡವಾಗಿವೆ ಎಂದು ವಿಷಾದ ವ್ಯಕ್ತಪಡಿಸಿದರು.

ಕಾನೂನು ವಿವಿ ಕುಲಪತಿ ಡಾ. ಜೆ.ಎಸ್. ಪಾಟೀಲ್, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಸಚ್ಚಿದಾನಂದ ಹೆಗಡೆ, ಗಾಂಧಿ ಪ್ರತಿಷ್ಠಾನ ಅಧ್ಯಕ್ಷ ಡಾ. ವೂಡೆ.ಪಿ. ಕೃಷ್ಣ, ಗಾಂಧಿವಾದಿ ಹೊ. ಶ್ರೀನಿವಾಸಯ್ಯ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಸದ್ಭಾವನಾ ಜಾಥ ನಡೆಸಲಾಯಿತು.

₹3 ಕೋಟಿ ಅನುದಾನ

ಗಾಂಧಿ ಸ್ಮಾರಕ ನಿಧಿಯ ಸುವರ್ಣ ಮಹೋತ್ಸವದ ನೆನಪಿಗಾಗಿ ನಿರ್ಮಿಸುವ ಸುವರ್ಣ ಮಹೋತ್ಸವ ಭವನಕ್ಕೆ ಮೂರು ಕೋಟಿ ರೂ. ಅನುದಾನ ನೀಡುವುದಾಗಿ ಮುಖ್ಯಮಂತ್ರಿ ಯಡಿಯೂರಪ್ಪ ತಿಳಿಸಿದ್ದಾರೆ. ಸುವರ್ಣ ಮಹೋತ್ಸವ ಭವನ ನಿರ್ಮಾಣ ಯೋಜನೆ ನೀಲನಕ್ಷೆ ಸಿದ್ಧಪಡಿಸಿ ಸರಕಾರಕ್ಕೆ ನೀಡಿದರೆ ಅದಕ್ಕೆ ಕೂಡಲೇ ಅನುದಾನ ಬಿಡುಗಡೆ ಮಾಡಲಾಗುವುದು. ಸುವರ್ಣ ಮಹೋತ್ಸವದ ಅಂಗವಾಗಿ ಗಾಂಧಿ ಸ್ಮಾರಕ ನಿಧಿ ನಾಡಿನೆಲ್ಲೆಡೆ ಒಂದು ವರ್ಷ ನಡೆಸುವ ಕಾರ್ಯಕ್ರಮಗಳಿಗೂ ಒಂದು ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗುವುದು ಎಂದರು.

ವಿಜಯ ಕರ್ನಾಟಕ
ಭಾನುವಾರ, 3 ಅಕ್ಟೋಬರ್ 2010, ಬೆಂಗಳೂರು

ಎಲ್ಲ ವರ್ಗಕ್ಕೂ ಸಮಾಧಾನ ತಂದ ಅಯೋಧ್ಯೆ ತೀರ್ಪು

■ ವಿಕ ಸುದ್ದಿಲೋಕ ಬೆಂಗಳೂರು


ಅಯೋಧ್ಯೆ ವಿವಾದ ಕುರಿತು ಅಲಹಾಬಾದ್ ಹೈಕೋರ್ಟ್ ನೀಡಿರುವ ತೀರ್ಪು ದೇಶದ ಎಲ್ಲ ವರ್ಗದವರಿಗೂ ಸಮಾಧಾನವುಂಟು ಮಾಡಿದೆ ಎಂದು ರಾಜ್ಯಪಾಲ ಎಚ್.ಆರ್. ಭಾರದ್ವಾಜ್ ಅಭಿಪ್ರಾಯಪಟ್ಟಿದ್ದಾರೆ.

ನಗರದ ಗಾಂಧಿ ಭವನದಲ್ಲಿ ಗಾಂಧಿ ಸ್ಮಾರಕ ನಿಧಿ ಮತ್ತು ಮದ್ಯಪಾನ ಸಂಯಮ ಮಂಡಳಿ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ಗಾಂಧಿ ಜಯಂತಿ ಹಾಗೂ ಗಾಂಧಿ ಫೋಟೊ ಪ್ರದರ್ಶನ ಮತ್ತು ಖಾದಿ ವಸ್ತು ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು.

ಅಯೋಧ್ಯೆ ತೀರ್ಪಿನ ಬಗ್ಗೆ ಯಾರಿಗಾದರೂ ಅಸಮಾಧಾನವಿದ್ದರೆ ಅದನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಬಹುದು. ಹೀಗಿರುವಾಗ ಅಯೋಧ್ಯೆ ತೀರ್ಪಿನ ಹಿನ್ನೆಲೆಯಲ್ಲಿ ಯಾರೂ ಸಮಾಜದಲ್ಲಿ ಶಾಂತಿ ಭಂಗಗೊಳಿಸುವ ಕೆಲಸಕ್ಕೆ ಕೈಹಾಕಬಾರದು. ನಮ್ಮ ದೇಶದ ಜನತೆ ಶಾಂತಿ, ಸೌಹಾರ್ದಕ್ಕೆ ಹೆಚ್ಚಿನ ಗೌರವ ನೀಡುವವರು ಎಂಬುದನ್ನು ಈ ತೀರ್ಪಿನಿಂದ ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಹಾತ್ಮಾ ಗಾಂಧೀಜಿ ಕುರಿತಂತೆ ಎಲ್ಲ ಭಾಷೆಗಳಲ್ಲಿಯೂ ಹೆಚ್ಚಿನ ಸಾಹಿತ್ಯ ಕೃತಿಗಳು ಹೊರಬರಬೇಕು. ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ ಗಾಂಧೀಜಿ ಅವರು ಯಾವತ್ತೂ ಕೊಟ್ಟ ಮಾತಿಗೆ ತಪ್ಪಿ ನಡೆದುಕೊಂಡಿರಲಿಲ್ಲ. ಗಾಂಧೀಜಿಯವರ ಹೋರಾಟ, ತತ್ವ, ಸಿದ್ಧಾಂತಗಳು ಇಡೀ ವಿಶ್ವಕ್ಕೆ ಮಾದರಿ. ಹೀಗಾಗಿ ಅವರು ವಿಶ್ವ ನಾಯಕರಾಗಿ ಬೆಳೆದರು ಎಂದು ಅಭಿಪ್ರಾಯಪಟ್ಟರು. ಇತ್ತೀಚಿನ ದಿನಗಳಲ್ಲಿ ದೇಶದಲ್ಲಿ ಜಾತಿ ವಾದ ಹೆಚ್ಚುತ್ತಿದ್ದು ಕೋಮು ಸಾಮರಸ್ಯಕ್ಕೆ ಅಡ್ಡಿಯಾಗುತ್ತಿದೆ. ಹೀಗಿರುವಾಗ ಗಾಂಧೀಜಿ ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಗಾಂಧಿವಾದಿ ಡಾ.ಹೊ. ಶ್ರೀನಿವಾಸಯ್ಯ, ಕಾನೂನು ವಿವಿ ಕುಲಪತಿ ಡಾ.ಜೆ.ಎಸ್. ಪಾಟೀಲ್, ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಸಚ್ಚಿದಾನಂದ ಹೆಗಡೆ ಉಪಸ್ಥಿತರಿದ್ದರು.



ನಗರದ ಗಾಂಧಿ ಭವನದಲ್ಲಿ ಶನಿವಾರ ಆಯೋಜಿಸಿದ ಕಾರ್ಯಕ್ರಮಕ್ಕೆ ರಾಜ್ಯಪಾಲ ಭಾರದ್ವಾಜ್ ಚಾಲನೆ ನೀಡಿದರು. ಡಾ. ಶ್ರೀನಿವಾಸಯ್ಯ, ಪಾಟೀಲ್ ಪ್ರಭೃತಿ ಉಪಸ್ಥಿತರಿದ್ದರು.

ಹೊಸ ದಿಗಂತ

2010 ಅಕ್ಟೋಬರ್ 03, ಭಾನುವಾರ

ರಾಜ್ಯಪಾಲ ಎಚ್.ಆರ್. ಭಾರದ್ವಾಜ್

ಗಾಂಧೀಜಿ ಜಗತ್ತಿನ ಜನನಾಯಕ

ಬೆಂಗಳೂರು: ದೇಶದ ಎಲ್ಲಾ ಭಾಷೆಗಳಲ್ಲೂ ರಾಷ್ಟ್ರಪಿತ ಮಹಾತ್ಮ ಗಾಂಧಿ ಕುರಿತ ಸಾಹಿತ್ಯ ಹೆಚ್ಚಾಗಿ ಬರಬೇಕು ಎಂದು ರಾಜ್ಯಪಾಲ ಎಚ್.ಆರ್. ಭಾರದ್ವಾಜ್ ಮನವಿ ಮಾಡಿದರು.

ಶನಿವಾರ ನಗರದ ಗಾಂಧಿ ಭವನದಲ್ಲಿ ಗಾಂಧಿ ಸ್ಮಾರಕ ನಿಧಿ ಗಾಂಧೀ ಜಯಂತಿ ಅಂಗವಾಗಿ ಆಯೋಜಿಸಿದ್ದ ಗಾಂಧೀಜಿಯವರ ಫೋಟೋಗಳ ಪ್ರದರ್ಶನ, ಸಾಹಿತ್ಯ ಪ್ರದರ್ಶನ ಮತ್ತು ಖಾದಿ ವಸ್ತ್ರ ಪ್ರದರ್ಶನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ ಗಾಂಧೀಜಿ ಅವರು ನುಡಿದಂತೆ ನಡೆಯುತ್ತಿದ್ದರು. ವರ್ಣಬೇಧ ನೀತಿಯ ವಿರುದ್ಧ ಹೋರಾಡಿದ ಅವರು ಭಾರತ ಮಾತ್ರವಲ್ಲದೇ ಇಡೀ ಪ್ರಪಂಚದ ಜನರ ನಾಯಕರಾಗಿ ಹೊರಹೊಮ್ಮಿದರು ಎಂದರು.

ಜಾತಿವಾದ, ಸಮಾನತೆ, ಸಹೋದರತೆ, ಸೌಹಾರ್ದತೆಯ ಸಂದೇಶವನ್ನು ಗಾಂಧೀಜಿ ಸಾರಿದರು. ಆದರೆ ಇತ್ತೀಚೆಗೆ ಜಾತಿವಾದ ಹೆಚ್ಚುತ್ತಿದ್ದು, ಕೋಮು ಸೌಹಾರ್ದತೆ ದೂರವಾಗುತ್ತಿದೆ. ಅವರ ತತ್ವಗಳನ್ನು ಪಾಲಿಸಿದಾಗ ಮಾತ್ರ ಅವರಿಗೆ ಗೌರವ ಸಲ್ಲಿಸಿದಂತಾಗುತ್ತದೆ ಎಂದರು.

ಗಾಂಧೀಜಿಯವರನ್ನು ಅನುಸರಿಸಲು ಹೊರಟಿರುವ ಇಂದಿನ ಯುವ ಪೀಳಿಗೆ ಅವರ ಕುರಿತು ಇನ್ನೂ ಹೆಚ್ಚಾಗಿ ತಿಳಿಯುವಂತಾಗಬೇಕು ಎಂದು ಅವರು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ಹಿರಿಯ ಗಾಂಧಿವಾದಿ ಡಾ. ಹೊ. ಶ್ರೀನಿವಾಸಯ್ಯ, ಕಾನೂನು ವಿಶ್ವವಿದ್ಯಾಲಯ ಕುಲಪತಿ ಡಾ. ಜೆ.ಎಸ್. ಪಾಟೀಲ್, ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಪಟ್ಟಾಭಿರಾಮ ಹೆಗಡೆ ಅನೇಕ ಗಣ್ಯರು ಉಪಸ್ಥಿತರಿದ್ದರು.



ನಗರದ ಗಾಂಧಿ ಭವನದಲ್ಲಿ ನಡೆದ ಗಾಂಧೀ ಜಯಂತಿ ಕಾರ್ಯಕ್ರಮವನ್ನು ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ಉದ್ಘಾಟಿಸಿದರು. ಗಾಂಧೀವಾದಿ ಡಾ. ಎಚ್. ಶ್ರೀನಿವಾಸಯ್ಯ ಮತ್ತಿತರರು ಇದ್ದರು.

ಶಾಂತಿ ಕಾಪಾಡಲು ಕರೆ

ಬೆಂಗಳೂರು: ಅಯೋಧ್ಯೆ ತೀರ್ಪಿನ ಹಿನ್ನೆಲೆಯಲ್ಲಿ ರಾಜ್ಯದ ಜನತೆ ಶಾಂತಿ ಕಾಪಾಡಿಕೊಂಡು ಬಂದಿದ್ದು ಇದೇ ರೀತಿ ಮುಂದುವರೆಯಬೇಕು ಎಂದು ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ಕೋರಿದರು.

ಶನಿವಾರ ನಗರದ ಗಾಂಧಿ ಭವನದಲ್ಲಿ ಗಾಂಧಿ ಸ್ಮಾರಕ ನಿಧಿ ಗಾಂಧೀ ಜಯಂತಿ ಅಂಗವಾಗಿ ಆಯೋಜಿಸಿದ್ದ ಗಾಂಧೀಜಿಯವರ ಫೋಟೋಗಳ ಪ್ರದರ್ಶನ, ಸಾಹಿತ್ಯ ಪ್ರದರ್ಶನ ಮತ್ತು ಖಾದಿ ವಸ್ತ್ರ ಪ್ರದರ್ಶನವನ್ನು ಉದ್ಘಾಟಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಲಹಾಬಾದ್ ಹೈಕೋರ್ಟ್ ನೀಡಿರುವ ತೀರ್ಪನ್ನು ಎಲ್ಲ ವರ್ಗದ ಜನರು ಗೌರವಿಸಬೇಕು. ಒಂದು ವೇಳೆ ಅಸಮಾಧಾನವಿದ್ದಲ್ಲಿ ಸುಪ್ರೀಂ ಕೋರ್ಟ್‌ಗೆ ಹೋಗಲು ಅವಕಾಶ ಇದೆ ಎಂದು ಹೇಳಿದರು.

ಗಾಂಧೀ ಜಯಂತಿ ಆಗಿರುವುದರಿಂದ ಕೆಡಿಬಿ ಹಗರಣ ಸೇರಿದಂತೆ ಯಾವುದೇ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡುವುದಿಲ್ಲ ಎಂದರು.

ಉದಯವಾಣಿ


ಭಾನುವಾರ 3 ಅಕ್ಟೋಬರ್ 2010

ಗಾಂಧಿ ಸಾಹಿತ್ಯ ಎಲ್ಲ ಭಾಷೆಗಳಲ್ಲೂ ಬರಬೇಕು: ರಾಜ್ಯಪಾಲ

ಬೆಂಗಳೂರು, ಅ. 2: ಗಾಂಧಿ ಸಾಹಿತ್ಯವನ್ನು ಪ್ರತಿಯೊಬ್ಬರೂ ಅಧ್ಯಯನ ಮಾಡುವ ಅಗತ್ಯವಿದ್ದು, ಈ ಸಾಹಿತ್ಯ ಎಲ್ಲ ಭಾಷೆಗಳಲ್ಲೂ ಬರಬೇಕು ಎಂದು ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ಶನಿವಾರ ಹೇಳಿದರು.

ಮಹಾತ್ಮ ಗಾಂಧೀಜಿ ಅವರ 141ನೇ ಹುಟ್ಟುಹಬ್ಬ ಅಂತಾರಾಷ್ಟ್ರೀಯ ಅಹಿಂಸಾ ದಿನಾಚರಣೆ, ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಸುವರ್ಣ ಮಹೋತ್ಸವ, ಖಾದಿ ವಸ್ತ್ರ, ಗಾಂಧೀ ಭಾವಚಿತ್ರ ಹಾಗೂ ಗಾಂಧೀ ಸಾಹಿತ್ಯ ಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿ, ಗಾಂಧಿ ಸಾಹಿತ್ಯ ಸರ್ವಕಾಲಕ್ಕೂ ಸಲ್ಲುವಂತಿದ್ದು, ಪ್ರಸ್ತುತ ಸಂದರ್ಭದಲ್ಲಿ ಎಲ್ಲ ಭಾಷೆಗಳಲ್ಲೂ ಹೊರಬರಬೇಕಾದ ಅನಿವಾರ್ಯತೆ ಇದೆ ಎಂದು ತಿಳಿಸಿದರು.

ಗಾಂಧೀಜಿ ಹೇಳಿದಂತೆ ನಡೆದುಕೊಳ್ಳುವುದು ಅಗತ್ಯವಿದೆ. ದಕ್ಷಿಣ ಆಫ್ರಿಕಾದಲ್ಲಿ ಇದ್ದ ಕಪ್ಪು-ಬಿಳುಪು ವರ್ಣಭೇದ ನೀತಿಯನ್ನು ತೀವ್ರವಾಗಿ ಖಂಡಿಸಿದ ಗಾಂಧೀಜಿ ಭಾರತ ಮಾತ್ರವಲ್ಲ ವಿಶ್ವ ನಾಗರಿಕ ಎಂದು ಹೇಳಿದರು. ದೇಶದಲ್ಲಿ ವಿವಿಧ ಸಂಸ್ಕೃತಿ-ಪರಂಪರೆ ಇದೆ. ಆದರೆ ಇತ್ತೀಚೆಗೆ ಜಾತಿವಾದ ಹೆಚ್ಚುತ್ತಿದೆ. ಸೌಹಾರ್ದಯುತವಾಗಿ ಇರುವುದೇ ನಮ್ಮ ಮಂತ್ರವಾಗಬೇಕು. ಗಾಂಧಿ ತತ್ವ ಇದಲ್ಲದಕ್ಕೂ ಪೂರಕ. ಅದನ್ನು ಪಾಲಿಸಿದರೆ ಮಾತ್ರ ನಾವು ಅವರಿಗೆ ಗೌರವ ಸಲ್ಲಿಸಿದಂತಾಗುತ್ತದೆ ಎಂದು ಭಾರದ್ವಾಜ್ ಹೇಳಿದರು.



ಮಹಾತ್ಮ ಗಾಂಧಿ ಜಯಂತಿ ಅಂಗವಾಗಿ ಶನಿವಾರ ಬೆಂಗಳೂರಿನ ಗಾಂಧಿಭವನದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮವನ್ನು ರಾಜ್ಯಪಾಲ ಎಚ್ ಆರ್ ಭಾರದ್ವಾಜ್ ಉದ್ಘಾಟಿಸಿದರು. ಗಾಂಧಿವಾದಿ ಡಾ। ಹೊ. ಶ್ರೀನಿವಾಸಯ್ಯ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಮದ್ದೂರಿನ ಡಾ। ಲೀಲಾ ಅಪ್ಪಾಜಿ ಮತ್ತು ರುಕ್ಮವ್ವ ಕನಕಪ್ಪ ನಾಗನೂರ ಅವರಿಗೆ ಜಯಶ್ರೀ ಮತ್ತು ನರಸಿಂಹ ದಾಬಡೆ ದತ್ತಿ ಪುರಸ್ಕಾರ ನೀಡಿ ಗೌರವಿಸಲಾಯಿತು. ಹಿರಿಯ ಪತ್ರಕರ್ತ ಡಾ। ಪಾಟೀಲ ಪುಟ್ಟಪ್ಪ, ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ। ಹೊ. ಶ್ರೀನಿವಾಸಯ್ಯ, ಗಾಂಧೀ ಶಾಂತಿ ಪ್ರತಿಷ್ಠಾನ ಅಧ್ಯಕ್ಷ ಡಾ। ಡಬ್ಲ್ಯೂ. ಪಿ. ಕೃಷ್ಣ ಉಪಸ್ಥಿತರಿದ್ದರು.

ಇತರ ವಿಷಯಗಳ ಬಗ್ಗೆ ಮಾತನಾಡುವುದಿಲ್ಲ: ನಾನು ಈ ದಿನ ಬಾಪೂಜಿ ಕುರಿತು ಮಾತ್ರ ಮಾತನಾಡುತ್ತೇನೆ. ಇಡೀ ದಿನ ಅವರ ತತ್ವಾದರ್ಶಗಳನ್ನು ಸ್ಮರಿಸುತ್ತೇನೆಯೇ ಹೊರತು ಇತರ ಯಾವ ವಿಷಯಗಳ ಬಗ್ಗೆಯೂ ಮಾತನಾಡುವುದಿಲ್ಲ ಎಂದು ಇದೇ ಸಂದರ್ಭದಲ್ಲಿ ಸುದ್ದಿಗಾರರಿಗೆ ಹೇಳಿದರು.

ಆಡಳಿತ ವ್ಯವಸ್ಥೆಯಲ್ಲಿ ಆಗುತ್ತಿರುವ ಕೆಲವು ಗೊಂದಲಗಳಿಗೆ ಸಂಬಂಧಿಸಿದಂತೆ ಅವರು ಈ ರೀತಿ ಹೇಳುವ ಮೂಲಕ ಯಾವುದೇ ಪ್ರತಿಕ್ರಿಯೆ ನೀಡಲು ನಿರಾಕರಿಸಿದರು. ಆದರೆ, ಅಯೋಧ್ಯೆ ತೀರ್ಪಿನ ವಿಚಾರ ಪ್ರಸ್ತಾಪಿಸಿದಾಗ, ಬಿಟ್ಟು ಬಾಳುವುದೇ ನಮ್ಮ ಸಂಸ್ಕೃತಿ ಎಂಬುದನ್ನು ತೀರ್ಪು ಎತ್ತಿ ಹಿಡಿದಿದೆ. ತೀರ್ಪಿನಲ್ಲಿ ಅಸಮಾಧಾನ, ಅನುಮಾನ ಇದ್ದವರು ಉನ್ನತಮಟ್ಟದಲ್ಲಿ ಪರಿಹಾರ ಕಂಡುಕೊಳ್ಳಬಹುದು ಎಂದರು.

ಪ್ರಜಾವಾಣಿ
ಭಾನುವಾರ 3ನೇ ಅಕ್ಟೋಬರ್ 2010

ಗಾಂಧಿ ಜಯಂತಿಯಂದು ಸಿಎಂ ಯಡಿಯೂರಪ್ಪ ಘೋಷಣೆ

ಗಾಂಧಿ ಭವನ ನಿರ್ಮಾಣಕ್ಕೆ 3 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗಾಂಧಿ ಭವನ ನಿರ್ಮಾಣಕ್ಕೆ ಮೂರು ಕೋಟಿ ರೂಪಾಯಿ ಹಾಗೂ ರಾಜ್ಯದಾದ್ಯಂತ 'ಗಾಂಧಿ ಸ್ಮಾರಕ ನಿಧಿ'ಯ ಸುವರ್ಣ ಮಹೋತ್ಸವ ಸಮಾರಂಭ ಆಚರಣೆಗೆ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಘೋಷಿಸಿದರು.

ನಗರದಲ್ಲಿ ಗಾಂಧಿ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ, ರಾಜ್ಯ ಕಾನೂನು ವಿಶ್ವವಿದ್ಯಾಲಯ, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಮತ್ತಿತರ ಸಂಘಟನೆಗಳ ಸಹಯೋಗದಲ್ಲಿ ಶನಿವಾರ ಏರ್ಪಡಿಸಿದ್ದ ಮಹಾತ್ಮ ಗಾಂಧೀಜಿ ಅವರ 141ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಗಾಂಧಿ ಭವನ ನಿರ್ಮಾಣಕ್ಕೆ ಸಂಬಂಧಪಟ್ಟ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿಕೊಟ್ಟರೆ ಶೀಘ್ರವೇ ಹಣ ಮಂಜೂರು ಮಾಡಲಾಗುವುದು. ಎರಡು ವರ್ಷಗಳಲ್ಲಿಯೇ ಕಟ್ಟಡ ಸಿದ್ಧವಾಗಬೇಕು' ಎಂದು ಅವರು ಸೂಚಿಸಿದರು.

'ಮಹಾತ್ಮ ಗಾಂಧೀಜಿ ರಾಮರಾಜ್ಯದ ಕನಸನ್ನು ಕಂಡಿದ್ದರು. ಅವರ ನಂಬಿಕೆಗೆ ಪೂರಕವಾಗಿಯೇ ಅಯೋಧ್ಯೆ ರಾಮಜನ್ಮಭೂಮಿಗೆ ಸಂಬಂಧ ಪಟ್ಟಂತೆ ತೀರ್ಪು ಪ್ರಕಟವಾಗಿದೆ. ಈ ತೀರ್ಪು ಗಾಂಧೀಜಿ ಅವರಿಗೆ ಸಲ್ಲಿಸುವ ಗೌರವವಾಗಿದೆ. ಈ ತೀರ್ಪನ್ನು ಸಾರ್ವಜನಿಕರೂ ಸ್ವೀಕರಿಸಿದ್ದಾರೆ' ಎಂದು ಅವರು ಅಭಿಪ್ರಾಯಪಟ್ಟರು.

'ನಾನು ಅಧಿಕಾರಕ್ಕೆ ಬಂದ ದಿನದಿಂದಲೂ ಶಕ್ತಿ ಮೀರಿ ರಾಜ್ಯದ ಅಭಿವೃದ್ಧಿ ಕಾರ್ಯಗಳಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿದ್ದರೆ ಅದನ್ನು ತೊಡಗಿಸಿ ಕೊಂಡಿದ್ದೇನೆ. ಯಾರೇ ಆದರೂ ಸಹಿಸುವುದಿಲ್ಲ' ಎಂದು ಅವರು ಎಚ್ಚರಿಸಿದರು.



ಬೆಂಗಳೂರಿನ ಗಾಂಧಿಭವನದಲ್ಲಿ ಶನಿವಾರ ಏರ್ಪಡಿಸಿದ್ದ ಗಾಂಧಿ ಸ್ಮಾರಕ ನಿಧಿಯ ಸುವರ್ಣ ಮಹೋತ್ಸವವನ್ನು ರಾಜ್ಯಪಾಲ ಎಚ್.ಆರ್. ಭಾರದ್ವಾಜ್ ಉದ್ಘಾಟಿಸಿದರು. ಹಿರಿಯ ಪತ್ರಕರ್ತ ಡಾ. ಪಾಟೀಲ ಪುಟ್ಟಪ್ಪ, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಸಚ್ಚಿದಾನಂದ ಹೆಗಡೆ, ಕಾನೂನು ವಿಶ್ವವಿದ್ಯಾಲಯದ ಕುಲಪತಿ ಡಾ. ಜೆ.ಎಸ್. ಪಾಟೀಲ, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ವೂಡೆ ಪಿ. ಕೃಷ್ಣ ಹಾಗೂ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ಹೊ. ಶ್ರೀನಿವಾಸಯ್ಯ ಚಿತ್ರದಲ್ಲಿದ್ದಾರೆ. -ಪ್ರಜಾವಾಣಿ ಚಿತ್ರ

ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ ಮಾತನಾಡಿ, 'ಇಂದಿನ ವಿದ್ಯಾವಂತ ಯುವಕರು ಬಾಯಿಮುಚ್ಚಿ ಕುಳಿತು ಕೊಂಡಿದ್ದರಿಂದಲೇ ಸಮಾಜದಲ್ಲಿ ಅನ್ಯಾಯ, ಅನಾಚಾರಗಳು ನಡೆಯುತ್ತಿವೆ. ಯುವಕರು ಅನ್ಯಾಯದ ವಿರುದ್ಧ ಪ್ರತಿಭಟಿಸುತ್ತಿಲ್ಲ' ಎಂದು ಅವರು ವಿಷಾದಿಸಿದರು.

ಇಂದು ಸರಳ ಜೀವನ ಮಾಯವಾಗುತ್ತಿದೆ. ಲಾಲ್ ಬಹಾದ್ದೂರ್ ಶಾಸ್ತ್ರಿ ಅವರು ತಮ್ಮ ಸಂಬಳವನ್ನು ಕಡಿಮೆಗೊಳಿಸುವಂತೆ ಸರ್ಕಾರಕ್ಕೆ ಪತ್ರ ಬರೆದಿದ್ದರು. ಆ ಬದ್ಧತೆ ಇಂದಿನ ರಾಜಕಾರಣಿಗಳಲ್ಲಿ ಮಾಯವಾಗಿದೆ ಎಂದು ಅವರು ವಿಷಾದಿಸಿದರು.

ಹಿರಿಯರು ಸರಳ ಜೀವನ ನಡೆಸುವ ಮೂಲಕ ಕಿರಿಯರಿಗೆ ಮೇಲ್ಪಂಕ್ತಿ ಹಾಕಿಕೊಡಬೇಕು ಎಂದು ಅವರು ಸಲಹೆ ನೀಡಿದರು.

ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಕಳೆದ 25 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಡಾ. ಹೊ. ಶ್ರೀನಿವಾಸಯ್ಯ ಅವರನ್ನು ಯಡಿಯೂರಪ್ಪ ಸನ್ಮಾನಿಸಿದರು.

ಸಂಸದ ಡಿ.ಬಿ. ಚಂದ್ರೇಗೌಡ, ಹುಬ್ಬಳ್ಳಿಯಲ್ಲಿರುವ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಡಾ. ಜೆ.ಎಸ್. ಪಾಟೀಲ, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಸಚ್ಚಿದಾನಂದ ಹೆಗಡೆ, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೆ ಪಿ. ಕೃಷ್ಣ, ಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿ ಎಚ್.ಆರ್. ದಾಸೇಗೌಡ ಹಾಗೂ ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಹುಬ್ಬಳ್ಳಿಯಲ್ಲೊಂದು ಸಾಬರಮತಿ ಆಶ್ರಮ

■ ಮುಂದಿನ ಗಾಂಧಿ ಜಯಂತಿ ಒಳಗಾಗಿ ಆಶ್ರಮ ಪೂರ್ಣ ■ ಕಾಮಗಾರಿಗೆ ₹50ರಿಂದ 60 ಲಕ್ಷ ವೆಚ್ಚ

• ಶ್ರೀಕಾಂತ್ ಭಟ್


ಬೆಂಗಳೂರು: 'ಭಾರತೀಯ ಬೇರು ಮತ್ತು ಜಾಗತಿಕ ಮೇರು...' ಎಂಬ ಪಂಚ್ ಲೈನ್‌ನೊಂದಿಗೆ ರಾಜ್ಯದಲ್ಲಿ ಹೆಚ್ಚೆಚ್ಚು ಪ್ರಚಲಿತಕ್ಕೆ ಬರುತ್ತಿರುವ ನೂತನ ಕರ್ನಾಟಕ ಕಾನೂನು ವಿಶ್ವವಿದ್ಯಾಲಯ ತನ್ನ ಹುಬ್ಬಳ್ಳಿಯಲ್ಲಿರುವ ಕ್ಯಾಂಪಸ್‌ನಲ್ಲಿ 'ಸಾಬರಮತಿ' ಆಶ್ರಮ ಸ್ಥಾಪಿಸಲು ಮುಂದಾಗಿದೆ.

ಇದಕ್ಕೆ ನೀಲನಕ್ಷೆ ಸಿದ್ಧವಾಗಿದ್ದು, ಮುಂದಿನ ಗಾಂಧಿ ಜಯಂತಿ ಒಳಗಾಗಿ ಆಶ್ರಮ ನಿರ್ಮಾಣ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ. ಈ ಕುರಿತು 'ಕನ್ನಡಪ್ರಭ'ಕ್ಕೆ ಮಾಹಿತಿ ನೀಡಿದ ವಿವಿ ಕುಲಪತಿ ಡಾ|ಜಯಪ್ರಕಾಶ ರೆಡ್ಡಿ ಸಣ್ಣಬಸವನಗೌಡ ಪಾಟೀಲ್, ಸಾಬರಮತಿ ಕಲ್ಪನೆ ಇಟ್ಟುಕೊಂಡು ಆಶ್ರಮ ನಿರ್ಮಿಸಲಾಗುತ್ತದೆ ಎಂದು ವಿವರಿಸಿದರು.

ಹಲವು ವಿವಿಗಳಲ್ಲಿ ಗಾಂಧಿ ಅಧ್ಯಯನ ಕೇಂದ್ರಗಳಿವೆ. ಆದರೆ ಈ ವಿಷಯದಲ್ಲಿ ನಾವು ಸ್ವಲ್ಪ ಭಿನ್ನ. ಗಾಂಧಿ ವಾಸವಿದ್ದ ಆಶ್ರಮದ ರೀತಿಯಲ್ಲೇ ಆಶ್ರಮವನ್ನು ಹುಬ್ಬಳ್ಳಿಯಲ್ಲಿರುವ ಕ್ಯಾಂಪಸ್‌ನಲ್ಲಿ ನಿರ್ಮಿಸಲು ಉದ್ದೇಶಿಸಿದ್ದೇವೆ. ಇದರ ವೆಚ್ಚ ₹ 50 ರಿಂದ 60 ಲಕ್ಷ ಆಗಬಹುದೆಂದು ಅಂದಾಜಿಸಲಾಗಿದೆ ಎಂದರು.

ಇದರ ವಿಶೇಷತೆ ಎಂದರೆ, 20 ಕೊಠಡಿಗಳನ್ನು ನಿರ್ಮಿಸಲಾಗುತ್ತದೆ. ಅವುಗಳಲ್ಲಿ ಪ್ರತಿ ಕೊಠಡಿಯಲ್ಲಿ ಚರಕ ಇರುತ್ತದೆ. ಪ್ರಮುಖವಾಗಿ ದೇಸಿ ಸಾಮಾನುಗಳೇ ಅಲ್ಲಿರುತ್ತವೆ. ಅಡ್ಡಣಿಗೆ, ಚಿಡಿಚಾಪೆ ಸೇರಿದಂತೆ ಸ್ವದೇಶಿ ಸಾಮಗ್ರಿಗಳೇ ಇರುತ್ತವೆ.

ಜೊತೆಗೆ ಗಾಂಧಿಯವರ ಅಪರೂಪದ 180 ಫೋಟೋಗಳಿದ್ದು, ಮ್ಯೂಸಿಯಂ ರೀತಿ ಇದು ಇರುತ್ತದೆ. ಗಾಂಧಿ ಅನುಯಾಯಿಗಳಿಗೆ, ಅತಿಥಿಗಳಿಗೆ ಇಲ್ಲಿ ಉಳಿದುಕೊಳ್ಳಲು ಉಚಿತ ಸೌಕರ್ಯ ಮಾಡಿಕೊಡಲಾಗುತ್ತದೆ ಎಂದು ಕುಲಪತಿಗಳು ವಿವರಿಸಿದರು.



ಇದು ಗುಜರಾತ್‌ನ ಸಾಬರಮತಿ ಆಶ್ರಮ.

■ ಸ್ವದೇಶಿ ಘಟಿಕೋತ್ಸವ: ಈ ಕಲ್ಪನೆಯಲ್ಲಿ 2011-12ನೇ ಸಾಲಿನ ವಿವಿಯ ಘಟಿಕೋತ್ಸವವನ್ನು ರೂಪಿಸಲು ಉದ್ದೇಶಿಸಲಾಗಿದೆ. ಗಾಂಧಿ ಟೋಪಿ, ಕೇಸರಿ, ಬಿಳಿ, ಹಸಿರಿನ ಅಂಚಿನ ಖಾದಿ ಶಲ್ಯ ಘಟಿಕೋತ್ಸವದ ವಿಶೇಷವಾಗಿರುತ್ತದೆ. ಅತಿಥಿಗಳೂ ಗೌನ್ ತೊಡದೇ ಖಾದಿ ಟೋಪಿ ಮತ್ತು ಶಲ್ಯ ತೊಟ್ಟಿರುತ್ತಾರೆ. ಅಲ್ಲೇನಿದ್ದರೂ ಸರಳ ಘಟಿಕೋತ್ಸವ ಆಚರಿಸಬೇಕೆಂಬ ಕಲ್ಪನೆ ಎಂದು ಅವರು ತಿಳಿಸಿದರು.

■ ಕಾಲೇಜಲ್ಲೂ ಖಾದಿ: ಈಗಾಗಲೇ ಕಾನೂನು ವಿವಿ ತನ್ನ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳ ವಿದ್ಯಾರ್ಥಿಗಳು ವಾರದಲ್ಲಿ ಒಂದು ದಿನ ಖಾದಿ ತೊಟ್ಟು ಬರಬೇಕೆಂದು ಸೂಚನೆ ನೀಡಿದೆ. ಅದರ ಅಂಗವಾಗಿಯೇ 92 ಕಾಲೇಜುಗಳ ಪೈಕಿ 50 ಕಾಲೇಜುಗಳ ವಿದ್ಯಾರ್ಥಿಗಳು ಪ್ರತಿ ಸೋಮವಾರ ಖಾದಿ ತೊಟ್ಟು ಕಾಲೇಜಿಗೆ ಬರುತ್ತಾರೆ ಎಂದು ಪಾಟೀಲರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ವಿದ್ಯಾರ್ಥಿಗಳಿಗೆ ಸುಲಭವಾಗಿ ಖಾದಿ ಲಭ್ಯವಾಗಬೇಕೆಂಬ ಕಾರಣಕ್ಕಾಗಿ ಖಾದಿ ಫೆಡರೇಷನ್‌ನೊಂದಿಗೆ ವಿವಿ ಒಡಂಬಡಿಕೆ ಮಾಡಿಕೊಂಡಿದೆ.

■ ಬೆಂಗಳೂರಲ್ಲಿ ಖಾದಿ ಖದರ್: ಗಾಂಧಿ ತತ್ವ ಅಳವಡಿಸಿಕೊಳ್ಳುವಲ್ಲಿ ಬೆಂಗಳೂರಿನ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ಸಮೂಹ ವಿಶೇಷ ಪ್ರಯತ್ನಕ್ಕೆ ತನ್ನನ್ನು ತಾನು ತೊಡಗಿಸಿಕೊಂಡಿದೆ.

ಬೆಂಗಳೂರಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳಿಗೆ ಒಂದು ಉತ್ತಮ ಸ್ಥಾನವಿದೆ. ಇಲ್ಲಿ 24 ವಿದ್ಯಾಸಂಸ್ಥೆಗಳಿವೆ. ಪ್ರಾಥಮಿಕ, ಪ್ರೌಢ, ಪದವಿ ಪೂರ್ವ, ಕಾಲೇಜು ಹಂತದವರೆಗೆ ಎಲ್ಲಾ ವಿಭಾಗದಲ್ಲೂ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದು, ಒಟ್ಟಾರೆ 20 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಭ್ಯಾಸ ನಡೆಸುತ್ತಿದ್ದಾರೆ.

■ ಈಗ ಏನಾಗಿದೆ?: 'ನಾನು ಗಾಂಧಿ ಶಾಂತಿ ಪ್ರತಿಷ್ಠಾನದಲ್ಲಿದ್ದೇನೆ. ಅಲ್ಲಿಂದ ಪ್ರಭಾವಿತನಾಗಿ ನಮ್ಮ ಶಾಲೆಯ ಮಕ್ಕಳಲ್ಲಿ ಏಕೆ ಖಾದಿ ಬಗ್ಗೆ ಜಾಗೃತಿ ಮೂಡಿಸಬಾರದು ಎಂದು ನಿರ್ಧರಿಸಿದೆ. ಅದರ ಪ್ರಯತ್ನವಾಗಿ ಪ್ರಾಥಮಿಕ ಮತ್ತು ಪ್ರೌಢ ಹಂತದಲ್ಲಿ ವಾರದಲ್ಲಿ ಎರಡು ದಿನ ಮಕ್ಕಳು ಖಾದಿ ಬಟ್ಟೆ ತೊಟ್ಟು ಬರುತ್ತಾರೆ' ಹೀಗೆಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ|ವುಡೇ ಪಿ.ಕೃಷ್ಣ ವಿವರಿಸುತ್ತಾರೆ.


ಸದ್ಯ 3 ಸಾವಿರ ಮಕ್ಕಳು ಬುಧವಾರ ಮತ್ತು ಶನಿವಾರ ಬಿಳಿ ಬಟ್ಟೆಯ ಸಮವಸ್ತ್ರದ ಬದಲಾಗಿ ಖಾದಿ ಬಟ್ಟೆ ತೊಟ್ಟು ಬರುತ್ತಿದ್ದಾರೆ.

ಗಾಂಧಿ ಪ್ರತಿಷ್ಠಾನ ಈ ಪ್ರಯತ್ನದಲ್ಲಿ ಸಾಕಷ್ಟು ಸಹಕಾರ ನೀಡಿತು. 20 ಟೈಲರ್‌ಗಳು ಶಾಲೆಗೇ ಬಂದು ಬಟ್ಟೆಯನ್ನು ಹೊಲಿದುಕೊಟ್ಟರು. ಇದಕ್ಕಿಂತ ಮುಖ್ಯವಾಗಿ ಪೋಷಕರು ತಮ್ಮ ಈ ಆಸಕ್ತಿಯನ್ನು ಬೆಂಬಲಿಸಿದರು ಎಂದು ಕೃಷ್ಣ ವಿವರಿಸಿದರು.

ಖಾದಿ ಬಗ್ಗೆ ಇಲ್ಲಿನ ಸಿಬ್ಬಂದಿಗೂ ವಿಶೇಷ ಆಸಕ್ತಿ. ಜೊತೆಗೆ ಕಾಲೇಜು ಮಟ್ಟದಲ್ಲಿ ಖಾದಿಯನ್ನು ಪ್ರಸಿದ್ಧಿಗೊಳಿಸುವ ಪ್ರಯತ್ನದಲ್ಲಿ ನಡೆಸಿದ ಖಾದಿ ಉತ್ಸವಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಹೆಣ್ಣು ಮಕ್ಕಳು ವಿಶೇಷ ಆಸಕ್ತಿಯಿಂದ ಖಾದಿ ಬಟ್ಟೆ ಖರೀದಿಸಿದ್ದರೆಂದು ಕಾಲೇಜಿನ ಹಿರಿಯ ಸಿಬ್ಬಂದಿ ತಿಳಿಸುತ್ತಾರೆ.

■ ಉದ್ದೇಶ ಒಂದೇ: ದೇಸಿ ಬಟ್ಟೆ ಬಗ್ಗೆ ಪ್ರೀತಿ ಹುಟ್ಟಬೇಕೆಂಬುದು ನಮ್ಮ ಉದ್ದೇಶ. ಗಾಂಧೀಜಿಯವರ ಆಸೆಯಂತೆ ಖಾದಿ ಉದ್ಯಮ ಬೆಳೆಯಬೇಕು. ನಾವು ನಿರಂತರವಾಗಿ ಖಾದಿ ಖರೀದಿಸುವುದರಿಂದ ಗ್ರಾಮೀಣ ಖಾದಿ ಉದ್ಯಮ ಸಬಲವಾಗುತ್ತದೆ ಎಂಬುದು ಕೃಷ್ಣ ಅವರ ಅಭಿಲಾಷೆ.

ಮುಸ್ಸಂಜೆ 02.10.2010,ಶನಿವಾರ



ಗಾಂಧಿ ಜಯಂತಿ ಪ್ರಯುಕ್ತ ಬೆಂಗಳೂರಿನ ಗಾಂಧಿ ಭವನದಲ್ಲಿ ಗಾಂಧಿ ಶಾಂತಿ ಪ್ರತಿಷ್ಠಾನದಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಮಹಾತ್ಮ ಗಾಂಧೀಜಿಯವರ ಪ್ರತಿಮೆಗೆ ಗೌರವ ಸಲ್ಲಿಸಿದರು

ಸರ್ ಎಂವಿ ಅವರ ಕರ್ತವ್ಯ ಪ್ರಜ್ಞೆ ಮೈಗೂಡಿಸಿಕೊಳ್ಳಲು ಕರೆ

ಯಶಸ್ಸು ಬೇಕಾದರೆ ದುಡಿಮೆ ಅಗತ್ಯ

ಬೆಂಗಳೂರು, ಸೆ.28-ಶಿಸ್ತುಬದ್ಧ ವ್ಯಕ್ತಿತ್ವಕ್ಕೆ ಹೆಸರುವಾಸಿಯಾದ ಸರ್ ಎಂ.ವಿಶ್ವೇಶ್ವರಯ್ಯ ಅವರ ಕರ್ತವ್ಯ ಪ್ರಜ್ಞೆ ಹಾಗೂ ಕಾರ್ಯಕ್ಷಮತೆಯನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಇಂದಿನ ದಿನಗಳಲ್ಲಿ ಅತ್ಯವಶ್ಯಕವಾಗಿದೆ ಎಂದು ಕೆಪಿಸಿಎಲ್ ವ್ಯವಸ್ಥಾಪಕ ಡಾ.ಜಿ ಅಷ್ಟನಾರಾಯಣ ನುಡಿದರು.

ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು ಮತ್ತು ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸರ್ ಎಂವಿ ಅವರ ಜನ್ಮ ದಿನಾಚರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಮನಸ್ಸಿದ್ದಲ್ಲಿ ಮಾರ್ಗವಿದೆ, ಪರಿಶ್ರಮಕ್ಕೆ ಪೂರಕವಾದದ್ದು ಯಾವುದೂ ಇಲ್ಲ ಎನ್ನುತ್ತಾ ಸರ್ ಎಂ. ವಿಶ್ವೇಶ್ವರಯ್ಯರೊಂದಿಗಿನ ಒಡನಾಟದ ಕ್ಷಣಗಳನ್ನು ಸಭಿಕರೊಂದಿಗೆ ಹಂಚಿಕೊಂಡರು.

ದುಡಿಮೆಯೊಂದೇ ಯಶಸ್ಸಿನ ದಾರಿ ಎನ್ನುವ ಪ್ರೇರಣೆ ಮಾತುಗಳನ್ನಾಡಿದರು. ಸಂಸ್ಥೆಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ ಮಾತನಾಡಿ, ಧೈರ್ಯವೇ ಸರ್ವತ್ರ ಸಾಧನ, ವಿದ್ಯಾರ್ಥಿಗಳು ಧೈರ್ಯವನ್ನು ಮೈಗೂಡಿಸಿಕೊಂಡು ಸ್ಪರ್ಧೆಗಳಲ್ಲಿ ಭಾಗವಹಿಸಿ ತಮ್ಮ ಮನೋಸ್ಥೈರ್ಯವನ್ನು ಹೆಚ್ಚಿಸಿಕೊಳ್ಳಬೇಕೆಂದು



ಹಾಗೂ ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ಗಮನ ಹರಿಸಬೇಕೆಂದರು.

ಕಾರ್ಯಕ್ರಮದಲ್ಲಿ ಶಿಕ್ಷಣ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ-ಪಿ.ಕೃಷ್ಣ ಕಾರ್ಯಕ್ರಮದ ಆಶಯ ನುಡಿಗಳನ್ನಾಡಿದರು.

ಧರ್ಮದರ್ಶಿ ಶ್ರೀ ವೀರಭದ್ರಯ್ಯ, ತೀರ್ಪುಗಾರರಾಗಿ ವೀರಭದ್ರಪ್ಪ ಡಾ.ನಾಗರಾಜ, ಡಾ.ಎಂ.ಡಿ. ರಾಜನ್ ಭಾಗವಹಿಸಿದ್ದರು. ಪ್ರಾಂಶುಪಾಲ ಪ್ರೊ.ಎಂ.ಆರ್.ಶ್ರೀನಿವಾಸ್ ಸ್ವಾಗತಿಸಿದರೆ, ಉಪನ್ಯಾಸಕಿ ಕಾಂಚನಾ ಕಾರ್ಯಕ್ರಮ ನಿರೂಪಿಸಿ, ಪಂಪಾದೇವಿ ವಂದಿಸಿದರು.

ವಿವಿಧ ಕಾಲೇಜಿನ ಸ್ಪರ್ಧಿಗಳು, ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್‌ನ ಪದಾಧಿಕಾರಿಗಳು, ಬೋಧಕ-ಬೋಧಕೇತರರು ಹಾಜರಿದ್ದರು.

ಕನ್ನಡಪ್ರಭ, ಸೋಮವಾರ, 27 ಸೆಪ್ಟೆಂಬರ್ 2010

ಉದ್ಘಾಟನೆ...

ಶೇಷಾದ್ರಿಪುರಂ ಪ.ಪೂ ಕಾಲೇಜು ಸರ್ ಎಂ.ವಿ ಸ್ಮರಣಾರ್ಥ ಹಮ್ಮಿಕೊಂಡಿದ್ದ ಉಪನ್ಯಾಸವನ್ನು ಕೆಪಿಸಿಎಲ್ ವ್ಯವಸ್ಥಾಪಕ ಡಾ| ಜಿ.ಅಶ್ವತ್ಥ ನಾರಾಯಣ್ ಉದ್ಘಾಟಿಸಿದರು. ಡಾ| ವೂಡೇ.ಪಿ. ಕೃಷ್ಣ, ವೀರಭದ್ರಯ್ಯ, ಡಾ|ನಾಗರಾಜ, ಡಾ|ಎಂ.ಡಿ.ರಾಜನ್ ಇದ್ದರು.



ಉದಯವಾಣಿ
ಸೆಪ್ಟೆಂಬರ್ 26, 2010

ಸರ್ ಎಂ. ವಿಶ್ವೇಶ್ವರಯ್ಯ ಅಭಿವೃದ್ಧಿಯ ಹರಿಕಾರ




ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಶೇಷಾದ್ರಿಪುರಂ ಪದವಿಪೂರ್ವ ಕಾಲೇಜು ಮತ್ತು ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಯುಕ್ತ ಆಶ್ರಯದಲ್ಲಿ ಭಾರತರತ್ನ ಸರ್.ಎಂ. ವಿಶ್ವೇಶ್ವರಯ್ಯನವರ 150ನೇ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ 'ಕರ್ನಾಟಕದ ಅಭಿವೃದ್ಧಿಯ ಹರಿಕಾರ ಸರ್. ಎಂ. ವಿಶ್ವೇಶ್ವರಯ್ಯ' ಎನ್ನುವ ವಿಷಯದ ಬಗ್ಗೆ ಭಾಷಣ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಸಮಾರಂಭದ ಮುಖ್ಯ ಅತಿಥಿ ಕೆಪಿಸಿಎಲ್‌ನ ವ್ಯವಸ್ಥಾಪಕ ಡಾ. ಜಿ. ಅಶ್ವತ್ಥನಾರಾಯಣ ವಿದ್ಯಾರ್ಥಿಗಳನ್ನುದ್ದೇಶಿಸಿ ಸರ್ ಎಂ. ವಿಶ್ವೇಶ್ವರಯ್ಯ ಶಿಸ್ತುಬದ್ಧ ವ್ಯಕ್ತಿತ್ವಕ್ಕೆ ಹೆಸರಾದವರು, ಕರ್ತವ್ಯಪ್ರಜ್ಞೆ ಹಾಗೂ ಕಾರ್ಯಕ್ಷಮತೆಯನ್ನು ಮೈಗೂಡಿಸಿಕೊಂಡವರು. ವಿದ್ಯಾರ್ಥಿಗಳು ಸರ್ ಎಂ. ವಿಶ್ವೇಶ್ವರಯ್ಯನವರ ಶಿಸ್ತುಬದ್ಧತೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಇಂದಿನ ದಿನಗಳಲ್ಲಿ ಅತ್ಯವಶ್ಯಕವಾಗಿದೆ ಎಂದು ಹೇಳಿ ಮನಸ್ಸಿದ್ದಲ್ಲಿ ಮಾರ್ಗವಿದೆ. ಪರಿಶ್ರಮಕ್ಕೆ ಪೂರಕವಾದದ್ದು ಯಾವುದೂ ಇಲ್ಲ ಎನ್ನುತ್ತಾ ಸರ್ ಎಂ. ವಿಶ್ವೇಶ್ವರಯ್ಯರೊಂದಿಗಿನ ಒಡನಾಟದ ಕ್ಷಣಗಳನ್ನು ಹಂಚಿಕೊಂಡರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ ಅವರು ಧೈರ್ಯವೇ ಸರ್ವತ್ರ ಸಾಧನ, ವಿದ್ಯಾರ್ಥಿಗಳು ಧೈರ್ಯವನ್ನು ಮೈಗೂಡಿಸಿಕೊಂಡು ಇಂತಹ ಸ್ಪರ್ಧೆಗಳಲ್ಲಿ ಭಾಗವಹಿಸಿ ತಮ್ಮ ಮನೋಸ್ಥೈರ್ಯವನ್ನು ಹೆಚ್ಚಿಸಿಕೊಳ್ಳಬೇಕೆಂದು ಹಾಗೂ ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ಗಮನ ಹರಿಸಬೇಕೆಂದರು. ಕಾರ್ಯಕ್ರಮದಲ್ಲಿ ಶಿಕ್ಷಣ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಆಶಯ ನುಡಿಗಳನ್ನಾಡಿದರು. ಡಾ. ವೂಡೇ ಪಿ. ಕೃಷ್ಣರವರು ಕಾರ್ಯಕ್ರಮದ ಆಶಯ ನುಡಿಗಳನ್ನಾಡಿದರು. ಧರ್ಮದರ್ಶಿ ವೀರಭದ್ರಯ್ಯ, ತೀರ್ಪುಗಾರರಾಗಿ ವೀರಭದ್ರಪ್ಪ, ಡಾ. ನಾಗರಾಜ, ಡಾ. ಎಂ.ಡಿ. ರಾಜನ್ ಭಾಗವಹಿಸಿದ್ದರು. ಪ್ರಾಂಶುಪಾಲ ಪ್ರೊ. ಎಂ.ಆರ್. ಶ್ರೀನಿವಾಸ್ ಸ್ವಾಗತಿಸಿದರು. ಬೆಂಗಳೂರಿನ ವಿವಿಧ ಕಾಲೇಜಿನ ಸ್ಪರ್ಧಿಗಳು, ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್‌ನ ಪದಾಧಿಕಾರಿಗಳು ಬೋಧಕ ಬೋಧಕೇತರರು ಹಾಜರಿದ್ದರು.

ಸಂಜೆವಾಣಿ

ಶನಿವಾರ 25 ಸೆಪ್ಟೆಂಬರ್ 2010



ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನಲ್ಲಿ ಬಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯನವರ 150ನೇ ಜನ್ಮದಿನಾಚರಣೆ ಪ್ರಯುಕ್ತ ಆಯೋಜಿಸಲಾಗಿದ್ದ ಅಂತರ ಕಾಲೇಜು ಬಾಷಣ ಸ್ಪರ್ಧೆಯನ್ನು ಶಿಕ್ಷಣ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಅವರು ಉದ್ಘಾಟಿಸಿದರು. ಧರ್ಮದರ್ಶಿಗಳಾದ ವೀರಬದ್ರಯ್ಯ, ವೀರಬದ್ರಪ್ಪ, ಡಾ. ಅಶ್ವತ್ಥನಾರಾಯಣ, ಡಾ. ನಾಗರಾಜ, ಪ್ರೊ. ಆರ್. ಶ್ರೀನಿವಾಸ್ ಚಿತ್ರದಲ್ಲಿದ್ದಾರೆ.

ವಿಜಯ ಕರ್ನಾಟಕ
ಮಂಗಳವಾರ, 21 ಸೆಪ್ಟೆಂಬರ್ 2010, ಬೆಂಗಳೂರು

ಪದಾಧಿಕಾರಿಗಳ ಆಯ್ಕೆ

ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾಗಿ ಡಾ. ವೂಡೆ ಪಿ. ಕೃಷ್ಣ ಉಪಾಧ್ಯಕ್ಷರಾಗಿ ಎಸ್.ಜಿ. ಸುಶೀಲಮ್ಮ, ಕಾರ್ಯದರ್ಶಿಯಾಗಿ ಸಿದ್ಧಾರ್ಥ ಶರ್ಮ ಮತ್ತು ಕೋಶಾಧ್ಯಕ್ಷರಾಗಿ ಎಚ್. ರಾಮಪ್ಪ ಆಯ್ಕೆಯಾಗಿದ್ದಾರೆ.

ಕನ್ನಡಿಗರು

ಸೆಪ್ಟೆಂಬರ್ ೧೬, ೨೦೧೦

ಬಿ.ಎಂ.ಶ್ರೀ ಪ್ರತಿಷ್ಠಾನದ ಸಂಸ್ಥಾಪಕ ಎಂ.ವಿ.ಸೀ. ಅವರು ವಿಶಿಷ್ಟ ವ್ಯಕ್ತಿತ್ವದವರಾಗಿದರು

-ಎನ್. ಬಸವರಾಧ್ಯ

ಪ್ರೊ||ಎಂ.ವಿ. ಸೀತಾರಾಮಯ್ಯನವರು ಸಾಹಿತ್ಯ, ಸಂಶೋಧನೆ, ಸಂಗೀತ, ಚಿತ್ರಕಲೆ ಇತ್ಯಾದಿ ಹಲವುಗಳಲ್ಲಿ ಆಸಕ್ತಿಗಳನ್ನು ರೂಢಿಸಿಕೊಂಡವರಾಗಿದ್ದು, ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಅಧ್ಯಾಪಕರೂ ಆಗಿದ್ದ ವಿಶಿಷ್ಟ ವ್ಯಕ್ತಿತ್ವದವರಾಗಿದ್ದರು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರೂ, ನಿಘಂಟು ತಜ್ಞರೂ ಆದ ಎನ್. ಬಸವರಾಧ್ಯ ಅಭಿಪ್ರಾಯಪಟ್ಟರು.

ಎಂ.ವಿ.ಸೀ. ಶತಮಾನೋತ್ಸವ ಸಮಿತಿ, ಬಿ.ಎಂ.ಶ್ರೀ ಪ್ರತಿಷ್ಠಾನಗಳು ಶೇಷಾದ್ರಿಪುರ ಕಾಲೇಜಿನ ಸ್ನಾತಕೋತ್ತರ ಕನ್ನಡ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಸೆಪ್ಟೆಂಬರ್ ೪ ರಂದು ಆಯೋಜಿಸಿದ್ದ "ಹಸ್ತಪ್ರತಿ ಅಧ್ಯಯನ ಶಾಸ್ತ್ರ" ಎಂ.ವೀ.ಸೀ. ಶತಮಾನೋತ್ಸವ ರಾಷ್ಟ್ರೀಯ ವಿಚಾರಗೋಷ್ಠಿಯ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಎಂ.ವಿ.ಸೀ ಅವರು ಬಿ.ಎಂ.ಶ್ರೀ ಅವರ ಅಚ್ಚುಮೆಚ್ಚಿನ ಶಿಷ್ಯರಾಗಿದ್ದು, ಅವರಿಗೆ ಗುರುಕಾಣಿಕೆಯ ರೂಪದಲ್ಲಿ ಬಿ.ಎಂ.ಶ್ರೀ ಪ್ರತಿಷ್ಠಾನವನ್ನು ಸ್ಥಾಪಿಸಿ, ಅದರ ಮೂಲಕ ಹಸ್ತಪ್ರತಿಗಳ ಸಂರಕ್ಷಣೆಗೆ ಆದ್ಯ ಗಮನ ನೀಡಿದವರಲ್ಲಿನೆ ನಡೆಸಿಹೋಗಿದ್ದ "ಹಸ್ತಪ್ರತಿ ಶಾಸ್ತ್ರ"ಕ್ಕೆ ಚಾಲನೆ ನೀಡಿದರು. ವಿಶ್ವವಿದ್ಯಾಲಯಗಳಲ್ಲಿ ಕಾಣೆಯಾಗುತ್ತಿದ್ದ ಗ್ರಂಥ ಸಂಪಾದನೆ ಶಾಸ್ತ್ರಕ್ಕೆ ಜೀವ ತುಂಬಿದವರು ಎಂದು ವಿವರಿಸಿದ ಬಸವರಾಧ್ಯ ಅವರು ಬಿ.ಎಂ.ಶ್ರೀ ಪ್ರತಿಷ್ಠಾನವನ್ನು ತಮ್ಮ ಮನೆಯಲ್ಲಿ ಪ್ರಾರಂಭಿಸಿ, ಇದೀಗ ಮೂರು ಅಂತಸ್ತಿನ ಸ್ವಂತ ಕಟ್ಟಡ ಹೊಂದುವ ಹಂತಕ್ಕೆ ಅದು ಬೆಳೆಯುವುದಕ್ಕೆ ಭದ್ರ ಬುನಾದಿ ಹಾಕಿದುದನ್ನು ಸ್ಮರಿಸಿದರು.

ಪ್ರಾಚೀನ ಹಸ್ತಪ್ರತಿ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ||ಮಲ್ಲೇಪುರಂ ಜಿ. ವೆಂಕಟೇಶ ಅವರು ಹಸ್ತಪ್ರತಿಗಳು ಸಮುದಾಯದ ಆಸ್ತಿಯಾಗಿದ್ದು, ಅವುಗಳನ್ನು ಪತನದಿಂದ ಕಾಪಾಡುವ ಅಗತ್ಯವಿದೆ. ಈಗ ಹಸ್ತಪ್ರತಿ ಅಧ್ಯಯನ ಕನ್ನಡ ವಿ.ವಿ.ಯಲ್ಲಿ ಮಾತ್ರ ಇದ್ದು, ಇತರ ಎಲ್ಲ ವಿಶ್ವವಿದ್ಯಾಲಯಗಳಲ್ಲೂ [illegible] ಎಂದು ಹೇಳಿ, ಯುವ ಸಾಹಿತ್ಯಾಸಕ್ತರು ಹಸ್ತಪ್ರತಿ ಶಾಸ್ತ್ರದ ಬಗೆಗೆ ಆಸಕ್ತಿ ಬೆಳೆಸಿಕೊಂಡು ಸಂಗ್ರಹ ಕಾರ್ಯದಲ್ಲಿ ತೊಡಗಬೇಕೆಂದು ಕರೆನೀಡಿದರು.



ಎಂ.ವಿ.ಸೀ. ಶತಮಾನೋತ್ಸವ ವಿಚಾರಗೋಷ್ಠಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಎನ್. ಬಸವಾರಾಧ್ಯ ಎಂ.ವಿ.ಸೀ. ಭಾವಚಿತ್ರಕ್ಕೆ ಪುಷ್ಪ ಸಮರ್ಪಣೆ ಮಾಡುತ್ತಿರುವುದು. ಜಿ. ನಾರಾಯಣ, ಮಲ್ಲೇಪುರಂ ಜಿ. ವೆಂಕಟೇಶ್, ಪ್ರೊ. ಪಿ. ಕೃಷ್ಣ ಮೊದಲಾದವರಿದ್ದಾರೆ.

ವಿಚಾರಗೋಷ್ಠಿ ಉದ್ಘಾಟಿಸಿದ ಸಂಶೋಧಕ ಎಂ. ಚಿದಾನಂದಮೂರ್ತಿ ಅವರು ಗ್ರಂಥ ಸಂಪಾದನೆ ಎಂದರೆ ಕೇವಲ ಹಸ್ತಪ್ರತಿ ಸಂಗ್ರಹವಲ್ಲ, ಶಾಸನ ಅಧ್ಯಯನವೂ ಹೌದು ಎಂದು ಹೇಳಿ, ಯುವ ಸಂಶೋಧಕರು ಹಸ್ತಪ್ರತಿ ಶಾಸ್ತ್ರ ಅಧ್ಯಯನ ಮಾಡಿದರೆ ಅನೇಕ ಆಸಕ್ತಿದಾಯಕ ವಿಷಯಗಳು ಬೆಳಕಿಗೆ ಬರಲಿವೆ. ಗ್ರಂಥ ಸಂಪಾದನೆಯ ಹರಿಕಾರರಾದ ಪ್ರೊ||ಡಿ.ಎಲ್. ನರಸಿಂಹಾಚಾರ್ ಮತ್ತು ಪ್ರೊ||ತೀ.ನಂ. ಶ್ರೀಕಂಠಯ್ಯನವರ ಗ್ರಂಥಗಳ ಅಧ್ಯಯನದಿಂದ ಹಸ್ತಪ್ರತಿ ಶಾಸ್ತ್ರ ಕರಗತ ಮಾಡಿಕೊಳ್ಳಬಹುದು ಎಂದರು.

ಶೇಷಾದ್ರಿಪುರ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಶೇಷಾದ್ರಿಪುರ ಕಾಲೇಜಿನ [illegible] ಪ್ರತಿಷ್ಠಾನದ ಗೌ|| ಕಾರ್ಯದರ್ಶಿ ಡಾ||ನಾ. ಗೀತಾಚಾರ್ಯ ಹಾಗೂ ಎಂ.ಎಸ್. ಭಾಸ್ಕರ್ ಉಪಸ್ಥಿತರಿದ್ದರು. ಅಧ್ಯಕ್ಷ ನಾಡೋಜ ಜಿ. ನಾರಾಯಣ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಾರ್ಯದರ್ಶಿ ಎಸ್.ವಿ. ಶ್ರೀನಿವಾಸರಾವ್ ಸ್ವಾಗತಿಸಿದರು. ಶೇಷಾದ್ರಿಪುರ ಕಾಲೇಜು ಕನ್ನಡ ಸ್ನಾತಕೋತ್ತರ ಕೇಂದ್ರದ ಅಧ್ಯಾಪಕ [illegible] ವಂದಿಸಿದರು.

ಕನ್ನಡದ ಬಗೆಗಿನ ಕಾಳಜಿಯ ಕೊರತೆ

ಸಂಜೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆದ ಎಂ.ವಿ.ಸೀ. ಶತಮಾನೋತ್ಸವ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕ.ಸಾ.ಪ. ಮಾಜಿ ಅಧ್ಯಕ್ಷರೂ, ನಿಘಂಟು ತಜ್ಞರೂ ಆದ ನಾಡೋಜ ಪ್ರೊ||ಜಿ. ವೆಂಕಟಸುಬ್ಬಯ್ಯ ಅವರು ಕರ್ನಾಟಕದ ಜನಪ್ರತಿನಿಧಿಗಳಲ್ಲಿ ಕನ್ನಡದ ಬಗೆಗಿನ ಕಾಳಜಿಯ ಕೊರತೆಯ ಬಗೆಗೆ ವಿಷಾದಿಸಿ, ಬೆಂಗಳೂರಿನಲ್ಲಿ "ಕನ್ನಡ ಸಾಯುತ್ತಿದ್ದರೂ ಕನ್ನಡ ಉಳಿಸುವ ಬಗ್ಗೆ ಕಾಳಜಿ ವಹಿಸದಿರುವುದಕ್ಕೆ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಕನ್ನಡಿಗರು ಭಾಷಾಭಿಮಾನ ಬೆಳೆಸಿಕೊಳ್ಳಬೇಕೆಂದು ಆಶಿಸಿದ ಅವರು, ರಾಜ್ಯದಲ್ಲಿ ಕನ್ನಡದ ಕಡ್ಡಾಯ ಕಲಿಕೆಗೆ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು. ತಮಿಳುನಾಡಿನಲ್ಲಿ ೧ ರಿಂದ ೧೦ನೇ ತರಗತಿವರೆಗೆ ತಮಿಳು ಕಲಿಕೆ ಕಡ್ಡಾಯವಾಗಿರುವಾಗ ಇಲ್ಲಿ ಕನ್ನಡ ಕಲಿಕೆಯ ಕಡ್ಡಾಯ ಮಾಡಲು ಏನು ಅಡ್ಡಿ ಎಂದು ಪ್ರಶ್ನಿಸಿ, ತಮಿಳುನಾಡಿನಲ್ಲಿ ತಮಿಳು ಬಾರದಿದ್ದರೆ ಬದುಕುವುದೇ ಕಷ್ಟ ಎಂಬ ಪರಿಸ್ಥಿತಿ ಇದೆ. ರಾಜ್ಯದಲ್ಲೂ ಕನ್ನಡ ಬಾರದಿದ್ದರೆ ಬದುಕು ದುಸ್ಸಾಧ್ಯ ಎಂಬ ಅನಿವಾರ್ಯತೆ ಕಲ್ಪಿಸುವ ಅಗತ್ಯವಿದೆ ಎಂದರು.

ಸಮಾರೋಪ ಭಾಷಣ ಮಾಡಿದ ಕನ್ನಡ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ, ಪ್ರೊ||ಎಂ.ಎಚ್. ಕೃಷ್ಣಯ್ಯ ಅವರು [illegible] ಸಂಗ್ರಹ ಅಧ್ಯಯನ ವಿಚಾರದಲ್ಲಿ ಎಂ.ವಿ. ಸೀತಾರಾಮಯ್ಯನವರು ಯಾವ ವಿಶ್ವವಿದ್ಯಾಲಯವೂ ಮಾಡದ ಕೆಲಸವನ್ನು ಮಾಡಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಎಂ.ವಿ.ಸೀ. ವಿರಚಿತ 'ತಿರುಕಿಯ ಕನಸು' ನಾಟಕ ಮತ್ತು ವೆ.ಗೊ. ರಮೇಶ ವಿರಚಿತ '[illegible] ಎಂ.ವಿ.ಸೀ' ಕೃತಿಯನ್ನು ಬಿಡುಗಡೆಗೊಳಿಸಲಾಯಿತು.

ವೇದಿಕೆಯಲ್ಲಿ [illegible], ಡಾ||ನಾ. ಗೀತಾಚಾರ್ಯ, ಎಸ್.ವಿ. ಶ್ರೀನಿವಾಸ ರಾವ್, ಎಂ.ಎಸ್. ಭಾಸ್ಕರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕರಾದ [illegible] ಉಪಸ್ಥಿತರಿದ್ದರು.

ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ [illegible] ಡಾ||[illegible] ಅವರ ಅಧ್ಯಕ್ಷತೆಯಲ್ಲಿ ನಡೆದ "ಹಸ್ತಪ್ರತಿ ಅಧ್ಯಯನ ಕ್ರಮಗಳು" ಕುರಿತ ಗೋಷ್ಠಿಯಲ್ಲಿ [illegible] ಕನ್ನಡ ವಿ.ವಿ.ಯ ಹಸ್ತಪ್ರತಿ ವಿಭಾಗದ ಪ್ರಾಧ್ಯಾಪಕ ಡಾ||[illegible] ಅವರು "[illegible]" [illegible], ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನಾ ವಿಭಾಗದ ಡಾ. ಕೈ.ವಿ. [illegible] ಅವರು "ಲೌಕಿಕ ಪದ್ಯಗಳ ಅಧ್ಯಯನ" ಮತ್ತು ಪಿರಿಯಾಪಟ್ಟಣದ ಸರ್ಕಾರೀ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ||[illegible] 'ಪಾಠಾಂತರ ಅಧ್ಯಯನ' ಕುರಿತು ಉಪನ್ಯಾಸಗೈದರು. ಡಾ||ನಾ. ಗೀತಾಚಾರ್ಯ ಸ್ವಾಗತಿಸಿದರು.

ಅಧ್ಯಯನ ಶಾಸ್ತ್ರದ ಆಯಾಮಗಳು ಕುರಿತ ಎರಡನೇ ಗೋಷ್ಠಿಯ ಅಧ್ಯಕ್ಷತೆಯನ್ನು ಅನಂತಪುರದ ಶ್ರೀ ಕೃಷ್ಣದೇವರಾಯ ವಿ.ವಿ. ಪ್ರಾಧ್ಯಾಪಕ ಡಾ||ಆರ್. ಶೇಷಶಾಸ್ತ್ರಿ ವಹಿಸಿದ್ದರು. ಶ್ರವಣಬೆಳಗೊಳ ಪ್ರಾಕೃತ ಕೇಂದ್ರದ ಹಿರಿಯ ಹಸ್ತಪ್ರತಿ ತಜ್ಞ ಪ್ರೊ||ಬಿ.ಎಸ್. ಸಣ್ಣಯ್ಯ ಸಮಾರೋಪ ಭಾಷಣ ಮಾಡಿದರು.

ಕರ್ನಾಟಕ ನಾಟಕ ಅಕಾಡೆಮಿ ಪ್ರಾಯೋಜನೆಯಲ್ಲಿ ನವಿಕಲಾ ನಿಕೇತನದವರಿಂದ 'ತಿರುಕಿಯ ಕನಸು' ನಾಟಕ ಅಭಿನಯಿಸಲಾಯಿತು.

ಉದಯವಾಣಿ
ಬುಧವಾರ 15 ಸೆಪ್ಟೆಂಬರ್ 2010

ಸಂಕ್ಷಿಪ್ತ ಸುದ್ದಿ

ಬೆಂಗಳೂರು, ಸೆ. 14

ಪದಾಧಿಕಾರಿಗಳು

ಶಿಕ್ಷಣ ತಜ್ಞ ಡಾ| ಡಬ್ಲ್ಯೂ.ಪಿ. ಕೃಷ್ಣ ಅವರು ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾಗಿ 2010-13ನೇ ಸಾಲಿಗೆ ಅಧ್ಯಕ್ಷರಾಗಿ ಪುನರಾಯ್ಕೆ ಆಗಿದ್ದಾರೆ. ಸುಮಂಗಲೀ ಸೇವಾಶ್ರಮದ ಎಸ್.ಜಿ. ಸುಶೀಲಮ್ಮ ಉಪಾಧ್ಯಕ್ಷರಾಗಿ, ಸಮಾಜ ಸೇವಕ ಸಿದ್ಧಾರ್ಥ ಶರ್ಮಾ ಕಾರ್ಯದರ್ಶಿ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವೃತ್ತ ನಿರ್ದೇಶಕ ಎಚ್. ರಾಮಪ್ಪ ಕೋಶಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರತಿಷ್ಠಾನ ಪ್ರಕಟಣೆ ತಿಳಿಸಿದೆ.


ಸಂಜೆವಾಣಿ

ಮಂಗಳವಾರ 14 ಸೆಪ್ಟೆಂಬರ್ 2010

ಗಾಂಧಿಪ್ರತಿಷ್ಠಾನ: ವೂಡೇ ಪಿ. ಕೃಷ್ಣ ಪುನರಾಯ್ಕೆ


ಬೆಂಗಳೂರು, ಸೆ. ೧೩- ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾಗಿ ಡಾ. ವೂಡೇ ಪಿ. ಕೃಷ್ಣ ಅವರು ಪುನರಾಯ್ಕೆಗೊಂಡಿದ್ದಾರೆ. ಇನ್ನುಳಿದಂತೆ ಎಸ್.ಜಿ. ಸುಶೀಲಮ್ಮ (ಉಪಾಧ್ಯಕ್ಷೆ), ಸಿದ್ಧಾರ್ಥ ಶರ್ಮ (ಕಾರ್ಯದರ್ಶಿ) ಹಾಗೂ ಹೆಚ್. ರಾಮಪ್ಪ (ಕೋಶಾಧ್ಯಕ್ಷ)ರಾಗಿ 2010-13ರ ಅವಧಿಗೆ ಸರ್ವಾನುಮತದಿಂದ ಪುನರಾಯ್ಕೆಗೊಂಡಿದ್ದಾರೆ.

ಸಂಜೆವಾಣಿ
ಸೋಮವಾರ 13 ಸೆಪ್ಟೆಂಬರ್ 2010



ನಗರದ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು ಇತ್ತೀಚೆಗೆ ಆಯೋಜಿಸಿದ್ದ ಸಂಸ್ಕೃತ ಸಂಭಾಷಣಾ ಮತ್ತು ವೇದ ತರಗತಿಗಳ ಉದ್ಘಾಟನಾ ಸಮಾರಂಭದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರನ್ನು ಸನ್ಮಾನಿಸಲಾಯಿತು. ಶೇಷಾದ್ರಿಪುರಂ ಶಿಕ್ಷಣಸಂಸ್ಥೆ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಪ್ರಾಚಾರ್ಯ ಪ್ರೊ. ಗಾಂಧಿ ದಿವಾನ್ ಪ್ರಭು, ಪ್ರೊ. ಎಸ್. ಆಯ್ ಹೆಗಡೆ ಚಿತ್ರದಲ್ಲಿದ್ದಾರೆ.

ಕನ್ನಡಪ್ರಭ, ಬೆಂಗಳೂರು ಸೋಮವಾರ, 13 ಸೆಪ್ಟೆಂಬರ್ 2010



ಸನ್ಮಾನ...

ಶೇಷಾದ್ರಿಪುರ ಪಪೂ ಕಾಲೇಜ್ ಏರ್ಪಡಿಸಿದ್ದ ಶಿಕ್ಷಕರ ದಿನಾಚರಣೆಯಲ್ಲಿ ಪ್ರೊ|ಸತ್ಯನಾರಾಯಣ ಮತ್ತು ಸರೋಜಮ್ಮ ನಂಜಪ್ಪ ಅವರನ್ನು ಪ್ರೊ|ಪ್ರಮೋದ ನರೇಂದ್ರನಾಥ್, ಡಾ.ಹೊ.ಶ್ರೀನಿವಾಸಯ್ಯ, ಡಾ|ವೂಡೇ ಪಿ.ಕೃಷ್ಣ ಸನ್ಮಾನಿಸಿದರು.

ಉದಯವಾಣಿ
ಶುಕ್ರವಾರ, 10 ಸೆಪ್ಟೆಂಬರ್ 2010 ಪುಟ 7

ಬೇರೆ ವಿವಿಗಳಲ್ಲೂ ಹಸ್ತಪ್ರತಿ ಶಾಸ್ತ್ರ ಅಧ್ಯಯನ ವಿಭಾಗ ಆರಂಭವಾಗಲಿ

ಬೆಂಗಳೂರು, ಸೆ. 9: ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸೀಮಿತವಾಗಿರುವ ಹಸ್ತಪ್ರತಿ ಶಾಸ್ತ್ರ ಅಧ್ಯಯನ ವಿಭಾಗವು ರಾಜ್ಯದ ಬೇರೆ ವಿವಿಗಳಲ್ಲೂ ಆರಂಭವಾಗಬೇಕು ಎಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ। ಮಲ್ಲೇಪುರಂ ಜಿ. ವೆಂಕಟೇಶ್ ಹೇಳಿದರು.


ಶೇಷಾದ್ರಿಪುರಂ ಕಾಲೇಜು ಸ್ನಾತಕೋತ್ತರ ಕನ್ನಡ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಎಂ.ವಿ.ಸೀ. ಶತಮಾನೋತ್ಸವ ಸಮಿತಿ ಗುರುವಾರ ಆಯೋಜಿಸಿದ್ದ 'ಹಸ್ತಪ್ರತಿ ಅಧ್ಯಯನ ಶಾಸ್ತ್ರ' ವಿಚಾರಗೋಷ್ಠಿಯಲ್ಲಿ ಪ್ರಾಚೀನ ಹಸ್ತಪ್ರತಿಗಳ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡದಲ್ಲಿ ಹಸ್ತಪ್ರತಿಗಳ ಸಂಗ್ರಹ, ಸಂಪಾದನೆಯ ಎರಡು ಹಂತಗಳನ್ನು ದಾಟಿಕೊಂಡು ಅಧ್ಯಯನ ಶಾಸ್ತ್ರವಾಗಿ ರೂಪುಗೊಂಡಿದೆ ಎಂದರು.

ಹಸ್ತಪ್ರತಿಗಳು ಸಮಾಜ ಮತ್ತು ದೇಶದ ಆಸ್ತಿ ಎಂಬ ಭಾವನೆ ಬರಬೇಕು. ಹಸ್ತಪ್ರತಿಗಳು ಬದುಕಿನ ಬೇರೆಬೇರೆ ಚಹರೆಗಳನ್ನು ಪರಿಚಯಿಸಿಕೊಡಲಿದ್ದು, ಈ ಕುರಿತು ವಿಸ್ತೃತ ಅಧ್ಯಯನ ಎಲ್ಲ ವಿಶ್ವವಿದ್ಯಾಲಯಗಳಲ್ಲೂ ನಡೆಯಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ವಿಚಾರಗೋಷ್ಠಿ ಉದ್ಘಾಟಿಸಿದ ಖ್ಯಾತ ಸಂಶೋಧಕ ಡಾ। ಎಂ. ಚಿದಾನಂದಮೂರ್ತಿ ಮಾತನಾಡಿ, ಹಸ್ತಪ್ರತಿ ಶಾಸ್ತ್ರ ಮತ್ತು ಗ್ರಂಥ ಸಂಪಾದನೆ ಶಾಸ್ತ್ರವು 1960ರ ಬಳಿಕ ವ್ಯವಸ್ಥಿತ ಅಧ್ಯಯನವಾಗಿ ಬೆಳೆದುಬಂದಿದೆ. ಮಾನಸಗಂಗೋತ್ರಿಯಲ್ಲಿ ಎಂ.ಎ. ವಿದ್ಯಾರ್ಥಿಗಳಿಗಾಗಿ ತೀ.ನಂ.ಶ್ರೀ ಮೊದಲ ಬಾರಿಗೆ ಗ್ರಂಥ ಸಂಪಾದನೆ ಮಾಡಿದರು ಎಂದು ಸ್ಮರಿಸಿದರು.

ಪ್ರಾಸ್ತಾವಿಕ ಮಾತನಾಡಿದ ನಾಡೋಜ ಜಿ. ನಾರಾಯಣ, ಹಸ್ತಪ್ರತಿಗಳ ಸಂರಕ್ಷಣೆಗಾಗಿಯೇ ಎಂ.ವಿ. ಸೀತಾರಾಮಯ್ಯ ಅವರು ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನ ರಚಿಸಿದರು. ಈ ಪ್ರತಿಷ್ಠಾನವು ಉತ್ತಮ ಕೆಲಸ ಮಾಡುತ್ತಿದೆ ಎಂದರು.

ವಿದ್ವಾಂಸ ಪ್ರೊ। ಎನ್. ಬಸವರಾಧ್ಯ ಅಧ್ಯಕ್ಷತೆ ವಹಿಸಿದ್ದರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ವೂಡೆ ಪಿ. ಕೃಷ್ಣ, ಡಾ। ನಾ. ಗೀತಾಚಾರ್ಯ, ಪ್ರೊ। ನರಹಳ್ಳಿ ಬಾಲಸುಬ್ರಮಣ್ಯ ಮತ್ತಿತರರು ಉಪಸ್ಥಿತರಿದ್ದರು.



ಹಸ್ತಪ್ರತಿ ಸಂರಕ್ಷಣಾ ಪ್ರತಿಷ್ಠಾನ ಗುರುವಾರ ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಎಂ.ವಿ.ಸೀ ಅವರ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ನಾಡೋಜ ನಾರಾಯಣ, ಸಂಶೋಧಕ ಡಾ। ಚಿದಾನಂದ ಮೂರ್ತಿ, ಸಂಸ್ಕೃತ ವಿವಿ ಕುಲಪತಿ ಪ್ರೊ। ಮಲ್ಲೇಪುರಂ ಜಿ. ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ ಬೆಂಗಳೂರು 10-9-2010

ಹಸ್ತಪ್ರತಿ ಅಧ್ಯಯನ ಅಗತ್ಯ: ಚಿ.ಮೂ.



ಎಂ.ವಿ.ಸೀ.ಶತಮಾನೋತ್ಸವ ಸಮಿತಿ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಮತ್ತು ಸ್ನಾತಕೋತ್ತರ ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರಿನಲ್ಲಿ ಗುರುವಾರ ಏರ್ಪಡಿಸಿದ್ದ ಎಂ.ವಿ.ಸೀ.ಶತಮಾನೋತ್ಸವ ರಾಷ್ಟ್ರೀಯ ವಿಚಾರಗೋಷ್ಠಿಯ ಉದ್ಘಾಟನಾ ಸಮಾರಂಭದಲ್ಲಿ ಸಂಶೋದಕ ಡಾ.ಎಂ. ಚಿದಾನಂದ ಮೂರ್ತಿ, ನಾಡೋಜ ಜಿ.ನಾರಾಯಣ, ವಿದ್ವಾಂಸ ಬಸವಾರಾಧ್ಯ, ಪ್ರೊ.ಪಿ.ಕೃಷ್ಣ ಮತ್ತಿತರರು ಭಾಗವಹಿಸಿದ್ದರು.

ಬೆಂಗಳೂರು, ಸೆ. 10: ಹಸ್ತಪ್ರತಿಗಳ ವ್ಯವಸ್ಥಿತ ಅಧ್ಯಯನದ ಅಗತ್ಯವಿದೆ ಎಂದು ಹಿರಿಯ ಸಂಶೋಧಕ ಡಾ.ಚಿದಾನಂದ ಮೂರ್ತಿ ಪ್ರತಿಪಾದಿಸಿದರು.

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಗುರುವಾರ ನಡೆದ ಪ್ರೊ.ಎಂ.ವಿ.ಸೀ ಶತಮಾನೋತ್ಸವ ಸಮಾರೋಪ ಸಮಾರಂಭದ 'ಹಸ್ತಪ್ರತಿ ಅಧ್ಯಯನ ಶಾಸ್ತ್ರ' ವಿಚಾರಗೋಷ್ಠಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಡಾ.ಚಿದಾನಂದ ಮೂರ್ತಿ, ಹಸ್ತಪ್ರತಿಗಳ ಸಂಶೋಧನೆ ಮಾಡಲು ವಿದ್ಯಾರ್ಥಿಗಳು ಮುಂದೆ ಬರಬೇಕೆಂದು ಕರೆ ನೀಡಿದರು.

ಅಲ್ಲಮನ ನಿಜವಾದ ಅಂಕಿತ ಗುಹೇಶ್ವರ ಅಲ್ಲ.ಗೊಗ್ಗೇಶ್ವರ ಎಂದು ಪ್ರತಿಪಾದಿಸಿದ ಚಿದಾನಂದಮೂರ್ತಿ ಇದು ಕೂಡ ತಾವು ಕಷ್ಟಪಟ್ಟು ಸಂಶೋಧನೆ ಮಾಡಿದ ನಂತರ ತಿಳಿದ ಸಂಗತಿ ಎಂದರು.

ಎಂ.ವಿ.ಸೀ ಸಂಶೋಧನಾ ಕೇಂದ್ರ ಹಸ್ತಪ್ರತಿ ಸಂರಕ್ಷಣೆ, ಅಧ್ಯಯನದಲ್ಲಿ ಒಳ್ಳೆಯ ಕಾರ್ಯನಿರ್ವಹಿಸುತ್ತಿದೆ ಎಂದ ಅವರು, ಇನ್ನೊಬ್ಬರ ಗ್ರಂಥ ಸಂಪಾದನೆಯನ್ನು ಮತ್ತೆ ಸಂಪಾದಿಸಬೇಕಾದರೆಎಚ್ಚರವಹಿಸಬೇಕೆಂದು ಕಿವಿಮಾತು ಹೇಳಿದರು.


■ ಹಸ್ತಪ್ರತಿ ಆಸ್ತಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಮಲ್ಲೇಪುರಂ.ಜಿ.ವೆಂಕಟೇಶ್ ಮಾತನಾಡಿ, ಹಸ್ತಪ್ರತಿಗಳು ಸಮೂಹದ, ಸಮಾಜದ ಆಸ್ತಿಯೆಂದು ಪರಿಗಣಿಸಬೇಕು ಎಂದರು.ಪ್ರಸ್ತುತ ಹಂಪಿ ವಿ.ವಿ.ಯಲ್ಲಿ ಮಾತ್ರ ಹಸ್ತಪ್ರತಿಗಳ ಅಧ್ಯಯನ ಶಾಸ್ತ್ರ ಇದ್ದು, ಅದು ಬೇರೆ, ಬೇರೆ ವಿಶ್ವವಿದ್ಯಾಲಯಗಳಿಗೂ ವಿಸ್ತಾರವಾಗುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರೊ. ಎನ್.ಬಸವಾರಾಧ್ಯ ಮಾತನಾಡಿ, ಹಸ್ತಪ್ರತಿ ಸಂಪಾದನೆಯಲ್ಲಿ ಎದುರಾಗುವ ಸಮಸ್ಯೆಗಳ ಬಗ್ಗೆ ಚಿಂತನೆ ನಡೆಸುವ ಅಗತ್ಯವಿದೆ ಎಂದರು. ಜೊತೆಗೆ ಪ್ರೊ.ಎಂ.ವಿ.ಸೀತಾರಾಮಯ್ಯನವರ ಕೊಡುಗೆಯನ್ನು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ನುಡಿಗಳನ್ನಾಡಿದಹಿರಿಯಸಾಹಿತಿಜಿ.ನಾರಾಯಣ, ಹಸ್ತಪ್ರತಿ ಸಂರಕ್ಷಣೆ ಮಾಡುತ್ತಿರುವ ಬಿ.ಎಂ.ಶ್ರೀ ಪ್ರತಿಷ್ಠಾನದ ಕಾರ್ಯವನ್ನು ಶ್ಲಾಘಿಸಿದರು. ಪ್ರೊ.ಎಂ.ವಿ.ಸೀ ಸಂಶೋಧನಾ ಕೇಂದ್ರದ ಗೌರವ ಕಾರ್ಯದರ್ಶಿ ಡಾ.ನಾ. ಗೀತಾಚಾರ್ಯ, ಶೇಷಾದ್ರಿಪುರಂ ಕಾಲೇಜಿನ ಪ್ರಾಂಶುಪಾಲ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಉಪಸ್ಥಿತರಿದ್ದರು.

ಕನ್ನಡಪ್ರಭ, ಶುಕ್ರವಾರ, 10 ಸೆಪ್ಟೆಂಬರ್ 2010



ರಕ್ತದಾನ ಶಿಬಿರ...

ನಗರದ ಮಾಗಿ ರಸ್ತೆಯ ಶೇಷಾದ್ರಿಪುರ ವಾಣಿಜ್ಯ ಕಾಲೇಜಿನಲ್ಲಿ ಇತ್ತೀಚೆಗೆ ರಾಷ್ಟ್ರೀಯ ಸೇವಾ ಯೋಜನೆ ಘಟಕದಿಂದ ಏರ್ಪಡಿಸಲಾಗಿದ್ದ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ದೂರದರ್ಶನ ಕೇಂದ್ರದ ಉಪ ನಿರ್ದೇಶಕ ಡಾ.ಚಂದ್ರಮೌಳಿ ಉದ್ಘಾಟಿಸಿದರು. ಡಾ.ವೊಡೆ ಪಿ.ಕೃಷ್ಣ ಇತರರು ಹಾಜರಿದ್ದರು.

ವಿಜಯ ಕರ್ನಾಟಕ
ಶುಕ್ರವಾರ, 10 ಸೆಪ್ಟೆಂಬರ್ 2010, ಬೆಂಗಳೂರು | 3

ಎಲ್ಲ ವಿವಿಗಳಲ್ಲೂ ಹಸ್ತಪ್ರತಿ ಅಧ್ಯಯನ ನಡೆಯಲಿ

- ವಿಕ ಸುದ್ದಿಲೋಕ ಬೆಂಗಳೂರು

ಹಸ್ತಪ್ರತಿ ಅಧ್ಯಯನ ಕೇಂದ್ರ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾತ್ರ ಇದ್ದು ಇತರ ವಿವಿಗಳಲ್ಲೂ ಆರಂಭವಾಗಬೇಕು ಎಂದು ಸಂಸ್ಕೃತ ವಿವಿ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಹೇಳಿದರು.

ಎಂವಿಸೀ ಶತಮಾನೋತ್ಸವ ಸಮಿತಿ, ಬಿಎಂ ಶ್ರೀ ಸ್ಮಾರಕ ಪ್ರತಿಷ್ಠಾನ ಮತ್ತು ಶೇಷಾದ್ರಿಪುರಂ ಕಾಲೇಜಿನ ಸ್ನಾತಕೋತ್ತರ ಕನ್ನಡ ಅಧ್ಯಯನ ಸಮಿತಿ ಗುರುವಾರ ರವೀಂದ್ರ ಕಲಾಕ್ಷೇತ್ರದಲ್ಲಿ ಏರ್ಪಡಿಸಿದ್ದ ಎಂವಿಸೀ ಶತಮಾನೋತ್ಸವ ವಿಚಾರ ಸಂಕಿರಣ ದಲ್ಲಿ 'ಹಸ್ತಪ್ರತಿ ಅಧ್ಯಯನ ಶಾಸ್ತ್ರ' ಕುರಿತು ಮಾತನಾಡಿದರು.

ಕನ್ನಡದಲ್ಲಿ ಹಸ್ತಪ್ರತಿ ಸಂಗ್ರಹ ಮತ್ತು ಸಂಪಾದನೆ ಕಾರ್ಯ ಮುಗಿದಿದ್ದು ಈಗ ಅಧ್ಯಯನ ಶಾಸ್ತ್ರವಾಗಿ ರೂಪುಗೊಂಡಿದೆ. ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಎಲ್ಲಾ ವಿವಿಗಳಲ್ಲೂ ಅಧ್ಯಯನಕ್ಕೆ ಅವಕಾಶ ಕೊಡಬೇಕು ಎಂದರು.

ಡಾ.ಎಂ. ಚಿದಾನಂದ ಮೂರ್ತಿ ಮಾತನಾಡಿ, ಹಸ್ತಪ್ರತಿ ಅಥವಾ ಗ್ರಂಥ ಸಂಪಾದನೆ ಶಾಸ್ತ್ರ 1960ರ ನಂತರ ವ್ಯವಸ್ಥಿತವಾಗಿ ಬೆಳೆದುಬಂದಿದೆ. ಗ್ರಂಥ ಸಂಪಾದನೆ ಎಂದರೆ ಕೇವಲ ಹಸ್ತಪ್ರತಿ ಸಂಗ್ರಹವಲ್ಲ, ಶಾಸನ ಅಧ್ಯಯನವೂ ಹೌದು. ಮೈಸೂರು ವಿವಿ ಆರಂಭವಾದಾಗ ಮೊದಲ ಬಾರಿಗೆ ತೀನಂ ಶ್ರೀ ಗ್ರಂಥ ಸಂಪಾದನೆ ಮಾಡಿದರು ಎಂದರು. ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷ ಡಾ.ಜಿ. ನಾರಾಯಣ, ಹಸ್ತಪ್ರತಿಗಳ ಸಂಗ್ರಹಕ್ಕೆಂದೇ ಪ್ರತಿಷ್ಠಾನ ರಚಿಸಲಾಗಿದೆ ಎಂದರು.

ಪ್ರೊ.ಎನ್. ಬಸವಾರಾಧ್ಯ, ಬೆಳಗೆರೆ ಕೃಷ್ಣಶಾಸ್ತ್ರಿ ಶೇಷಾದ್ರಿಪುರಂ ಶಿಕ್ಷಣ ದತ್ತಿ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ ಉಪಸ್ಥಿತರಿದ್ದರು.



ರವೀಂದ್ರ ಕಲಾಕ್ಷೇತ್ರದಲ್ಲಿ ಗುರುವಾರ ನಡೆದ ವಿಚಾರ ಸಂಕಿರಣದಲ್ಲಿ ಪ್ರೊ.ಎನ್. ಬಸವಾರಾಧ್ಯ ಎಂವಿಸೀ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಡಾ.ಎಂ. ಚಿದಾನಂದಮೂರ್ತಿ, ಡಾ.ಜಿ. ನಾರಾಯಣ, ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ, ವೂಡೇ ಪಿ. ಕೃಷ್ಣ ಉಪಸ್ಥಿತರಿದ್ದರು.




ರವೀಂದ್ರ ಕಲಾಕ್ಷೇತ್ರದಲ್ಲಿ ಎಂ.ವಿ.ಸೀ ಶತಮಾನೋತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ವಿಚಾರಗೋಷ್ಠಿಯನ್ನು ಸಂಶೋಧಕ ಡಾ.ಎಂ.ಚಿದಾನಂದ ಮೂರ್ತಿ ಉದ್ಘಾಟಿಸಿದರು. ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಜಿ.ನಾರಾಯಣ, ವೂಡೆ ಪಿ.ಕೃಷ್ಣ, ಸಂಸ್ಕೃತ ವಿವಿ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಮತ್ತಿತರರು ಪಾಲ್ಗೊಂಡಿದ್ದರು.

ಕನ್ನಡಪ್ರಭ, ಬುಧವಾರ, 1 ಸೆಪ್ಟೆಂಬರ್, 2010

ಉದ್ಘಾಟನೆ...

ಶೇಷಾದ್ರಿಪುರ ಸಂಜೆ ಪದವಿ ಕಾಲೇಜು ಆಯೋಜಿಸಿದ್ದ ಸಂಸ್ಕೃತ ಸಂಭಾಷಣಾ ಮತ್ತು ವೇದ ತರಗತಿಗಳನ್ನು ಪ್ರೊ| ಮಲ್ಲೇಪುರಂ ಜಿ. ವೆಂಕಟೇಶ ಉದ್ಘಾಟಿಸಿದರು. ಡಾ|ವೂಡೇ ಪಿ.ಕೃಷ್ಣ, ಪ್ರೊ| ಗಾಂಧೀ ದಿವಾನ್ ಪ್ರಭು ಇತರರು ಹಾಜರಿದ್ದರು.



ಪುಟ 3


ಈ ಸಂಜೆ
ಶುಕ್ರವಾರ, 27 ಆಗಸ್ಟ್, 2010



ಶೇಷಾದ್ರಿಪುರಂ ಕಾಲೇಜು ಎನ್‌ಎಸ್‌ಎಸ್ ಮತ್ತು ಯೂತ್ ರೆಡ್‌ಕ್ರಾಸ್ ಘಟಕಗಳು ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರವನ್ನು ದೂರದರ್ಶನ ಕೇಂದ್ರದ ನಿರ್ದೇಶಕ ಡಾ.ಮಹೇಶ್ ಜೋಷಿ ಉದ್ಘಾಟಿಸಿದರು. ರೆಡ್‌ಕ್ರಾಸ್ ಸಂಸ್ಥೆ ಸದಸ್ಯ ಡಾ.ವೂಡೆ ಪಿ.ಕೃಷ್ಣ, ಪ್ರಾಂಶುಪಾಲ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ರೆಡ್‌ಕ್ರಾಸ್‌ನ ರಾಜು ಚಂದ್ರಶೇಖರ್, ಎನ್‌ಎಸ್‌ಎಸ್ ಅಧಿಕಾರಿ ಪ್ರೊ.ಪ್ರತಾಪ್ ಲಿಂಗಯ್ಯ ಮತ್ತಿತರರಿದ್ದರು.

ಸಂಯುಕ್ತ ಕರ್ನಾಟಕ

ಬೆಂಗಳೂರು । ಶುಕ್ರವಾರ 27 ಆಗಸ್ಟ್ 2010



ಗುರುವಾರ ಬೆಂಗಳೂರಿನಲ್ಲಿ ಏರ್ಪಡಿಸಿದ್ದ 'ಆಧ್ಯಾತ್ಮಿಕತೆ ಮತ್ತು ಗಾಂಧೀಜಿ' ಕುರಿತ ವಿಚಾರ ಸಂಕಿರಣದಲ್ಲಿ ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ, ಬೈಲೂರಿನ ನಿಜಗುಣಾನಂದ ಸ್ವಾಮೀಜಿ, ಡಾ.ಬಾಲಗಂಗಾಧರನಾಥ ಸ್ವಾಮೀಜಿ, ಬೇಲಿಮಠದ ಶಿವರುದ್ರ ಸ್ವಾಮೀಜಿ, ಡಾ. ಹೊ. ಶ್ರೀನಿವಾಸಯ್ಯ ಉಪಸ್ಥಿತರಿದ್ದರು.

ಗಾಂಧೀಜಿ ಮರೆತಿದ್ದರಿಂದಲೇ ದೇಶಕ್ಕೆ ಈ ಗತಿ

ಬೆಂಗಳೂರು, ಆ. 26: 'ಗಾಂಧಿಜೀಯನ್ನು ಮರೆತದ್ದರಿಂದಲೇ ದೇಶಕ್ಕೆ ಇಂಥ ಪರಿಸ್ಥಿತಿ ಬಂದಿದೆ'.

ಗಾಂಧೀ ಅಸುನೀಗುವ ಮುನ್ನ ನುಡಿದದ್ದು 'ನನ್ನ ಯೋಜನೆಗಳನ್ನು ಚಿಂತನೆಗಳನ್ನು ಮುಂದುವರೆಸಲು ನಿಮ್ಮ ಮುಂದೆ ಇನ್ನು ನೆಹರೂ ಇದ್ದಾರೆ' ಎಂದು. ಆದರೆ ಸ್ವದೇಶಿ, ಸ್ವಾಭಿಮಾನ, ಸ್ವಯಂ ಪರಿಪೂರ್ಣತೆಗೆ ಪ್ರತೀಕವಾದ ಗಾಂಧೀಜಿಯ ಆಸೆಗೆ ಪ್ರತಿಯಾಗಿ ಇಂದಿರಾಗಾಂಧಿ ಪ್ರಧಾನಿಯಾಗಿ ವಿದೇಶಕ್ಕೆ ಹೋದಾಗ ಕೊಂಡದ್ದು 'ಐ ಲೈನರ್ ಮತ್ತು ಪಾಶ್ಚಾತ್ಯರ ಪೆಟ್ಟಿಕೋಟ್' ಇದಕ್ಕಿಂತಾ ನಾಚಿಕೆಗೇಡಿನ ಸಂಗತಿ ಬೇಕೇ...

ಹೀಗೆಂದವರು ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ.

ಸಂದರ್ಭ; ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಗಾಂಧೀ ಶಾಂತಿ ಪ್ರತಿಷ್ಠಾನ ಮತ್ತು ಗಾಂಧಿಯಾನ ಪ್ರಕಟಣಾಲಯ ಜಂಟಿಯಾಗಿ ಆಯೋಜಿಸಿದ್ದ ' ಆಧ್ಯಾತ್ಮಿಕತೆ ಮತ್ತು ಗಾಂಧೀಜಿ' ಚಿಂತನಗೋಷ್ಠಿ.

ಗ್ರಾಮಗಳ ದೇಶ ನಮ್ಮದು. ಗ್ರಾಮೀಣರು,, ಗ್ರಾಮ ಉಳಿದರೆ ದೇಶ ಉಳಿಯುತ್ತದೆ. ಹಳ್ಳಿಗಳು ಸತ್ತರೆ ನಗರಗಳು ಬದುಕುವುದು ಸಾಧ್ಯವಿಲ್ಲ. 'ಗ್ರಾಮಗಳ ಉಳಿವಿಗೆ ಹೆಚ್ಚಿನ ಆದ್ಯತೆ ನೀಡಬೇಕು' ಎನ್ನುವ ಗಾಂಧೀಜಿಯ ಅಂದಿನ ಚಿಂತನೆ ಎಂದೆಂದಿಗೂ ಪ್ರಸ್ತುತ.

ಭ್ರಷ್ಟಾಚಾರ, ಅಪ್ರಾಮಾಣಿಕತೆ, ಹೇಡಿತನ ಇವೆಲ್ಲವುಗಳಿಂದ ದೇಶ ಬಳಲುತ್ತಿದೆ. ವಿದ್ಯಾವಂತರು ಪ್ರತಿಕ್ರಿಯೆ ನೀಡದೆ ನಿಷ್ಕ್ರಿಯತೆ ಪ್ರದರ್ಶಿಸುತ್ತಿರುವುದು ಸರಿಯಲ್ಲ. 'ಸರಿ ತಪ್ಪುಗಳ ಸರಿಯಾದ ವಿಮರ್ಶೆ ಆಗಬೇಕು. ದೇಶ ಬದುಕಬೇಕಾದರೆ 'ಗಾಂಧೀಯುಗ'ದತ್ತ ಸಾಗಬೇಕು. ಗಾಂಧಿಯನ್ನು ಮರೆತದ್ದರಿಂದಲೇ ಡಾಂಭಿಕ, ಅರ್ಥರಹಿತ ಬಾಳ್ವೆ ಹೆಚ್ಚಾಗುತ್ತಿವೆ. 'ಸರಳ ಜೀವನ, ಉನ್ನತ ಚಿಂತನೆ' ಇಂದು ಕಾಣದಾಗಿದೆ. ಗುಡಿಕೈಗಾರಿಕೆಗಳು ಮಾಯವಾಗಿವೆ. ಎಲ್ಲರೂ ನಗರಗಳತ್ತ ಸಾಗುತ್ತಿದ್ದಾರೆ. ಹಳ್ಳಿಗಳಿಗೆ ಉಳಿಗಾಲವೇ ಇಲ್ಲದಂತಾಗಿದೆ. ' ನಮ್ಮ ತಾಯಿ ಹರಿದ ಸೀರೆಯಲ್ಲೇ ಛಂದ ಕಾಣ್ತಾಳೆ' ಎಂದು ಅವರು ಅಭಿಪ್ರಾಯಪಟ್ಟರು.

■ ದೈವಸ್ವರೂಪಿ ಗಾಂಧೀ

ಚಿಂತನಾ ಗೋಷ್ಠಿ ಉದ್ಘಾಟಿಸಿದ ಡಾ.ಬಾಲಗಂಗಾಧರನಾಥ ಸ್ವಾಮೀಜಿ ಮಾತನಾಡಿ, ಶಾಲೆ ಕಾಲೇಜು ಮತ್ತು ಸರ್ಕಾರಿ ಕಚೇರಿಗಳಲ್ಲಿ ಮಾತ್ರ ಗಾಂಧಿ ಫೋಟೋ, ಪ್ರತಿಮೆಗಳಿವೆ. ಇನ್ನು ಮುಂದೆ ಮಠ, ಮಾನ್ಯ ಹಾಗೂ ದೇವಸ್ಥಾನಗಳಲ್ಲೂ ಗಾಂಧಿ ಫೋಟೋ ಹಾಕಬೇಕು. ಗಾಂಧೀ ಕುರಿತ ಆಧ್ಯಾತ್ಮಿಕ ಚಿಂತನಗೋಷ್ಠಿ ಶಾಲಾ ಕಾಲೇಜುಗಳಲ್ಲಿ ಆಗಿಂದಾಗ್ಗೆ ನಡೆಯಬೇಕು ಎಂದರು.

ಬೇಲಿಮಠದ ಶಿವರುದ್ರ ಸ್ವಾಮೀಜಿ ಚಿಂತನಗೋಷ್ಠಿಯಲ್ಲಿ ಭಾಗವಹಿಸಿ ಆಧ್ಯಾತ್ಮಿಕತೆ ಎಂದರೆ ಮಠಮಾನ್ಯಗಳಿಗೆ ಎಡತಾಕುವುದಲ್ಲ. ಜನಪ್ರತಿನಿಧಿಗಳೆಂದೆನಿಸಿಕೊಂಡವರು ಈ ದಿಸೆಯಲ್ಲಿ ಜನರ ಹಾದಿ ತಪ್ಪಿಸುತ್ತಿದ್ದಾರೆ. ಗಾಂಧೀ ವಿಚಾರಧಾರೆಯನ್ನೊಳಗೊಂಡ ಮಾಹಿತಿ ಜನಸಾಮಾನ್ಯರಿಗೆ ನಿರಂತರವಾಗಿ ತಲುಪಬೇಕು. ಗಾಂಧೀ ತತ್ತ್ವಗಳನ್ನು ತಿಳಿಸಬೇಕು ಎಂದರು.

ತುಮಕೂರಿನ ವೀರೇಶಾನಂದ ಸರಸ್ವತಿ ಸ್ವಾಮೀಜಿ ಮಾತನಾಡಿ ಅಂತರ್ಯ ನಂಬಿದವರು ಗಾಂಧಿ. ಅಂತೆಯೇ ತನ್ನನ್ನು ತಾನು ಗೆದ್ದು ಪರರನ್ನು ಪ್ರೀತಿಯಿಂದ ಗೆದ್ದವರು ಎಂದರು.

ಮಾತನಾಡಿ ಆಧ್ಯಾತ್ಮ ಎಂದರೆ ಮನುಷ್ಯತ್ವ, ನಡೆ, ನುಡಿ, ಉಡುಗೆ, ಬದುಕು, ಬರಹ ಎಲ್ಲದರಲ್ಲೂ ಸಂದೇಶ ಕೊಟ್ಟವರು ಗಾಂಧಿ. ನಿಜವಾದ ಮನುಷ್ಯನಾಗಿ ಬದುಕಿದ ಗಾಂಧಿಯ ಜೀವನವೇ ಒಂದು ಸಂದೇಶ ಎಂದರು.

ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೆ.ಪಿ.ಕೃಷ್ಣ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ. ಹೊ. ಶ್ರೀನಿವಾಸಯ್ಯ, ಪ್ರೊ. ದಾಸೇಗೌಡ, ಸುಮಂಗಲಿ ಸೇವಾಶ್ರಮದ ಸುಶೀಲಮ್ಮ ಪಾಲ್ಗೊಂಡಿದ್ದರು.

ಈ ಸಂಜೆ

ಶುಕ್ರವಾರ, 27 ಆಗಸ್ಟ್, 2010



ಶೇಷಾದ್ರಿಪುರಂ ಕಾಲೇಜು ಎನ್‌ಎಸ್‌ಎಸ್ ಮತ್ತು ಯೂತ್ ರೆಡ್‌ಕ್ರಾಸ್ ಘಟಕಗಳು ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರವನ್ನು ದೂರದರ್ಶನ ಕೇಂದ್ರದ ನಿರ್ದೇಶಕ ಡಾ.ಮಹೇಶ್ ಜೋಷಿ ಉದ್ಘಾಟಿಸಿದರು. ರೆಡ್‌ಕ್ರಾಸ್ ಸಂಸ್ಥೆ ಸದಸ್ಯ ಡಾ.ಪೂಡೆ ಪಿ.ಕೃಷ್ಣ, ಪ್ರಾಂಶುಪಾಲ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ರೆಡ್‌ಕ್ರಾಸ್‌ನ ರಾಜು ಚಂದ್ರಶೇಖರ್, ಎನ್‌ಎಸ್‌ಎಸ್ ಅಧಿಕಾರಿ ಪ್ರೊ.ಪ್ರತಾಪ್ ಲಿಂಗಯ್ಯ ಮತ್ತಿತರರಿದ್ದರು.

ಉದ್ಘಾಟನೆ...

ಶೇಷಾದ್ರಿಪುರಂ ಕಾಲೇಜು ಎನ್‌ಎಸ್‌ಎಸ್ ಮತ್ತು ಯೂತ್ ರೆಡ್‌ಕ್ರಾಸ್ ಸಹಯೋಗದಲ್ಲಿ ಆಯೋಜಿಸಿದ್ದ ಜಿನಿವಾ ಕನ್ವೆಂಷನ್ ಮತ್ತು ಆರೋಗ್ಯ ತಪಾಸಣಾ ಶಿಬಿರವನ್ನು ಡಾ। ಮಹೇಶ್ ಜೋಶಿ ಉದ್ಘಾಟಿಸಿದರು. ಡಾ।ವೂಡೇ ಪಿ.ಕೃಷ್ಣ, ಡಾ।ನರಹಳ್ಳಿ ಬಾಲಸುಬ್ರಹ್ಮಣ್ಯ ಇದ್ದರು.

ಕನ್ನಡಪ್ರಭ, ಗುರುವಾರ, 26 ಆಗಸ್ಟ್ 2010



ಪುಟ 3



ಕರ್ನಾಟಕ ಗಾಂಧಿ ಸ್ಮಾರಕ ನಿಧಿ-ಗಾಂಧಿ ಶಾಂತಿ ಪ್ರತಿಷ್ಠಾನ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮವನ್ನು ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೆ ಪಿ. ಕೃಷ್ಣ ಉದ್ಘಾಟಿಸಿದರು. ಗಾಯಕ ತಿಮ್ಮರಾಜು, ಸ್ವಾತಂತ್ರ್ಯ ಹೋರಾಟಗಾರರಾದ ದಾಸೇಗೌಡ, ಕೋದಂಡರಾಮ, ಸಿದ್ಧಾರ್ಥ ಶರ್ಮ, ಕಿರುತೆರೆ ನಟ ಅನುಪಮ ಉಪಸ್ಥಿತರಿದ್ದರು.

ಪ್ರಜಾವಾಣಿ
ಸೋಮವಾರ 16 ಆಗಸ್ಟ್ 2010



ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಗಾಂಧಿ ಶಾಂತಿ ಪ್ರತಿಷ್ಠಾನ ಸಂಯುಕ್ತಾಶ್ರಯದಲ್ಲಿ ಶನಿವಾರದಂದು 63ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಗಾಂಧಿ ಭವನದಲ್ಲಿ ಏರ್ಪಡಿಸಿದ್ದ ಶಾಲಾ ಮಕ್ಕಳ ದೇಶಭಕ್ತಿ ಹಾಗೂ ಜಾನಪದ ಗೀತೆ ಗಾಯನ ಸ್ಪರ್ಧೆಯನ್ನು ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೇ ಪಿ.ಕೃಷ್ಣ ಉದ್ಘಾಟಿಸಿದರು. ಖ್ಯಾತ ಗಾಯಕ ಅಪ್ಪಗೆರೆ ತಿಮ್ಮರಾಜು, ಪ್ರೊ. ಹೆಚ್.ಆರ್. ದಾಸೇಗೌಡ, ಡಿ.ಕೆ. ಕೋದಂಡರಾಮು, ಸಿದ್ಧಾರ್ಥ ಶರ್ಮ, ಕೆ.ಟಿ. [illegible] ಹಾಗೂ ಇತರರು ಉಪಸ್ಥಿತರಿದ್ದರು.

ಪ್ರಜಾವಾಣಿ

ಭಾನುವಾರ 15ನೇ ಆಗಸ್ಟ್ 2010

ಉದ್ಘಾಟನೆ



ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ಶಾಂತಿ ಪ್ರತಿಷ್ಠಾನವು ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ನಗರದ ಗಾಂಧಿ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ದೇಶಭಕ್ತಿ ಮತ್ತು ಜಾನಪದ ಗೀತ ಗಾಯನ ಸ್ಪರ್ಧೆ ಕಾರ್ಯಕ್ರಮವನ್ನು ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಉದ್ಘಾಟಿಸಿದರು. ಸಿದ್ಧಾರ್ಥ ಶರ್ಮ, ಗಾಯಕ ಅಪ್ಪಗೆರೆ ತಿಮ್ಮರಾಜು, ಸ್ವಾತಂತ್ರ್ಯ ಹೋರಾಟಗಾರ ಪ್ರೊ. ಎಚ್.ಆರ್. ದಾಸೇಗೌಡ, ಡಿ.ಕೆ. ಕೋದಂಡರಾಮ , ಕೆ.ಪಿ. ಅನುಪಮ ಚಿತ್ರದಲ್ಲಿದ್ದಾರೆ.

ಪ್ರಜಾವಾಣಿ

ಮಂಗಳವಾರ 10ನೇ ಆಗಸ್ಟ್ 2010

ಉದ್ಘಾಟನೆ



ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ವತಿಯಿಂದ ಇತ್ತೀಚೆಗೆ ಆಯೋಜಿಸಲಾಗಿದ್ದ ಪ್ರಥಮ ಪದವಿ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ಪ್ರತಿಭಾ ವಿದ್ಯಾರ್ಥಿ ವೇತನ ಪುರಸ್ಕಾರ ಸಮಾರಂಭವನ್ನು ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ ಉದ್ಘಾಟಿಸಿದರು. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್ ಆರ್ ಪಂಡಿತಾರಾಧ್ಯ, ಗೌರವ ಕಾರ್ಯದರ್ಶಿ ಡಾ. ವೂಡೆ ಪಿ ಕೃಷ್ಣ ಮತ್ತಿತರರು ಇದ್ದರು.

ಈ ಸಂಜೆ
ಭಾನುವಾರ, 08 ಆಗಸ್ಟ್, 2010



ಬೆಂಗಳೂರಿನ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನಲ್ಲಿ ಇತ್ತೀಚೆಗೆ ಏರ್ಪಡಿಸಲಾಗಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾಳಿ ಅವರನ್ನು ಸನ್ಮಾನಿಸಲಾಯಿತು. ಶೇಷಾದ್ರಿಪುರಂ ಸಂಸ್ಥೆಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಗೌರವ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ, ಪ್ರಾಂಶುಪಾಲ ಗಾಂಧಿ ದಿವಾನ್‌ಪ್ರಭು ಹಾಜರಿದ್ದರು.


ಸಂಜೆವಾಣಿ ಶನಿವಾರ 7 ಆಗಸ್ಟ್ 2010



ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು ಆಯೋಜಿಸಿದ್ದ ಪ್ರಥಮ ಪದವಿ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ಪ್ರತಿಭಾ ವಿದ್ಯಾರ್ಥಿ ವೇತನ ಪುರಸ್ಕಾರ ಸಮಾರಂಭದಲ್ಲಿ ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ ಅವರನ್ನು ಸನ್ಮಾನಿಸಲಾಯಿತು. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಗೌರವ ಕಾರ್ಯದರ್ಶಿ, ಡಾ. ವೂಡೇ ಪಿ. ಕೃಷ್ಣ, ಪ್ರಾಂಶುಪಾಲ ಗಾಂಧೀ ದಿವಾನ್ ಪ್ರಭು ಹಾಗೂ ಇತರರು ಚಿತ್ರದಲ್ಲಿದ್ದಾರೆ.

ಸಂಯುಕ್ತ ಕರ್ನಾಟಕ | ಬೆಂಗಳೂರು | 6-8-2010

ರಾಜಧಾನಿ




ಬೆಂಗಳೂರಿನ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಸ್ವಾಗತ ಹಾಗೂ ಪ್ರತಿಭಾ ವಿದ್ಯಾರ್ಥಿ ವೇತನ ಪುರಸ್ಕಾರ ಸಮಾರಂಭವನ್ನು ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ ಉದ್ಘಾಟಿಸಿದರು. ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್ ಅಧ್ಯಕ್ಷ ಎನ್. ಆರ್. ಪಂಡಿತಾರಾಧ್ಯ, ಗೌರವ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಸಹ ಕಾರ್ಯದರ್ಶಿ ಎ. ಆರ್. ಶ್ರೀನಿವಾಸಯ್ಯ ಇತರ ಗಣ್ಯರು ಉಪಸ್ಥಿತರಿದ್ದರು.

ಪ್ರಜಾವಾಣಿ

ಗುರುವಾರ 5ನೇ ಆಗಸ್ಟ್ 2010

ಪ್ರತಿಭಾ ಪುರಸ್ಕಾರ



ಶೇಷಾದ್ರಿಪುರ ಸಂಜೆ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಪುನರ್ ಮನನ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಇತ್ತೀಚೆಗೆ ಬದರಿಕಾಶ್ರಮದ ಅಧ್ಯಕ್ಷ ಸ್ವಾಮಿ ಓಂಕಾರಾನಂದ ಮಹಾರಾಜ್ ಉದ್ಘಾಟಿಸಿದರು. ಆಡಳಿತ ಸಲಹಾ ಸಮಿತಿಯ ಅಧ್ಯಕ್ಷ ಎಸ್.ವೀರಯ್ಯ, ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ.ಪಿ.ಕೃಷ್ಣ, ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಪ್ರಾಚಾರ್ಯೆ ಆರ್.ಮಹಾಲಕ್ಷ್ಮಿ, ಇತರರು ಭಾಗವಹಿಸಿದ್ದರು.

ಕನ್ನಡಪ್ರಭ, ಬೆಂಗಳೂರು

ಗುರುವಾರ, 5 ಆಗಸ್ಟ್ 2010

ಹಣ ಕೀಳುವ ಶಿಕ್ಷಣ ಸಂಸ್ಥೆಗಳನ್ನು ಮಟ್ಟ ಹಾಕಲು ಚಿಂತನೆ: ಲಿಂಬಾವಳಿ

ಬೆಂಗಳೂರು: ಪಾಲಕರ ಜೇಬಿನಿಂದ ಹಣ ಕೀಳುವ ಶಿಕ್ಷಣ ಸಂಸ್ಥೆಗಳನ್ನು ಮಟ್ಟ ಹಾಕಲು ಸರ್ಕಾರ ಚಿಂತನೆ ನಡೆಸಿದೆ ಎಂದು ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ ತಿಳಿಸಿದರು. ನಗರದ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನಲ್ಲಿ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅವರು, ರಾಜ್ಯದಲ್ಲಿ ಪದವಿ ಓದುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದೆ. ಇಂದು ರಾಜ್ಯದಲ್ಲಿ ಶೇ. 11 ರಷ್ಟು ವಿದ್ಯಾರ್ಥಿಗಳು ಮಾತ್ರ ಪದವಿ ಶಿಕ್ಷಣ ಪಡೆಯುತ್ತಿದ್ದಾರೆ. ಅದಕ್ಕೆ ಅಪವಾದದಂತೆ ಹಗಲಿನಲ್ಲಿ ಕೆಲಸ ಮಾಡಿ ಇರುಳಿನಲ್ಲಿ



ಓದುತ್ತಿರುವ ನೀವು ಓದು ನಿಲ್ಲಿಸದೆ ಗುರಿ ಮುಟ್ಟಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಶೇಷಾದ್ರಿಪುರಂ ಕಾಲೇಜು ಬಡ ವಿದ್ಯಾರ್ಥಿಗಳಿಗಾಗಿ ಶ್ರಮಿಸುವ ಉತ್ತಮ ಸಂಸ್ಥೆಯಾಗಿದೆ ಎಂದು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಪದವಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಾದ ನಟರಾಜ್, ಕಾರ್ತಿಕ್.ಡಿ.ಶಣೈ ಅವರಿಗೆ ವಿದ್ಯಾರ್ಥಿವೇತನ ನೀಡಿ ಪುರಸ್ಕರಿಸಲಾಯಿತು. ಶಿಕ್ಷಣ ದತ್ತಿ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ, ಕಾಲೇಜಿನ ಪ್ರಿನ್ಸಿಪಾಲ್ ಪ್ರೊ.ಗಾಂಧಿ ಡಿ.ಪ್ರಭು ಇದ್ದರು.

ಗುರುವಾರ 5 ಆಗಸ್ಟ್ 2010 | 8 | UDAYAVANI - BANGALORE ಉದಯವಾಣಿ



ಬೆಂಗಳೂರಿನ ಶೇಷಾದ್ರಿಪುರ ಕಾಲೇಜಿನಲ್ಲಿ ಬುಧವಾರ ಏರ್ಪಡಿಸಿದ್ದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸುವ ಸಮಾರಂಭದಲ್ಲಿ ಸಚಿವ ಅರವಿಂದ ಲಿಂಬಾವಳಿ, ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಪ್ರಧಾನ ಕಾರ್ಯದರ್ಶಿ ಡಾ| ಹೂಡೆ ಪಿ. ಕೃಷ್ಣ ಮತ್ತಿತರರು ಎನ್‌ಸಿಸಿ ವಿದ್ಯಾರ್ಥಿಗಳ ಜತೆ ಛಾಯಾಚಿತ್ರ ತೆಗೆಸಿಕೊಂಡಿರುವ ದೃಶ್ಯ.

ತರಗತಿ ಹೆಚ್ಚಳಕ್ಕೆ ಅನುಮತಿ



ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು ಬುಧವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಸಚಿವ ಅರವಿಂದ ಲಿಂಬಾವಳಿ ಎನ್‌ಸಿಸಿ ಕೆಡೆಟ್‌ಗಳಿಂದ ಗೌರವ ಸ್ವೀಕರಿಸಿದರು.

▪ ವಿಕ ಸುದ್ದಿಲೋಕ ಬೆಂಗಳೂರು

ಶೇಷಾದ್ರಿಪುರಂ ಮತ್ತು ವಿಜಯ ಸಂಜೆ ಕಾಲೇಜುಗಳು ತರಗತಿಗಳ ವಿಭಾಗ ಹೆಚ್ಚಿಸಲು ಬಯಸಿದರೆ, ಸರಕಾರ ಅನುಮತಿ ನೀಡಲಿದೆ ಎಂದು ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ ತಿಳಿಸಿದರು.

ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು ಬುಧವಾರ ಕಾಲೇಜು ಆವರಣದಲ್ಲಿ ಏರ್ಪಡಿಸಿದ್ದ ಪ್ರಥಮ ಪದವಿ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ಪ್ರತಿಭಾ ವಿದ್ಯಾರ್ಥಿ ವೇತನ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದರು. ಸರಕಾರ ಸಂಜೆ ಕಾಲೇಜು ಸ್ಥಾಪಿಸಿಲ್ಲ. ಹೀಗಾಗಿ ಉತ್ತಮ ಖಾಸಗಿ ಸಂಜೆ ಕಾಲೇಜುಗಳಲ್ಲಿ ಸೀಟು ಬಯಸಿ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ನಿರಾಸೆ ತಪ್ಪಿಸಲು ಈ ಕ್ರಮ ಅನಿವಾರ್ಯ ಎಂದರು.

ಶೇಷಾದ್ರಿಪುರಂ ಕಾಲೇಜಿನಲ್ಲಿ ಸೀಟು ಕೊಡಿಸಿ ಎಂದು ಹಲವು ವಿದ್ಯಾರ್ಥಿಗಳು ತಮ್ಮ ಬಳಿ ಆಗಮಿಸುತ್ತಾರೆ. ಇದು ಕಾಲೇಜಿನ ಬೇಡಿಕೆ ಸೂಚಿಸುತ್ತದೆ. ಪೋಷಕರಿಗೆ ಹೊರೆಯಾಗದೆ ಉದ್ಯೋಗ ಮಾಡಿ ಸ್ವಂತ ಪರಿಶ್ರಮದಿಂದ ವಿದ್ಯಾಭ್ಯಾಸ ಮುಂದುವರಿಸುವ ವಿದ್ಯಾರ್ಥಿಗಳನ್ನು ಕಂಡರೆ ಸಂತೋಷವಾಗುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯು ಖಾಸಗಿ ವಿವಿ ಸ್ಥಾಪನೆಯ ಎಲ್ಲ ಅರ್ಹತೆ ಪಡೆದಿದೆ. ಜತೆಗೆ ಮಂಡ್ಯ, ಮೈಸೂರು, ತುಮಕೂರಿನಲ್ಲಿ ಶಾಖೆ ತೆರೆದು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲು ಮುಂದಾಗಿರುವುದು ಉತ್ತಮ ಬೆಳವಣಿಗೆ. ಆದರೆ, ಈ ಸಂಸ್ಥೆ ದಕ್ಷಿಣ ಕರ್ನಾಟಕಕ್ಕೆ ಸೀಮಿತವಾಗದೆ ಉತ್ತರ ಕರ್ನಾಟಕದಲ್ಲೂ ಶಾಖೆ ಆರಂಭಿಸಬೇಕು ಎಂದು ಸಲಹೆ ನೀಡಿದರು.

ಶೇ.50 ಶುಲ್ಕ ಶಿಕ್ಷಣ ಸಂಸ್ಥೆಗೆ: ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಒಟ್ಟು ಶುಲ್ಕದಲ್ಲಿ ಶೇ.50ರಷ್ಟು ಶಿಕ್ಷಣ ಸಂಸ್ಥೆಯಲ್ಲೇ ಉಳಿಯುವಂತೆ ಶೀಘ್ರವೇ ಆದೇಶ ಹೊರಡಿಸಲಾಗುವುದು ಎಂದರು.

ಸಂಸ್ಥೆಗಳು ಸರಕಾರಕ್ಕೆ ಸಲ್ಲಬೇಕಾದ ಶುಲ್ಕ ನೀಡಿಕೆಯಲ್ಲಿ ವಿಳಂಬ ಮಾಡಿದರೂ ಉಪನ್ಯಾಸಕರಿಗೆ ನೀಡುವ ವೇತನ ವಿಳಂಬವಾಗದಂತೆ ಎಚ್ಚರಿಕೆ ವಹಿಸಲಾಗುವುದು. ಪೋಷಕರ ಜೇಬಿನಿಂದ ಹಣ ಕೀಳುವ ಮತ್ತು ಶಿಕ್ಷಣವನ್ನೇ ವಾಣಿಜ್ಯ ಕೇಂದ್ರವಾಗಿಸಿಕೊಂಡಿರುವ ಶಿಕ್ಷಣ ಸಂಸ್ಥೆಗಳಿಗೆ ಕಡಿವಾಣ ಹಾಕಲು ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಎನ್.ಆರ್. ಪಂಡಿತಾರಾಧ್ಯ, ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಜಂಟಿ ಕಾರ್ಯದರ್ಶಿ ಗಂಗಾಧರಯ್ಯ, ಆಡಳಿತ ಸಲಹಾ ಮಂಡಳಿಯ ಅಧ್ಯಕ್ಷ ಪ್ರೊ.ಸಿ.ಎಲ್. ಬಸವರಾಜಯ್ಯ, ಪ್ರಿನ್ಸಿಪಾಲ್ ಪ್ರೊ. ಗಾಂಧಿ ದಿವಾನ್ ಪ್ರಭು, ಎ.ಆರ್. ಶ್ರೀನಿವಾಸಯ್ಯ ಪಾಲ್ಗೊಂಡಿದ್ದರು.

ಕಾನೂನು ತಜ್ಞರ ತಾಣ

ಶೇಷಾದ್ರಿಪುರಂ ಕಾನೂನು ಕಾಲೇಜು

ಒಂದು ಸಂಸ್ಥೆ 24 ಸಹ ಶಿಕ್ಷಣ ಸಂಸ್ಥೆ ಹೊಂದಿ, 21 ಸಾವಿರ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿರುವುದು ಸಾಮಾನ್ಯ ಸಾಧನೆಯಲ್ಲ. ಎಲ್‌ಕೆಜಿಯಿಂದ ಹಿಡಿದು ಸ್ನಾತಕೋತ್ತರ ಶಿಕ್ಷಣದವರೆಗೆ ನಾನಾ ವಿಷಯಕ್ಕೆ ವೇದಿಕೆಯಾಗುವ ಸಂಸ್ಥೆಗಳು ವಿರಳ. ಅಂಥ ಸಾಲಿಗೆ ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್ ಸೇರುತ್ತದೆ.



ಡಾ. ವೂಡೇ ಪಿ. ಕೃಷ್ಣ

ಮುಖ್ಯಸ್ಥೆ ಟಿ.ಎನ್. ಮಂಜುಳಾದೇವಿ ನೇತೃತ್ವದಲ್ಲಿ ಅಧ್ಯಕ್ಷ ಎಸ್.ಆರ್. ಪಂಡಿತಾರಾಧ್ಯ, ಪ್ರಧಾನಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಸಂಸ್ಥೆಯನ್ನು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ. ಶೇಷಾದ್ರಿಪುರಂ ನಂ.27, ನಾಗಪ್ಪ ಸ್ಟ್ರೀಟ್‌ನಲ್ಲಿರುವ ಸಂಸ್ಥೆಯ ಇತಿಹಾಸ ದೊಡ್ಡದು. 1930ರಲ್ಲಿ ಸ್ತ್ರೀ ಸಮಾಜ ಮಾಧ್ಯಮಿಕ ಶಾಲೆಯಿಂದ ಪ್ರಾರಂಭವಾದ ಸಂಸ್ಥೆ 1936ರವರೆಗೆ ಅದೇ ಹೆಸರಿನಲ್ಲಿ ಸಾಗಿತು. 1980 ರಲ್ಲಿ ಶೇಷಾದ್ರಿಪುರಂ ಎಜುಕೇಷನಲ್ ಅಸೋಸಿಯೇಷನ್ ಎಂದು ಬದಲಾಯಿತು.



ಪ್ರೊ. ಆಶಾ ಎ.ಜಿ.

ಧರ್ಮಸ್ಥಳದ ಡಾ. ವೀರೇಂದ್ರ ಹೆಗ್ಗಡೆ, ರಾಮಕೃಷ್ಣಾಶ್ರಮದ ಸ್ವಾಮಿ ಗೌತಮಾನಂದ, ಶ್ಯಾಮಲ ಜಿ. ಭಾವೆಯಂಥವರು ಇಲ್ಲಿ ವಿದ್ಯಾರ್ಜನೆ ಮಾಡಿದ್ದಾರೆ. 1960, 66ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸಂಸ್ಥೆಯ ವಿದ್ಯಾರ್ಥಿಗಳು ಪ್ರಥಮ ರ್‍ಯಾಂಕ್ ಗಳಿಸಿದ್ದಾರೆ.

ಸಂಸ್ಥೆಯು 6 ಶಾಲೆಗಳು, 6 ಪದವಿಪೂರ್ವ ಕಾಲೇಜುಗಳು, 6 ಪ್ರಥಮ ದರ್ಜೆ ಕಾಲೇಜುಗಳು, 3 ಸ್ನಾತಕೋತ್ತರ ಪದವಿ ಕಾಲೇಜುಗಳು, 1 ಫಾರ್ಮಸಿ ಮತ್ತು 1 ಕಾನೂನು ಕಾಲೇಜನ್ನು ಹೊಂದಿದೆ.

ಕಾನೂನು ಕಾಲೇಜಿನ ಇತಿಹಾಸ

1984-85ನೇ ಸಾಲಿನಲ್ಲಿ ಆರಂಭವಾದ ಶೇಷಾದ್ರಿ ಪುರಂ ಕಾನೂನು ಕಾಲೇಜು, ಮೆಜೆಸ್ಟಿಕ್‌ನಿಂದ ಒಂದೂವರೆ ಕಿ.ಮೀ. ದೂರದಲ್ಲಿದೆ. ನಂ.1, ಗೋವಿಂದರಾವ್ ಬೀದಿ, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂನಲ್ಲಿರುವ ಕಾಲೇಜು ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿರುವ ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುತ್ತದೆ. ಪ್ರೊ. ಆಶಾ ಎ.ಜಿ. ಕಾನೂನು ಕಾಲೇಜಿನ ಪ್ರಾಂಶುಪಾಲರಾಗಿ ಮುನ್ನಡೆಸುತ್ತಿದ್ದಾರೆ. ಇಲ್ಲಿ ಹಲವಾರು ಮಂದಿ ಪೂರ್ಣಾವಧಿ ಉಪನ್ಯಾಸಕರನ್ನು ಒಳಗೊಂಡಿದೆ. ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಡಾ. ಭಕ್ತವತ್ಸಲ, ಪ್ರೊ. ಜಗನ್ನಾಥನ್, ಜಿಲ್ಲಾ ನ್ಯಾಯಾಧೀಶರಾದ ಪ್ರೊ. ಎಚ್.ಬಿ. ಪ್ರಭಾಕರ ಶಾಸ್ತ್ರಿ ಮೊದಲಾದವರೂ ಕೂಡ ಇಲ್ಲಿ ವಿದ್ಯಾರ್ಥಿಗಳನ್ನು ತರಬೇತುಗೊಳಿಸಿದ್ದಾರೆ. ಶಿಕ್ಷಣ ಇಂಗ್ಲಿಷ್ ಭಾಷೆಯಲ್ಲಿ ನೀಡಲ್ಪಟ್ಟರೂ ವಿದ್ಯಾರ್ಥಿಗಳು ಪರೀಕ್ಷೆಯನ್ನು ಕನ್ನಡದಲ್ಲೂ ಬರೆಯಬಹುದು.

ಫಲಿತಾಂಶದಲ್ಲಿ ಪ್ರಗತಿ

ಶೇಷಾದ್ರಿಪುರಂ ಕಾಲೇಜು ರಾಜ್ಯ ಕಾನೂನು ವಿವಿಯ ಅತ್ಯುತ್ತಮ ಕಾಲೇಜೆಂದು ಪರಿಗಣಿತವಾಗಿದೆ. ಕಳೆದ 2 ದಶಕಗಳಿಂದ ವಿದ್ಯಾರ್ಥಿಗಳು ಅತ್ಯುತ್ತಮ ಫಲಿತಾಂಶ ನೀಡುತ್ತಿದ್ದಾರೆ. 3 ವರ್ಷಗಳಿಂದ 3 ವರ್ಷದ ಕೋರ್ಸ್ ನಲ್ಲಿ ಸಂಸ್ಥೆಯ ವಿದ್ಯಾರ್ಥಿಗಳು ಬೆಂಗಳೂರು ವಿವಿ ಪರೀಕ್ಷೆಗಳಲ್ಲಿ ಗಣನೀಯ ಫಲಿತಾಂಶ ನೀಡುತ್ತಿದ್ದು ಫಲಿತಾಂಶ ಶೇ.70ಕ್ಕೆ ಮುಟ್ಟಿದೆ. ಕಾಲೇಜಿನ ಸಾಧನೆಯಿಂದ ಖುಷಿಯಾಗಿರುವ ನವದೆಹಲಿಯ ಬಾರ್ ಕೌನ್ಸಿಲ್ ಆಫ್ ಇಂಡಿಯಾ 2004ರಲ್ಲಿ ಬಿಎ-ಎಲ್‌ಎಲ್‌ಬಿ ಮತ್ತು 2010ರಲ್ಲಿ ಬಿಬಿಎ-ಎಲ್‌ಎಲ್‌ಬಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಅವಕಾಶ ನೀಡಿದೆ.

3 ವರ್ಷದ ಕಾನೂನು ಶಿಕ್ಷಣ

ಈ ಕೋರ್ಸ್ 6 ಸೆಮಿಸ್ಟರ್‌ಗಳನ್ನು ಒಳಗೊಂಡಿರುವ 3 ವರ್ಷದ ಕಾನೂನು ಶಿಕ್ಷಣವಾಗಿದೆ. ಯಾವುದೇ ಮಾನ್ಯತೆ ಪಡೆದಿರುವ ಸ್ವದೇಶಿ ಅಥವಾ ವಿದೇಶಿ ಶಿಕ್ಷಣ ಸಂಸ್ಥೆಗಳಿಂದ ಪದವಿ ಹೊಂದಿರುವ ವಿದ್ಯಾರ್ಥಿ ಇಲ್ಲಿ ಪ್ರವೇಶ ಪಡೆಯಬಹುದು. ಸಾಮಾನ್ಯ ವರ್ಗದ ವಿದ್ಯಾರ್ಥಿಗಳಾದರೆ ಕನಿಷ್ಠ ಶೇ. 45 ಫಲಿತಾಂಶ ಕಡ್ಡಾಯ. ಪರಿಶಿಷ್ಟ ವರ್ಗ/ಪಂಗಡದ ವಿದ್ಯಾರ್ಥಿಗಳಿಗೆ ಶೇ. 40 ಫಲಿತಾಂಶವಿರುವುದು ಕಡ್ಡಾಯವಾಗಿದೆ. ಸಾಮಾನ್ಯ ವರ್ಗಕ್ಕೆ 30 ವರ್ಷ, ಪ.ವ, ಪ.ಪಂಕ್ಕೆ 35 ವರ್ಷ ಪ್ರವೇಶ ಪಡೆಯಲು ಗರಿಷ್ಠ ವಯೋಮಿತಿಯಾಗಿದೆ.

5 ವರ್ಷದ ಬಿಎ-ಎಲ್‌ಎಲ್‌ಬಿ ಕೋರ್ಸ್

ಈ ಕೋರ್ಸ್ 5 ವರ್ಷದ ಅವಧಿಯದ್ದಾಗಿದೆ. ಬಿಎ ಮತ್ತು ಕಾನೂನು ಪದವಿಗಳನ್ನು ಒಟ್ಟಿಗೆ ಪಡೆದುಕೊಳ್ಳುವ ಅವಕಾಶವನ್ನು ಈ ಕೋರ್ಸ್‌ನ ಮೂಲಕ ಸೃಷ್ಟಿಸಲಾಗಿದೆ. ಪದವಿಪೂರ್ವ ಶಿಕ್ಷಣ ಅಥವಾ ಅದಕ್ಕೆ ಸಮನಾಗಿರುವ ಯಾವುದೇ ಶಿಕ್ಷಣವನ್ನು ಮಾನ್ಯತೆ ಪಡೆದಿರುವ ಸ್ವದೇಶಿ, ವಿದೇಶಿ ಶಿಕ್ಷಣ ಸಂಸ್ಥೆಗಳಿಂದ ಪಡೆದಿದ್ದರೆ ಪ್ರವೇಶ ಪಡೆಯಬಹುದು. ಮೂಲಭೂತ ಶಿಕ್ಷಣ ಹೊಂದದೆ ಪ.ಪೂ, ಪದವಿ, ಸ್ನಾತಕೋತ್ತರ ಪದವಿಗಳನ್ನು ದೂರಶಿಕ್ಷಣದ ಮೂಲಕವೇ ಪೂರೈಸಿರುವ ವಿದ್ಯಾರ್ಥಿಗಳಿಗೆ ಇಲ್ಲಿ ಪ್ರವೇಶವಿರುವುದಿಲ್ಲ. 20 ವರ್ಷ ಸಾಮಾನ್ಯ ವರ್ಗಕ್ಕೂ, 22 ವರ್ಷವನ್ನು ಪ.ವ,ಪ.ಪಂಕ್ಕೂ ಪ್ರವೇಶ ಪಡೆದುಕೊಳ್ಳುವ ವಯೋಮಿತಿಯನ್ನಾಗಿ ಪರಿಗಣಿಸಲಾಗಿದೆ.

5 ವರ್ಷದ ಬಿಬಿಎ-ಎಲ್‌ಎಲ್‌ಬಿ ಕೋರ್ಸ್

ಐದು ವರ್ಷದ ಈ ಕೋರ್ಸ್‌ನಲ್ಲಿ 10 ಸೆಮಿಸ್ಟರ್‌ಗಳಿದ್ದು ಎರಡು ಪದವಿಗಳನ್ನು ಪಡೆದುಕೊಳ್ಳಬಹುದು. ಕಾನೂನಿನಲ್ಲಿ ಪದವೀಧರನಾಗುವುದರ ಜೊತೆಗೆ ಕಲಾವಿಷಯಗಳಲ್ಲೂ ಪದವೀಧರನಾಗುವ ಅವಕಾಶವನ್ನು ಈ ಶಿಕ್ಷಣದ ಮೂಲಕ ನೀಡಲಾಗಿದೆ. ಉಳಿದಂತೆ ಬಿಎಲ್‌ಎಲ್‌ಬಿ ಕೋರ್ಸ್‌ನ ನಿಯಮಗಳೇ ಉಳಿದಂತೆ ಇದಕ್ಕೂ ಅನ್ವಯಿಸುತ್ತದೆ.


ಉಪನ್ಯಾಸಕರು

10 ಮಂದಿ ಪೂರ್ಣಾವಧಿ ಮತ್ತು 13 ಮಂದಿ ಅತಿಥಿ ಉಪನ್ಯಾಸಕರನ್ನು ಹೊಂದಿದೆ. ಶಿಕ್ಷಣದಲ್ಲಿ ಇದುವರೆಗೆ ಗುಣಮಟ್ಟ ಕಾಯ್ದುಕೊಂಡಿರುವ ಸಂಸ್ಥೆ ನಾಡಿನ ವಿದ್ಯಾರ್ಥಿಗಳ ಗಮನ ಸೆಳೆದಿದೆ. ಹಲವಾರು ವಿದ್ಯಾರ್ಥಿಗಳನ್ನು, ಕಾನೂನು ತಜ್ಞರನ್ನು ನೀಡಿರುವ ಈ ಸಂಸ್ಥೆಯಿಂದ ಸಮಾಜದ ನಿರೀಕ್ಷೆ ಹೆಚ್ಚಾಗಿದೆ. ಅದನ್ನು ಪೂರೈಸಲು ಸಂಸ್ಥೆ ದಿಟ್ಟ ಹೆಜ್ಜೆಗಳೊಂದಿಗೆ ಸಾಗಿದೆ.



ಉದಯವಾಣಿ ಜುಲೈ 27, 2010


ಡಾ. ಎಸ್.ಆರ್. ಲೀಲಾ ಅವರಿಗೆ ಸನ್ಮಾನ



ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಆಯೋಜಿಸಿದ್ದ ಕಾಲೇಜು ಉಪನ್ಯಾಸಕರ ಪುನಃಶ್ಚೇತನ ಶಿಬಿರದಲ್ಲಿ ವಿಧಾನ ಪರಿಷತ್ ಸದಸ್ಯೆ ಡಾ. ಎಸ್.ಆರ್. ಲೀಲಾ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಗೌರವ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಸಹ ಕಾರ್ಯದರ್ಶಿ ಎ.ಆರ್. ಶ್ರೀನಿವಾಸಯ್ಯ, ಖಜಾಂಚಿ ಬಿ.ಎಂ. ಪಾರ್ಥಸಾರಥಿ, ಟ್ರಸ್ಟಿ ಕೆ. ಕೃಷ್ಣಸ್ವಾಮಿ, ಪ್ರಾಂಶುಪಾಲ ಎಂ.ಆರ್. ಸಂತಾನಂ, ಎಂ. ಆರ್. ಶ್ರೀನಿವಾಸ್, ಡಾ. ಎಲ್. ಉಮಾದೇವಿ, ಜೈಶ್ರೀ ಸಿಂಗ್, ಆರ್. ಮಹಾಲಕ್ಷ್ಮಿ ಉಪಸ್ಥಿತರಿದ್ದರು.

ಕನ್ನಡಪ್ರಭ, ಬೆಂಗಳೂರು

ಮಂಗಳವಾರ, 27 ಜುಲೈ 2010



ಪುನಶ್ಚೇತನ ಶಿಬಿರ...

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಆಯೋಜಿಸಿದ್ದ ಕಾಲೇಜು ಉಪನ್ಯಾಸಕರ ಪುನಶ್ಚೇತನ ಶಿಬಿರದಲ್ಲಿ ವಿಧಾನಪರಿಷತ್ ಸದಸ್ಯೆ ಡಾ. ಎಸ್. ಆರ್. ಲೀಲಾ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆ ಅಧ್ಯಕ್ಷ ಎಸ್. ಆರ್. ಪಂಡಿತಾರಾಧ್ಯ, ಗೌರವ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಸಹ ಕಾರ್ಯದರ್ಶಿ ವಿ. ಆರ್. ಶ್ರೀನಿವಾಸಯ್ಯ, ಖಜಾಂಚಿ ಬಿ.ಎಂ. ಪಾರ್ಥಸಾರಥಿ ಮತ್ತಿತರರು ಉಪಸ್ಥಿತರಿದ್ದರು.

ಹೊಸ ದಿಗಂತ 27 ಜುಲೈ 2010 ಮಂಗಳವಾರ




ಸನ್ಮಾನ...

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಏರ್ಪಡಿಸಿದ್ದ ಉಪನ್ಯಾಸಕರ ಪುನಶ್ಚೇತನ ಶಿಬಿರದಲ್ಲಿ ವಿಧಾನ ಪರಿಷತ್ ಸದಸ್ಯ ಡಾ. ಎಸ್. ಆರ್. ಲೀಲಾ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆ ಅಧ್ಯಕ್ಷ ಎನ್. ಆರ್. ಪಂಡಿತಾರಾಧ್ಯ ಹಾಗೂ ಇತರರು ಇದ್ದಾರೆ.

ಪ್ರಜಾವಾಣಿ

ಮಂಗಳವಾರ 27 ಜುಲೈ 2010




ಸನ್ಮಾನ: ಶೇಷಾದ್ರಿಪುರಂ ಶಿಕ್ಷಣಸಂಸ್ಥೆ ನಗರದಲ್ಲಿ ಆಯೋಜಿಸಿದ್ದ ಕಾಲೇಜು ಉಪನ್ಯಾಸಕರ ಪುನಶ್ಚೇತನ ಶಿಬಿರದಲ್ಲಿ ವಿಧಾನ ಪರಿಷತ್ ಸದಸ್ಯೆ ಡಾ. ಎಸ್.ಆರ್. ಲೀಲಾ ಅವರನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ಸಂಸ್ಥೆ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಗೌರವ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಡಾ. ಎಲ್. ಉಮಾದೇವಿ, ಆರ್. ಮಹಾಲಕ್ಷ್ಮಿ ಮೊದಲಾದವರು ಇದ್ದಾರೆ.

ಈ ಸಂಜೆ ಮಂಗಳವಾರ, 27 ಜುಲೈ 2010



ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಆಯೋಜಿಸಿದ್ದ ಉಪನ್ಯಾಸಕರ ಪುನಃಶ್ಚೇತನ ಶಿಬಿರದಲ್ಲಿ ವಿಧಾನ ಪರಿಷತ್ ಸದಸ್ಯೆ ಡಾ. ಎಸ್. ಆರ್. ಲೀಲಾ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆ ಅಧ್ಯಕ್ಷ ಎನ್. ಆರ್. ಪಂಡಿತಾರಾಧ್ಯ, ಗೌ.ಕಾ.ಡಾ.ವೂಡೇ ಪಿ.ಕೃಷ್ಣ ಸಹಕಾರ್ಯದರ್ಶಿ ಎ.ಆರ್.ಶ್ರೀನಿವಾಸಯ್ಯ, ಖಜಾಂಚಿ ಬಿ.ಎಂ.ಪಾರ್ಥಸಾರಥಿ, ಟ್ರಸ್ಟಿ ಕೆ.ಕೃಷ್ಣಸ್ವಾಮಿ, ಪ್ರಾಂಶುಪಾಲರಾದ ಸಂತಾನಂ, ಎಂ.ಆರ್.ಶ್ರೀನಿವಾಸ್, ಡಾ.ಎಲ್.ಉಮಾದೇವಿ, ಜೈಶ್ರೀ ಸಿಂಗ್, ಆರ್.ಮಹಾಲಕ್ಷ್ಮಿ ಉಪಸ್ಥಿತರಿದ್ದರು.

ಪ್ರಜಾವಾಣಿ ಮಂಗಳವಾರ 27ನೇ ಜುಲೈ 2010



ಶೇಷಾದ್ರಿಪುರ ಸ್ವತಂತ್ರ ಪದವಿಪೂರ್ವ ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ಪಿಯುಸಿ ವಿದ್ಯಾರ್ಥಿಗಳ ಪುನಶ್ಚೇತನ ಕಾರ್ಯಕ್ರಮದಲ್ಲಿ ಜೈನ್ ವಿ.ವಿಯ ಪ್ರಭಾರ ಕುಲಪತಿ ಡಾ. ಸಂದೀಪ ಶಾಸ್ತ್ರಿ ಮಾತನಾಡಿದರು. ಚಿತ್ರದಲ್ಲಿ ಪ್ರಾಚಾರ್ಯ ಪ್ರೊ.ಜಯಶ್ರೀ ಜೆ.ಸಿಂಗ್, ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಆಡಳಿತ ಮಂಡಳಿ ಅಧ್ಯಕ್ಷ ಎಸ್. ಶೇಷನಾರಾಯಣ, ಶೇಷಾದ್ರಿಪುರ ದತ್ತಿ ನಿಧಿಯ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ.ಕೃಷ್ಣ ಮತ್ತಿತರರು ಇದ್ದಾರೆ.

'ಸ್ವಂತಿಕೆಯಿಂದ ಮಾತ್ರ ಗುರಿ ಸಾಧನೆ ಸಾಧ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿ ಜೀವನದ ಹಾದಿಯಲ್ಲಿ ಇತರರನ್ನು ಅನುಸರಿಸದೆ ಸ್ವಂತಿಕೆಯಿಂದ ಗುರಿ ಸಾಧನೆ ಮಾಡಬೇಕೆಂದು ಜೈನ್ ವಿ.ವಿ ಪ್ರಭಾರ ಕುಲಪತಿ ಡಾ. ಸಂದೀಪ ಶಾಸ್ತ್ರಿ ತಿಳಿಸಿದರು.

ಅವರು ಮಾಗಡಿ ರಸ್ತೆಯ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಪುನಶ್ಚೇತನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಇದೇ ಸಂದರ್ಭದಲ್ಲಿ ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ದತ್ತಿನಿಧಿಯ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ.ಕೃಷ್ಣ, ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಆಡಳಿತ ಮಂಡಳಿ ಅಧ್ಯಕ್ಷ ಎಸ್. ಶೇಷನಾರಾಯಣ ಮತ್ತು ಪ್ರಾಚಾರ್ಯ ಪ್ರೊ. ಜಯಶ್ರೀ ಜೆ.ಸಿಂಗ್ ಮತ್ತು ಮತ್ತಿತರರು ಹಾಜರಿದ್ದರು.

ಸಂಯುಕ್ತ ಕರ್ನಾಟಕ | 20-7-2010



ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜಿನಲ್ಲಿ ಆಯೋಜಿಸಿದ್ದ ವಿದ್ಯಾರ್ಥಿ ವೇತನ ಪುರಸ್ಕಾರ ಸಮಾರಂಭವನ್ನು ಹಿರಿಯ ನಟ ಸಿ.ಆರ್ ಸಿಂಹ ಉದ್ಘಾಟಿಸಿದರು. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎನ್ ಆರ್ ಪಂಡಿತಾರಾಧ್ಯ, ಗೌರವ ಕಾರ್ಯದರ್ಶಿ ಡಾ. ವೂಡೆ ಪಿ.ಕೃಷ್ಣ, ಪ್ರಾಂಶುಪಾಲ ಡಾ. ನರಹಳ್ಳಿ ಬಾಲಸುಬ್ರಮಣ್ಯ ಮುಂತಾದವರು ಉಪಸ್ಥಿತರಿದ್ದರು.

ಈ ಸಂಜೆ

ಭಾನುವಾರ, 18 ಜುಲೈ 2010



ಶೇಷಾದ್ರಿಪುರಂ ಕಾಲೇಜಿನ ಪ್ರಥಮ ಪದವಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ವಿದ್ಯಾರ್ಥಿ ವೇತನ ಪುರಸ್ಕಾರ ಸಮಾರಂಭವನ್ನು ಚಲನಚಿತ್ರ ನಟ-ನಿರ್ದೇಶಕ ಸಿ.ಆರ್.ಸಿಂಹ ಉದ್ಘಾಟಿಸಿದರು. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಗೌರವ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ, ಪ್ರಾಂಶುಪಾಲ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಹಾಗೂ ಇತರರು ಉಪಸ್ಥಿತರಿದ್ದರು.

ಉದಯವಾಣಿ ಜುಲೈ 18, 2010

ಚಿತ್ರಾಂಕಣ



ಶೇಷಾದ್ರಿಪುರ ಕಾಲೇಜಿನಲ್ಲಿ ಇತ್ತೀಚೆಗೆ ಪದವಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಪುರಸ್ಕಾರ ನೀಡುವ ಕಾರ್ಯಕ್ರಮವನ್ನು ಹಿರಿಯ ನಟ ಸಿ. ಆರ್. ಸಿಂಹ ಉದ್ಘಾಟಿಸಿದರು. ಎನ್. ಆರ್. ಪಂಡಿತಾರಾಧ್ಯ, ಡಾ. ವೂಡೆ ಪಿ. ಕೃಷ್ಣ, ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಉಪಸ್ಥಿತರಿದ್ದರು.

ಪ್ರಜಾವಾಣಿ

ಶನಿವಾರ

17ನೇ ಜುಲೈ 2010


2 B



ಪುರಸ್ಕಾರ

ಶೇಷಾದ್ರಿಪುರಂ ಕಾಲೇಜು ಪ್ರಥಮ ಪದವಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ವಿದ್ಯಾರ್ಥಿ ವೇತನ ಪುರಸ್ಕಾರ ಸಮಾರಂಭವನ್ನು ಚಲನಚಿತ್ರ ನಿರ್ದೇಶಕ ಸಿ.ಆರ್. ಸಿಂಹ ಉದ್ಘಾಟಿಸಿದರು. ಎನ್.ಆರ್. ಪಂಡಿತಾರಾಧ್ಯ, ಡಾ. ವೂಡೇ ಪಿ. ಕೃಷ್ಣ, ನರಹಳ್ಳಿ ಬಾಲಸುಬ್ರಹ್ಮಣ್ಯ ಚಿತ್ರದಲ್ಲಿದ್ದಾರೆ.

ಕನ್ನಡಪ್ರಭ, ಶನಿವಾರ, 17 ಜುಲೈ 2010



ಉದ್ಘಾಟನೆ...

ಶೇಷಾದ್ರಿಪುರಂ ಕಾಲೇಜು ಪ್ರಥಮ ಪದವಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ವಿದ್ಯಾರ್ಥಿ ವೇತನ ಪುರಸ್ಕಾರ ಸಮಾರಂಭವನ್ನು ನಿರ್ದೇಶಕ ಸಿ.ಆರ್. ಸಿಂಹ ಉದ್ಘಾಟಿಸಿದರು. ಶಿಕ್ಷಣ ಸಂಸ್ಥೆ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಡಾ।ವೂಡೇ ಪಿ.ಕೃಷ್ಣ, ಪ್ರಾಂಶುಪಾಲ ಡಾ।ನರಹಳ್ಳಿ ಬಾಲಸುಬ್ರಹ್ಮಣ್ಯ ಇದ್ದಾರೆ.

ಸಂಜೆವಾಣಿ
ಶುಕ್ರವಾರ 16 ಜುಲೈ 2010



ಗುರುವಾರ 15-7-2010ರಂದು ಶೇಷಾದ್ರಿಪುರಂ ಕಾಲೇಜು ಪ್ರಥಮ ಪದವಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ವಿದ್ಯಾರ್ಥಿ ವೇತನ ಪುರಸ್ಕಾರ ಸಮಾರಂಭವನ್ನು ನಿರ್ದೇಶಕ ಟಿ. ಆರ್. ಸಿಂಹ ಉದ್ಘಾಟಿಸಿದರು. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎನ್. ಆರ್. ಪಂಡಿತಾರಾಧ್ಯ, ಗೌರವ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಪ್ರಾಂಶುಪಾಲ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಹಾಗೂ ಇತರರು ಉಪಸ್ಥಿತರಿದ್ದರು.

ಉದಯವಾಣಿ
ಜೂನ್ 29, 2010

ಅಕ್ಷರ ದೇವರ ಮುಂದೆ ಇನ್ನು ದೇವರು ಉಂಟೆ ?



■ ಶೇಷಾದ್ರಿಪುರ

ಅಕ್ಷರ ದೇವರ ಮುಂದೆ ಇನ್ನು ದೇವರುಂಟೆ! ಅಕ್ಷರದಿಂದ ಜ್ಞಾನ, ಜ್ಞಾನದಿಂದ ಬದುಕು ಎಂದು ಹಿರಿಯ ಸಾಹಿತಿ, ಮಾಜಿ ವಿಧಾನ ಪರಿಷತ್‌ನ ಸದಸ್ಯ ಡಾ. ಎಲ್. ಹನುಮಂತಯ್ಯ ಹೇಳಿದರು. ಅವರು ಇತ್ತೀಚೆಗೆ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಆಶ್ರಯದಲ್ಲಿ ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜುನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಗಳಲ್ಲಿ ಶೇ. 90ಕ್ಕಿಂತಲೂ ಹೆಚ್ಚಿನ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ವಿದ್ಯಾರ್ಥಿಗಳಲ್ಲಿ ವಿನಯವೇ ಪರಮೋಚ್ಚ ಮೌಲ್ಯವಾಗಬೇಕು. ಪ್ರತಿಭಾವಂತರಿಗೆ ಪ್ರತಿಭೆಯೇ ಮಾನದಂಡ. ಅವಕಾಶ ಕೇವಲ ಒಂದು ವರ್ಗದ ಸ್ವತ್ತಾಗದೇ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೂ ಎಟಕುವಂತಾಗಬೇಕು. ಪ್ರತಿಭೆ ಮಕ್ಕಳಲ್ಲಿ ಆತ್ಮವಿಶ್ವಾಸ ಮೂಡಿಸಬೇಕೇ ಹೊರತು ಅಹಂಕಾರ ಮನೋಭಾವವನಲ್ಲ. ಬದುಕು ಕಟ್ಟುವ ಕ್ರಿಯೆಯಲ್ಲಿ ಗುರುಗಳ ಮಾರ್ಗದರ್ಶನದೊಂದಿಗೆ ಕುವೆಂಪು, ವಿವೇಕಾನಂದರಂತಹ ಮಹಾನ್ ವ್ಯಕ್ತಿಗಳ ಸಾಹಿತ್ಯಕ ಮೌಲಿಕ ನುಡಿಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ವಿದ್ಯಾರ್ಥಿಗಳು ಯಾವುದೇ ವಿಷಯಗಳನ್ನು ಅಧ್ಯಯನ ಮಾಡಿದರೂ ಕಷ್ಟಪಡದೇ ಇಷ್ಟಪಟ್ಟು ಅಭ್ಯಾಸ ಮಾಡಬೇಕೆಂದು ತಿಳಿ ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಿಕ್ಷಣ ದತ್ತಿಯ ಅಧ್ಯಕ್ಷ ಪಂಡಿತಾರಾಧ್ಯ ಮಾತನಾಡಿ ಗುರುಗಳ ಬಗ್ಗೆ ಗೌರವ, ವಿನಯ, ವಿಧೇಯತೆಯನ್ನಲ್ಲದೇ ಶ್ರದ್ಧೆ, ಪ್ರಾಮಾಣಿಕತೆಯ ಗುಣಗಳನ್ನು ಬೆಳೆಸಿಕೊಳ್ಳಬೇಕೆಂದು ಹೇಳಿದರು. ಇದೇ ಸಂದರ್ಭದಲ್ಲಿ ಒಟ್ಟು 67 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ತಲಾ 5000ರೂ.ಗಳ ಪುರಸ್ಕಾರ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಶಿಕ್ಷಣ ದತ್ತಿಯ ಗೌರವ ಖಜಾಂಚಿ ಬಿ.ಪಿ. ಪಾರ್ಥಸಾರಥಿ, ಧರ್ಮದರ್ಶಿ ಡಬ್ಲ್ಯೂ. ಜಿ. ರಾಮಕೃಷ್ಣ, ವೀರಭದ್ರಯ್ಯ, ಕೃಷ್ಣಸ್ವಾಮಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಈ ಸಂಜೆ

ಮಂಗಳವಾರ, 29 ಜೂನ್, 2010

ಅವಕಾಶ ಎಲ್ಲ ವರ್ಗದ ಸ್ವತ್ತಾಗಲಿ: ಹನುಮಂತಯ್ಯ

ಅಕ್ಷರ ದೇವರ ಮುಂದೆ ಬೇರೆ ದೇವರುಂಟೆ



ಬೆಂಗಳೂರು, ಜೂ.29- ಪ್ರತಿಭಾವಂತರಿಗೆ ಪ್ರತಿಭೆಯೇ ಮಾನದಂಡವಾಗಿದ್ದು, ಅವಕಾಶ ಕೇವಲ ಒಂದು ವರ್ಗದ ಸ್ವತ್ತಾಗದೇ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೂ ಎಟುಕುವಂತಾಗಬೇಕು ಎಂದು ಸಾಹಿತಿ, ವಿಧಾನ ಪರಿಷತ್ ಮಾಜಿ ಸದಸ್ಯ ಡಾ.ಎಲ್. ಹನುಮಂತಯ್ಯ ಅಭಿಪ್ರಾಯಪಟ್ಟರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಆಶ್ರಯದಲ್ಲಿ ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ ಎಸ್ಸೆಸ್ಸೆಲ್ಸಿ ಪರೀಕ್ಷೆಗಳಲ್ಲಿ ಶೇ.90 ಕ್ಕಿಂತಲೂ ಹೆಚ್ಚಿನ ಅಂಕಗಳಿಸಿ ಶೇಷಾದ್ರಿಪುರಂ ಕಾಲೇಜಿನಲ್ಲಿ ಪ್ರವೇಶ ಪಡೆದಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೀಡಿದ ಪ್ರತಿಭಾ ಪುರಸ್ಕಾರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ವಿದ್ಯಾರ್ಥಿಗಳಲ್ಲಿ ವಿನಯವೇ ಪರಮೋಚ್ಚ ಮೌಲ್ಯವಾಗಬೇಕು. ಪ್ರತಿಭಾವಂತರಿಗೆ ಪ್ರತಿಭೆಯೇ ಮಾನದಂಡ. ಪ್ರತಿಭೆ ಮಕ್ಕಳಲ್ಲಿ ಆತ್ಮ ವಿಶ್ವಾಸ ಮೂಡಿಸಬೇಕೇ ಹೊರತು ಅಹಂಕಾರ ಮನೋಭಾವವನ್ನಲ್ಲ ಎಂದರು.

ಅಕ್ಷರ ದೇವರ ಮುಂದೆ ಬೇರೆ ದೇವರುಂಟೆ, ಅಕ್ಷರದಿಂದ ಜ್ಞಾನ, ಜ್ಞಾನದಿಂದ ಬದುಕನ್ನು ರೂಪಿಸಿಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಹಿತವಚನ ಬೋಧಿಸಿದರು. ಬದುಕು ಕಟ್ಟುವ ಕ್ರಿಯೆಯಲ್ಲಿ ಗುರುಗಳ ಮಾರ್ಗದರ್ಶನದೊಂದಿಗೆ, ಕುವೆಂಪು, ವಿವೇಕಾನಂದರಂತಹ ಮಹಾನ್ ವ್ಯಕ್ತಿಗಳ ಮೌಲಿಕ ನುಡಿಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಅವರು ಕಿವಿಮಾತು ಹೇಳಿದರು.


ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ಪ್ರತಿಭಾ ಪುರಸ್ಕಾರ ಪಡೆಯುತ್ತಿರುವವರ ಸಂಖ್ಯೆ ಹಿಂದಿಗಿಂತಲೂ ಈ ಬಾರಿ ಹೆಚ್ಚಾಗಿರುವುದು ನಿಜಕ್ಕೂ ಸಂತೋಷಕರ ಹಾಗೂ ಆರೋಗ್ಯಕರ ಬೆಳವಣಿಗೆ ಎಂದರು.

ಶಿಕ್ಷಣ ದತ್ತಿಯ ಅಧ್ಯಕ್ಷ ಪಂಡಿತಾರಾಧ್ಯ ಮಾತನಾಡಿ, ಮಾತೃದೇವೋಭವ, ಪಿತೃದೇವೋಭವ, ಆಚಾರ್ಯದೇವೋಭವ ಎಂಬ ನುಡಿಗಳನ್ನು ವಿದ್ಯಾರ್ಥಿಗಳು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು. ಗುರುಗಳ ಬಗ್ಗೆ ಅಪಾರ ಗೌರವ, ವಿನಯ, ವಿಧೇಯತೆಯನಲ್ಲದೆ, ಶ್ರದ್ಧೆ ಪ್ರಮಾಣಿಕತೆಯ ಗುಣಗಳನ್ನು ಬೆಳೆಸಿಕೊಳ್ಳಬೇಕೆಂದರು.

ಪ್ರಥಮ ಪಿಯುಸಿ ವಿದ್ಯಾರ್ಥಿನಿ ಕುಮಾರಿ ಸ್ಮೃತಿ, ಪ್ರತಿಭಾ ಪುರಸ್ಕಾರ ಪಡೆದು ತನ್ನ ಅನಿಸಿಕೆಗಳನ್ನು ಹಂಚಿಕೊಳ್ಳುತ್ತಾ, ಶೇಷಾದ್ರಿಪುರಂ ಕಾಲೇಜಿನ ಸಂಸ್ಕೃತಿ, ವಾತಾವರಣಗಳಿಗೆ ಮನಸೋತು ಶೇಷಾದ್ರಿಪುರಂ ಕಾಲೇಜಿನಲ್ಲೇ ವ್ಯಾಸಂಗಮಾಡಲು ಬಯಸಿದುದಾಗಿ ಅಭಿಪ್ರಾಯ ವ್ಯಕ್ತಪಡಿಸಿದಳು.

ಇದೇ ಸಂದರ್ಭದಲ್ಲಿ ಒಟ್ಟು 67 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ತಲಾ 5000 ಸಾವಿರ ರೂ.ಗಳ ಪುರಸ್ಕಾರ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಶಿಕ್ಷಣ ದತ್ತಿಯ ಗೌರವ ಖಜಾಂಚಿ ಬಿ.ಎಂ.ಪಾರ್ಥಸಾರಥಿ, ಧರ್ಮದರ್ಶಿ ಡಬ್ಲ್ಯೂ.ಜಿ.ರಾಮಕೃಷ್ಣ ವೀರಭದ್ರಯ್ಯ, ಕೃಷ್ಣಸ್ವಾಮಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.


ಸಂಜೆವಾಣಿ
ಭಾನುವಾರ 27 ಜೂನ್ 2010



ನಗರದ ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಸಾಹಿತಿ ಡಾ. ಎಲ್. ಹನುಮಂತಯ್ಯ ಅವರನ್ನು ಗೌರವಿಸಲಾಯಿತು. ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ. ವೂಡೇ. ಪಿ. ಕೃಷ್ಣ, ಅಧ್ಯಕ್ಷ ಪಂಡಿತಾರಾಧ್ಯ, ಡಬ್ಲ್ಯು.ಜಿ. ರಾಮಕೃಷ್ಣ, ಕೃಷ್ಣಸ್ವಾಮಿ ಇತರರು ಚಿತ್ರದಲ್ಲಿದ್ದಾರೆ.

ಈ ಸಂಜೆ

ಭಾನುವಾರ, 27 ಜೂನ್, 2010



ಗಾಂಧೀ ಶಾಂತಿ ಪ್ರತಿಷ್ಠಾನ ಆಯೋಜಿಸಿದ್ದ 'ಪುನರ್ಮನನ ತರಬೇತಿ' ಕಾರ್ಯಕ್ರಮವನ್ನು ತುಮಕೂರು ರಾಮಕೃಷ್ಣ ವಿವೇಕಾನಂದ ಆಶ್ರಮ ಅಧ್ಯಕ್ಷ ಸ್ವಾಮಿ ವೀರೇಶಾನಂದ ಸರಸ್ವತಿ ಉದ್ಘಾಟಿಸಿದರು. ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ. ಹೋ. ಶ್ರೀನಿವಾಸಯ್ಯ, ಪ್ರತಿಷ್ಠಾನ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಸಿದ್ಧಾರ್ಥ ಶರ್ಮ ಮತ್ತಿತರರಿದ್ದರು.

ಪ್ರಜಾವಾಣಿ

ಭಾನುವಾರ 27ನೇ ಜೂನ್ 2010

ಉದ್ಘಾಟನೆ



ಗಾಂಧಿ ಪ್ರತಿಷ್ಠಾನ ಬೆಂಗಳೂರಿನಲ್ಲಿ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ 'ಪುನರ್‌ಮನನ ತರಬೇತಿ' ಕಾರ್ಯಕ್ರಮವನ್ನು ತುಮಕೂರು ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ವೀರೇಶಾನಂದ ಸರಸ್ವತಿ ಅವರು ಉದ್ಘಾಟಿಸಿದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ಹೋ.ಶ್ರೀನಿವಾಸಯ್ಯ, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಮತ್ತು ಕಾರ್ಯದರ್ಶಿ ಸಿದ್ಧಾರ್ಥ ಶರ್ಮ ಉಪಸ್ಥಿತರಿದ್ದರು.

ಕನ್ನಡಪ್ರಭ, ಭಾನುವಾರ, 27 ಜೂನ್ 2010



ಉದ್ಘಾಟನೆ...


ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಪ್ರತಿಭಾ ಪುರಸ್ಕಾರ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಸಾಹಿತಿ ಡಾ.ಎಲ್. ಹನುಮಂತಯ್ಯ ಉದ್ಘಾಟಿಸಿದರು. ಪ್ರಾಂಶುಪಾಲ ಪ್ರೊ. ಎಂ.ಎಲ್. ಹನುಮಂತಯ್ಯ, ಧರ್ಮದರ್ಶಿ ಡಬ್ಲ್ಯೂ.ಜಿ.ರಾಮಕೃಷ್ಣ, ಕೃಷ್ಣಸ್ವಾಮಿ, ಶಿಕ್ಷಣದತ್ತಿ ಅಧ್ಯಕ್ಷ ಪಂಡಿತಾರಾಧ್ಯ ಇದ್ದರು.

ಸಂಜೆವಾಣಿ   ಶನಿವಾರ 26 ಜೂನ್ 2010



...ರದ ಗಾಂಧಿ ಶಾಂತಿ ಪ್ರತಿಷ್ಠಾನ ಪ್ರಥಮ ...ಯುಸಿ-ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ "ಪುನರ್ಮನನ ತರಬೇತಿ" ಶಿಬಿರವನ್ನು ತುಮಕೂರು ರಾಮಕೃಷ್ಣ; ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ವೀರೇಶಾನಂದ ಸರಸ್ವತಿ ಅವರು ಉದ್ಘಾಟಿಸಿದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ಹೊ. ಶ್ರೀನಿವಾಸಯ್ಯ, ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಕಾರ್ಯದರ್ಶಿ ಸಿದ್ಧಾರ್ಥಶರ್ಮ ಅವರಿದ್ದಾರೆ.


ಕನ್ನಡಪ್ರಭ, ಗುರುವಾರ, 24 ಜೂನ್ 2010



ಪುನರ್‌ಮನನ...

ಗಾಂಧಿ ಶಾಂತಿ ಪ್ರತಿಷ್ಠಾನ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಪುನರ್‌ಮನನ ತರಬೇತಿಯನ್ನು ತುಮಕೂರು ರಾಮಕೃಷ್ಣ ವಿವೇಕಾನಂದ ಆಶ್ರಮ ಅಧ್ಯಕ್ಷ ಸ್ವಾಮಿ ವೀರೇಶಾನಂದ ಸರಸ್ವತಿ ಉದ್ಘಾಟಿಸಿದರು. ಡಾ.ಹೋ. ಶ್ರೀನಿವಾಸಯ್ಯ, ಡಾ.ಪಿ. ಕೃಷ್ಣ, ಸಿದ್ಧಾರ್ಥ ಶರ್ಮ ಇತರರು ಉಪಸ್ಥಿತರಿದ್ದರು.

ಕನ್ನಡಪ್ರಭ, ಭಾನುವಾರ, 13 ಜೂನ್ 2010



ವಿದ್ಯಾರ್ಥಿಗೆ ಸನ್ಮಾನ...
ಶ್ರೀವಾದಿರಾಜ ಸಂಯುಕ್ತ ಪದವಿ ಪೂರ್ವ ಕಾಲೇಜು ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಪುನರ್ಮನನ ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಶಿಕ್ಷಣತಜ್ಞ ಪ್ರೊ|ಕೆ.ವಿ.ಪುತ್ತುರಾಯ ಸನ್ಮಾನಿಸಿದರು. ಪಂಡಿತಾರಾಧ್ಯ ಡಾ|ಪೊಡೇ.ಪಿ.ಕೃಷ್ಣ ಇದ್ದರು.

ಸಂಜೆವಾಣಿ
ಭಾನುವಾರ 13 ಜೂನ್ 2010



ಶೇಷಾದ್ರಿಪುರಂನ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ 'ಪುನರ್ಮನನ' ಕಾರ್ಯಕ್ರಮವನ್ನು ಶಿಕ್ಷಣ ತಜ್ಞ ಪ್ರೊ.ಕೆ.ಪಿ. ಪುತ್ತುರಾಯ ಉದ್ಘಾಟಿಸಿದರು. ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಗೌರವ ಕಾರ್ಯದರ್ಶಿ ಡಾ.ವೂಡೇ ಪಿ. ಕೃಷ್ಣ, ಪ್ರಾಚಾರ್ಯ ಪ್ರೊ.ಎಂ. ಆರ್. ಸಂತಾನಮ್ ಇದ್ದಾರೆ.

ಈ ಸಂಜೆ

ಭಾನುವಾರ, 13 ಜೂನ್, 2010



ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನ ಪ್ರಥಮ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ 'ಪುನರ್ಮನನ' ಕಾರ್ಯಕ್ರಮವನ್ನು ಶಿಕ್ಷಣ ತಜ್ಞ ಪ್ರೊ. ಕೆ.ಪಿ. ಪುತ್ತುರಾಯ ಉದ್ಘಾಟಿಸಿದರು. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಸ್.ಆರ್. ಪಂಡಿತಾರಾಧ್ಯ, ಗೌರವ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಪ್ರಾಂಶುಪಾಲ ಎಂ.ಆರ್. ಸಂತಾನಮ್ ಹಾಜರಿದ್ದರು.

ಶುಕ್ರವಾರ 28ನೇ ಮೇ 2010 ಪ್ರಜಾವಾಣಿ

ಜೀವ ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ

ಎಂಜಿನಿಯರ್‌ಗಳ ಕೊಡುಗೆ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೀವ ವಿಜ್ಞಾನದಲ್ಲಿ ತಯಾರಾಗುವ ಬಹುತೇಕ ಸಾಧನ ಹಾಗೂ ಉಪಕರಣಗಳನ್ನು ವಿಜ್ಞಾನಿಗಳು ತಯಾರಿಸುತ್ತಾರೆ ಎಂಬ ನಂಬಿಕೆ ನಮ್ಮಲ್ಲಿ ಆಳವಾಗಿ ಬೇರೂರಿದೆ. ಆದರೆ ಈ ಸಾಧನಗಳ ತಯಾರಿಕೆಯ ಹಿಂದೆ ಎಂಜಿನಿಯರ್‌ಗಳಿದ್ದಾರೆ ಎಂಬುದು ಬಹುತೇಕರಿಗೆ ತಿಳಿಯದೇ ಇರುವುದು ವಿಪರ್ಯಾಸ ಎಂದು ಸಿಂಗಪುರದ ನೋವಾರ್ಟಿಸ್‌ನ ಅಂಗ ಸಂಸ್ಥೆಯಾಗಿರುವ 'ಸಿಬಾ ವಿಷನ್' ಸಂಸ್ಥೆಯ ಎಂಜಿನಿಯರ್ ಹಾಗೂ ಸಿಂಗಪುರ ಕನ್ನಡ ಸಂಘದ ಅಧ್ಯಕ್ಷ ಡಾ.ಎಸ್.ವಿಜಯ್ ಕುಮಾರ್ ಅಭಿಪ್ರಾಯಪಟ್ಟರು.

ಇಲ್ಲಿನ ಇನ್‌ಸ್ಟಿಟ್ಯೂಟ್ ಆಫ್ ಎಂಜನಿಯರ್ಸ್‌ನಲ್ಲಿ ಆಯೋಜಿಸಲಾಗಿದ್ದ 'ಎಂಜಿನಿಯರ್ಸ್ ಬ್ರಿಂಗಿಂಗ್ ಬೆಟರ್ ವಿಷನ್' ಕುರಿತಂತೆ ಅವರು ಬುಧವಾರ ಉಪನ್ಯಾಸ ನೀಡಿದರು. 'ವಿಶ್ವಮಟ್ಟದ ಕಣ್ಣಿನ ಲೆನ್ಸ್ ತಯಾರಿಕೆಯಲ್ಲಿ ಎಂಜಿನಿಯರ್‌ಗಳ ಕೊಡುಗೆ ಅಪಾರ. ಕಾಂಟ್ಯಾಕ್ಟ್ ಲೆನ್ಸ್ ತಯಾರಿಸುವುದೂ ಸಹ ಒಂದು ಕಲೆ. ವಿಶ್ವದಲ್ಲಿ ದೃಷ್ಟಿ ದೋಷವಿರುವ ಪ್ರತಿಯೊಬ್ಬರ ಕಣ್ಣಿನ ಅಳತೆಗೆ ತಕ್ಕಂತೆ ಲೆನ್ಸ್ ತಯಾರಿಸುವುದು ಸುಲಭದ ಮಾತಲ್ಲ. ಆದರೆ ಇದನ್ನು ಎಂಜಿನಿಯರ್‌ಗಳು ಸಾಧಿಸಿ ತೋರಿಸಿದ್ದಾರೆ' ಎಂದು ಅವರು ತಿಳಿಸಿದರು.

'ಜೀವ ವಿಜ್ಞಾನಕ್ಕೆ ಸಂಬಂಧಿಸಿದಂತೆ ಔಷಧ ಹಾಗೂ ಪ್ರಯೋಗಾಲಯ ಉಪಕರಣಗಳ ತಯಾರಿಕಾ ಕ್ಷೇತ್ರದಲ್ಲಿ ವಿಪುಲ ಅವಕಾಶಗಳಿವೆ. ಅಮೆರಿಕ ಹೊರತುಪಡಿಸಿದರೆ ಈಗ ಭಾರತದಲ್ಲೇ ಅತಿ ಹೆಚ್ಚು ಜೀವ ವಿಜ್ಞಾನಕ್ಕೆ ಸಂಬಂಧಿಸಿದ ಕಂಪೆನಿಗಳು ಕಾರ್ಯ ನಿರ್ವಹಿಸುತ್ತಿವೆ. ಹೀಗಾಗಿ ವಿಶ್ವದಲ್ಲೇ ಅತಿ ಹೆಚ್ಚು ಎಂಜಿನಿಯರ್‌ಗಳನ್ನು ತಯಾರು ಮಾಡುತ್ತಿರುವ ಭಾರತದ ಎಂಜಿನಿಯರ್‌ಗಳಿಗೆ ಸಾಕಷ್ಟು ಅವಕಾಶಗಳಿವೆ. ಆದರೆ ಈ ಕ್ಷೇತ್ರಕ್ಕೆ ಹೆಚ್ಚು ಪ್ರಚಾರ ಸಿಕ್ಕಿಲ್ಲ. ಭವಿಷ್ಯದಲ್ಲಿ ಜೀವ ವಿಜ್ಞಾನವೇ ಪ್ರಬಲ ಕ್ಷೇತ್ರವಾಗಿ ಹೊರ ಹೊಮ್ಮಲಿದೆ' ಎಂದು ಅಭಿಪ್ರಾಯಪಟ್ಟರು.

ಎಂಜಿನಿಯರುಗಳ ಸಂಸ್ಥೆ ಅಧ್ಯಕ್ಷ ಎಲ್.ವಿ.ಮುರಳೀ ಕೃಷ್ಣರೆಡ್ಡಿ, ರಾಷ್ಟ್ರೀಯ ಮಂಡಳಿ ಸದಸ್ಯರಾದ ವೂಡೆ ಪಿ.ಕೃಷ್ಣ, ಡಿ.ವಿ.ನಾಗಭೂಷಣ ಹಾಗೂ ಡಾ.ಎಂ.ಪಿ.ಚೌಡಯ್ಯ ಉಪಸ್ಥಿತರಿದ್ದರು.

ಪ್ರಜಾವಾಣಿ

ಮಂಗಳವಾರ
11ನೇ ಮೇ 2010

3a B



ಜನ್ಮ ದಿನಾಚರಣೆ

ಭಾರತ ಸೇವಾದಲವು ಇತ್ತೀಚೆಗೆ ನಗರದಲ್ಲಿ ಏರ್ಪಡಿಸಿದ್ದ ಡಾ.ಎನ್.ಎಸ್. ಹರ್ಡೀಕರ್ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೆ ಪಿ. ಕೃಷ್ಣ ಅವರು ಹರ್ಡೀಕರ್ ಪುತ್ಥಳಿಗೆ ಹೂ ಮಾಲೆ ಅರ್ಪಿಸಿದರು.

ಜನ್ಮದಿನಾಚರಣೆ...

ಕನ್ನಡಪ್ರಭ, ಭಾನುವಾರ, 9 ಮೇ 2010

ಪುಟ 3



ಭಾರತ ಸೇವಾದಲ ಹಮ್ಮಿಕೊಂಡ ಡಾ|ನಾ.ಸು.ಹರ್ಡಿಕರ್ ಜನ್ಮದಿನಾಚರಣೆ ಸಂದರ್ಭದಲ್ಲಿ ಎಸ್.ಲಿಂಗಪ್ಪ, ಡಾ|ವೂಡೇ ಪಿ. ಕೃಷ್ಣ, ಭೀಮರಾವ್ ಗಾಯಕ್ವಾಡ್ ಹಾಜರಿದ್ದಾರೆ.

ಸಂಜೆವಾಣಿ ಶನಿವಾರ 8 ಮೇ 2010



ಭಾರತ ಸೇವಾದಲ ನಗರದಲ್ಲಿ ಹಮ್ಮಿಕೊಂಡಿದ್ದ ಪದ್ಮಭೂಷಣ ಡಾ.ನಾ.ಸು. ಹರ್ಡೀಕರ್ ಅವರ 121ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಕುಮಾರಕೃಪ ರಸ್ತೆಯಲ್ಲಿರುವ ಹರ್ಡೀಕರ್ ಅವರ ಪುತ್ಥಳಿಗೆ ಭಾರತ ಸೇವಾದಳದ ಕೇಂದ್ರ ಸಮಿತಿಯ ಕೋಶಾಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಮಾಲಾರ್ಪಣೆ ಮಾಡಿದರು. ಭಾರತ ಸೇವಾದಲದ ಸದಸ್ಯರುಗಳು ಇದ್ದಾರೆ.

ಹರ್ಡೀಕರ್ ಪುತ್ಥಳಿಗೆ ಮಾಲಾರ್ಪಣೆ

ಬೆಂಗಳೂರು, ಮೇ ೮- ದೇಶಭಕ್ತಿ, ಶಿಸ್ತಿನ ತಳಹದಿಯನ್ನು ಜೀವನದ ಪ್ರತಿಯೊಂದು ಹಂತದಲ್ಲಿ ಅಳವಡಿಸಿಕೊಂಡು ಜೀವ ಸವೆಸಿದವರು ಡಾ.ನಾ.ಸು. ಹರ್ಡೀಕರ್ ಎಂದು ಭಾರತ ಸೇವಾದಳದ ಕೇಂದ್ರ ಸಮಿತಿಯ ಕೋಶಾಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಹೇಳಿದರು.

ಭಾರತ ಸೇವಾದಲ ಹಮ್ಮಿಕೊಂಡಿದ್ದ ಹರ್ಡೀಕರ್ ಅವರ 121ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಕುಮಾರಕೃಪ ರಸ್ತೆಯಲ್ಲಿರುವ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಮಾತನಾಡಿದರು:

ಹರ್ಡೀಕರ್ ಅವರ ದೇಶಸೇವೆಯನ್ನು ಈ ಸಂದರ್ಭದಲ್ಲಿ ಸ್ಮರಿಸಿದ ಅವರು ಇಂತಹ ಮಹಾನುಭಾವರ ಮಾರ್ಗದರ್ಶನದಲ್ಲಿ ನಡೆಯುವಂತೆ ಸಲಹೆ ನೀಡಿದರು.

ಇಂತಹ ದೇಶ ಸೇವಕರು ಇಲ್ಲದಿದ್ದರೆ ನಮ್ಮ ದೇಶದ ಪರಿಸ್ಥಿತಿ ಯಾವ ದುಸ್ಥಿತಿಗೆ ಹೋಗುತ್ತಿತ್ತು ಎಂಬುವುದನ್ನೇ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ನಾವು ಈಗ ಹಸನಾದ ಜೀವನ ನಡೆಸಲು ಅವರ ಶಿಸ್ತಿನ ತಳಹದಿಯ ಕಾರಣ ಎಂದು ನುಡಿದರಲ್ಲದೆ, ಯುವಕರು ಇವರ ಜೀವನಾದರ್ಶಗಳನ್ನು ರೂಢಿಸಿಕೊಳ್ಳುವಂತೆ ಸೂಚಿಸಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ನಗರ ಲಯನ್ಸ್ ಸಂಸ್ಥೆಯ ಕೆ.ವಿ. ಸುಬ್ಬರಾವ್, ಹರ್ಡೀಕರ್ ಅವರ ಪರಿಶ್ರಮವನ್ನು ಮೆಲುಕು ಹಾಕಿದರು. ಕಾರ್ಯಕ್ರಮದಲ್ಲಿ ಭಾರತ ಸೇವಾದಳದ ದಳಪತಿ ಎಸ್. ಲಿಂಗಪ್ಪ, ಸೇವಾದಲ ಶಾಲಾ-ಕಾಲೇಜಿನ ಕಾರ್ಯಕರ್ತರು, ಮತ್ತಿತರರು ಪಾಲ್ಗೊಂಡಿದ್ದರು.

ಕನ್ನಡಪ್ರಭ, ಸೋಮವಾರ, 3 ಮೇ 2010



ಬೀಳ್ಕೊಡುಗೆ...

ಕಾಲ್ನಡಿಗೆ ಸಾಹಸ ಯಾತ್ರಾರ್ಥಿಗಳನ್ನು ಯೂತ್ ಹಾಸ್ಟೆಲ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ವತಿಯಿಂದ ಬೀಳ್ಕೊಡಲಾಯಿತು. ಡಾ। ಪ್ರೊಡೇ ಪಿ.ಕೃಷ್ಣ, ಆರ್.ಜಿ.ಪದಕಿ, ಸಿಎನ್‌ಎನ್ ರಾಜು, ರಮೇಶ್ ಬಾಬು ಪಾಲ್ಗೊಂಡಿದ್ದರು.

ಸಂಜೆವಾಣಿ ಸೋಮವಾರ 3 ಮೇ 2010



ಕುಲು-ಮನಾಲಿಗೆ ತೆರಳುವ ರಾಷ್ಟ್ರೀಯ ಪ್ರಕೃತಿ ಅಧ್ಯಯನ ಮತ್ತು ಕಾಲ್ನಡಿಗೆ ಸಾಹಸ ಯಾತ್ರಾರ್ಥಿಗಳನ್ನು ಬೀಳ್ಕೊಡಲು ಯೂತ್ ಹಾಸ್ಟೆಲ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಏರ್ಪಡಿಸಿದ್ದ ಸಮಾರಂಭದಲ್ಲಿ ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ, ವೈಹೆಚ್‌ಎಐ ಸ್ಥಾಪಕ ರಾಷ್ಟ್ರೀಯ ಕಾರ್ಯದರ್ಶಿ ಆರ್.ಜಿ. ಪದಕಿ, ಮಾಜಿ ರಾಜ್ಯಶಾಖೆ ಕಾರ್ಯದರ್ಶಿ ಸಿ.ಎನ್.ಎನ್. ರಾಜು, ರಮೇಶ್ ಬಾಬು ಮತ್ತು ಕೆ.ಎನ್. ರಾಮ್‌ರಾಜ್ ಅರಸ್ ಯಾತ್ರಾರ್ಥಿಗಳ ಜೊತೆಗಿರುವುದು.


ಈ ಸಂಜೆ

ಮಂಗಳವಾರ, 04 ಮೇ, 2010



ಕುಲು-ಮನಾಲಿಗೆ ತೆರಳಲಿರುವ ರಾಷ್ಟ್ರೀಯ ಪ್ರಕೃತಿ ಅಧ್ಯಯನ ಮತ್ತು ಕಾಲ್ನಡಿಗೆ ಸಾಹಸ ಯಾತ್ರಾರ್ಥಿಗಳನ್ನು ಯೂತ್ ಹಾಸ್ಟೆಲ್ಸ್ ಅಸೋಸಿಯೇಶನ್ ಆಫ್ ಇಂಡಿಯಾದ ವತಿಯಿಂದ ಬೀಳ್ಕೊಡಲಾಯಿತು. ಶಿಕ್ಷಣ ತಜ್ಞ ಡಾ. ವೂಡೇ ಪಿ.ಕೃಷ್ಣ, ವೈಎಚ್ಎಐ ಸ್ಥಾಪಕ ರಾಷ್ಟ್ರೀಯ ಕಾರ್ಯದರ್ಶಿ ಆರ್.ಜಿ.ಪದಕಿ, ಮಾಜಿ ರಾಜ್ಯ ಶಾಖೆ ಕಾರ್ಯದರ್ಶಿ ಸಿ.ಎನ್.ಎನ್.ರಾಜು, ರಮೇಶ್ ಬಾಬು ಹಾಗೂ ಕೆ.ಎನ್.ರಾಮ್‌ರಾಜ್ ಅರಸ್ ಉಪಸ್ಥಿತರಿದ್ದರು.

ಉದಯವಾಣಿ ಮೇ 4, 2010



ಕುಲು-ಮನಾಲಿಗೆ ಪ್ರವಾಸ ಹೊರಟಿರುವ ರಾಷ್ಟ್ರೀಯ ಪ್ರಕೃತಿ ಅಧ್ಯಯನ ಮತ್ತು ಕಾಲ್ನಡಿಗೆ ಸಾಹಸಯಾತ್ರಿಗಳನ್ನು ಯೂತ್ ಹಾಸ್ಟೆಲ್ ಅಸೋಸಿಯೇಷನ್ ಆಫ್ ಇಂಡಿಯಾದ ವತಿಯಿಂದ ಬೀಳ್ಕೊಡಲಾಯಿತು. ಶಿಕ್ಷಣತಜ್ಞ ಡಾ. ವೂಡೇ ಪಿ. ಕೃಷ್ಣ, ವೆ.ಎಚ್.ಎ.ಐ ಸ್ಥಾಪಕ ರಾಷ್ಟ್ರೀಯ ಕಾರ್ಯದರ್ಶಿ ಆರ್.ಜಿ. ಪದಕಿ, ಸಿ.ಎನ್.ಎನ್. ರಾಜು, ರಮೇಶ್ ಬಾಬು ಹಾಗೂ ಕೆ.ಎನ್. ರಾಮ್‌ರಾಜ್ ಉಪಸ್ಥಿತರಿದ್ದರು.

ಈ ಸಂಜೆ


ಶುಕ್ರವಾರ, 16 ಏಪ್ರಿಲ್, 2010



ಶೇಷಾದ್ರಿಪುರಂ ಕಾಲೇಜನಲ್ಲಿ ಎನ್ ಎಸ್ ಎಸ್ ಹಾಗೂರೆಡ್ ಕ್ರಾಸ್ ಘಟಕ ಹಮ್ಮಿಕೊಂಡಿದ್ದ ನಾಗರಿಕರ ರಕ್ಷಣೆ ಕುರಿತ ಕಾರ್ಯಕ್ರಮದಲ್ಲಿ ಡಿಜಿಪಿ ಜೀಜಾ ಹರಿಸಿಂಗ್, ಡಾ.ವೂಡೇ ಪಿ. ಕೃಷ್ಣ ಟಿ.ಎಂ. ಜಾನ್, ಎಂ.ಎಸ್. ನಟರಾಜ್, ರಾಜುಚಂದ್ರಶೇಖರ್ ಮತ್ತಿತರರಿದ್ದರು.

ಕನ್ನಡಪ್ರಭ, ಶುಕ್ರವಾರ, 16 ಏಪ್ರಿಲ್ 2010

ಉದ್ಘಾಟನೆ...



ಶೇಷಾದ್ರಿಪುರ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ನಾಗರಿಕ ರಕ್ಷಣಾ ಘಟಕ 28ನ್ನು ಜೀಜಾ ಮಾಧವನ್ ಹರಿಸಿಂಗ್ ಉದ್ಘಾಟಿಸಿದರು. ಮೇ।ಜ।ಟಿ.ಎಂ.ಜಾನ್, ಡಾ।ವೂಡೇ ಪಿ.ಕೃಷ್ಣ, ಎಂ.ಎಸ್.ನಟರಾಜ್, ರಾಜು ಚಂದ್ರಶೇಖರ್, ಪ್ರತಾಪ್ ಲಿಂಗಯ್ಯ, ಅಜಯ್ ಮತ್ತಿತರರು ಇದ್ದಾರೆ.

ಸಂಜೆವಾಣಿ
ಶುಕ್ರವಾರ 16 ಏಪ್ರಿಲ್ 2010



ಶೇಷಾದ್ರಿಪುರಂ ಕಾಲೇಜಿನಲ್ಲಿ ಆರಂಭಿಸಲಾದ ಸ್ವಾಮಿ ವಿವೇಕಾನಂದ ಅಧ್ಯಯನ ಕೇಂದ್ರವನ್ನು ತುಮಕೂರು ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ವೀರೇಶಾನಂದ ಸರಸ್ವತಿ ಅವರು ಉದ್ಘಾಟಿಸಿದರು. ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಕೇಂದ್ರದ ಸಂಚಾಲಕಿ ಎಚ್.ಎಂ. ಗೀತಾ, ಶಿಕ್ಷಣ ದತ್ತಿ ಜಂಟಿ ಕಾರ್ಯದರ್ಶಿ ಎ.ಆರ್. ಶ್ರೀನಿವಾಸಯ್ಯ ಅವರು ಇದ್ದಾರೆ.

ಸಂಯುಕ್ತ ಕರ್ನಾಟಕ । ಬೆಂಗಳೂರು । 15-4-2010



ಬೆಂಗಳೂರಿನ ಅಗಸ್ತ್ಯ ಇಂಟರ್‌ನ್ಯಾಷನಲ್ ಫೌಂಡೇಷನ್‌ನಲ್ಲಿ ಬುಧವಾರ ವಿಜ್ಞಾನ ಮತ್ತು ಇಂಜಿನಿಯರಿಂಗ್ ಕೇಂದ್ರವನ್ನು ವಿಜ್ಞಾನಿ ಪ್ರೊ. ಸಿ.ಎನ್.ಆರ್. ರಾವ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ವೂಡೇ ಪಿ. ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಉದಯವಾಣಿ ಗುರುವಾರ 15 ಏಪ್ರಿಲ್ 2010



ಉದ್ಘಾಟನೆ

ಅಗಸ್ತ್ಯ ಅಂತಾರಾಷ್ಟ್ರೀಯ ಪ್ರತಿಷ್ಠಾನ ಮತ್ತು ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರ್ಸ್ ಬುದವಾರ ಬೆಂಗಳೂರಿನಲ್ಲಿ ಏರ್ಪಡಿಸಿದ್ದ ವಿಜ್ಞಾನ ಕೇಂದ್ರ ಉದ್ಘಾಟನಾ ಸಮಾರಂಭದಲ್ಲಿ ಪ್ರೊ। ಸಿ.ಎನ್.ಆರ್. ರಾವ್ ಅವರು ವಿದ್ಯಾರ್ಥಿಗಳಿಗೆ ಖಗೋಳ ವಿಜ್ಞಾನ ಕುರಿತು ಮಾಹಿತಿ ನೀಡಿದರು.


ಪ್ರಜಾವಾಣಿ, ಗುರುವಾರ 15 ಏಪ್ರಿಲ್ 2010

ಸಿಟಿ ಸಮಾಚಾರ



ಬೆಂಗಳೂರಿನ 'ಎಂಜಿನಿಯರುಗಳ ಸಂಸ್ಥೆ'ಯಲ್ಲಿ ಬುಧವಾರ ನಡೆದ 'ವಿಜ್ಞಾನ ಮತ್ತು ಎಂಜಿನಿಯರಿಂಗ್ ಕೇಂದ್ರ'ದ ಉದ್ಘಾಟನಾ ಸಮಾರಂಭದಲ್ಲಿ ಜವಾಹರಲಾಲ್ ನೆಹರು ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರದ ಅಧ್ಯಕ್ಷ ಪ್ರೊ. ಸಿ.ಎನ್.ಆರ್ ರಾವ್ ಅವರು ಶಾಲಾ ಮಕ್ಕಳೊಂದಿಗೆ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು.

ಬುಧವಾರ, 14 ಏಪ್ರಿಲ್ 2010



ನಗರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್‌ನಲ್ಲಿ ವಿಜ್ಞಾನ ಮತ್ತು ಅಭಿಯಂತರ ಕೇಂದ್ರ ಉದ್ಘಾಟಿಸಿ ಖ್ಯಾತ ವಿಜ್ಞಾನಿ ಸಿ.ಎನ್.ಆರ್.ರಾವ್ ವಿಜ್ಞಾನ ವಸ್ತುಪ್ರದರ್ಶನವನ್ನು ವೀಕ್ಷಿಸಿದರು.

ಈ ಸಂಜೆ

ಬುಧವಾರ, 14 ಏಪ್ರಿಲ್, 2010

ಗಾಂಧಿ, ವಿವೇಕಾನಂದರ ಹಾದಿಯಲ್ಲಿ ಮುನ್ನಡೆಯಿರಿ

ಬೆಂಗಳೂರು, ಏ.14- ಮಹಾತ್ಮಗಾಂಧೀಜಿ ಹಾಗೂ ಸ್ವಾಮಿ ವಿವೇಕಾನಂದರ ಆದರ್ಶಗಳ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಮುನಡೆಯಬೇಕೆಂದು ತುಮಕೂರು ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ವೀರೇಶಾನಂದ ಸರಸ್ವತಿ ತಿಳಿಸಿದರು.

ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ವಿವೇಕಾನಂದ ಅಧ್ಯಯನ ಕೇಂದ್ರದ ಉದ್ಘಾಟನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಾ, ವಿವೇಕಾನಂದರು ಹೇಳಿದ ಆತ್ಮಸಹಾನುಭೂತಿ- ಆಧುನಿಕ ಗುಲಾಮಗಿರಿ ಎನುವ ಮಾತನು ಸ್ಮರಿಸಿಕೊಂಡರು.

ಶಕ್ತಿಯೇ ಜೀವನ ದೌರ್ಬಲ್ಯವೇ ಮರಣ ಎಂಬ ವಿಷಯವನ್ನು ಸಂದರ್ಶನಗಳ ಮೂಲಕ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ಅವರು ವಿವರಿಸಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಮಾತನಾಡಿ, ಗಾಂಧೀಜಿ ಹಾಗೂ ವಿವೇಕಾನಂದರ ಆದರ್ಶಗಳನ್ನು ಇಂದಿನ ವಿದ್ಯಾರ್ಥಿಗಳಿಗೆ [illegible]



ತಿಳಿಸದಿದ್ದರೆ ಅದು ನಾವು ಮಾಡುವ ಮಹಾ ಅಪರಾಧವಾಗುತ್ತದೆ ಎಂದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ, ಜಂಟಿ ಕಾರ್ಯದರ್ಶಿ ಎ.ಆರ್. ಶ್ರೀನಿವಾಸಯ್ಯ, ಆಡಳಿತ ಸಲಹಾ ಪರಿಷತ್ತಿನ ಅಧ್ಯಕ್ಷ ಎಂ.ಎಸ್. ನಟರಾಜ್, ಪ್ರಾಚಾರ್ಯ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಹಾಗೂ ವಿವೇಕಾನಂದ ಅಧ್ಯಯನ ಕೇಂದ್ರದ ಸಂಚಾಲಕರಾದ ಎಚ್.ಎಂ. ಗೀತಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದ ಸ್ವಾಗತವನ್ನು ಕನ್ನಡ ಉಪನ್ಯಾಸಕಿ ಅರ್ಚನಾ ತೇಜಸ್ವಿ ಅವರು ನಡೆಸಿಕೊಟ್ಟರೆ, ವಿದ್ಯಾರ್ಥಿ ಪ್ರತಿನಿಧಿ ಸಚಿನ್ ಬನವಾಸಿ ವಂದನಾರ್ಪಣೆಯ ಕಾರ್ಯ ನೆರವೇರಿಸಿದರು. ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದರ ಮೂಲಕ ಅತ್ಯುತ್ತಮವಾದ ಆಸಕ್ತಿಯನ್ನು ವ್ಯಕ್ತಪಡಿಸಿದರು.

ಪ್ರಜಾವಾಣಿ

ಶನಿವಾರ
10ನೇ ಏಪ್ರಿಲ್ 2010


2 B



ಉದ್ಘಾಟನೆ

ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜಿನಲ್ಲಿ ಇತ್ತೀಚೆಗೆ ಏರ್ಪಡಿಸಲಾಗಿದ್ದ 'ಅಂತರಿಕ್ಷ ಭೌತಶಾಸ್ತ್ರ ಮತ್ತು ವಾತಾವರಣ ವಿಜ್ಞಾನ' ಕಾರ್ಯಾಗಾರವನ್ನು ವಿಜ್ಞಾನಿ ಪ್ರೊ. ಯು.ಆರ್. ರಾವ್ ಉದ್ಘಾಟಿಸಿದರು.

ಕನ್ನಡಪ್ರಭ, ಬುಧವಾರ, 7 ಏಪ್ರಿಲ್ 2010



ಕಾರ್ಯಾಗಾರ...

ಶೇಷಾದ್ರಿಪುರ ಕಾಲೇಜು ಏರ್ಪಡಿಸಿದ್ದ ರಾಷ್ಟ್ರ ಮಟ್ಟದ ಕಾರ್ಯಾಗಾರವನ್ನು ಪ್ರೊ।ಯು.ಆರ್.ರಾವ್ ಉದ್ಘಾಟಿಸಿದರು. ಪ್ರೊ।ಆರ್.ಎಂ.ವಾಸಗಂ, ಡಾ।ಎನ್.ಪ್ರಭುದೇವ್, ಎನ್.ಆರ್.ಪಂಡಿತಾರಾಧ್ಯ, ಡಾ।ನರಹಳ್ಳಿ ಬಾಲಸುಬ್ರಹ್ಮಣ್ಯ ಇದ್ದಾರೆ.

ಸೋಮವಾರ 5 ಏಪ್ರಿಲ್ 2010



ಶೇಷಾದ್ರಿಪುರಂನ ವಾಣಿಜ್ಯ ಹಾಗೂ ಮ್ಯಾನೇಜ್‌ಮೆಂಟ್ ಸಂಸ್ಥೆ ಆಯೋಜಿಸಿದ್ದ 'ಮರ ಉಳಿಸಿ" ರ್‍ಯಾಲಿಗೆ ಖ್ಯಾತ ನಟ ಸುದೀಪ್ ಚಾಲನೆ ನೀಡಿದರು, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಪ್ರಾಚಾರ್ಯ ಪ್ರೊ. ಎಂ.ಆರ್. ಸಂತಾನಂ ಮುಂತಾದವರು ಇದ್ದಾರೆ.

ಸಂಜೆವಾಣಿ ಸೋಮವಾರ 5 ಏಪ್ರಿಲ್ 2010



ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ನಡೆದ 44ನೇ ಘಟಿಕೋತ್ಸವ ಸಮಾರಂಭದಲ್ಲಿ ರೂರ್ಕಿ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ.ಹೆಚ್.ಸಿ. ವಿಶ್ವೇಶ್ವರಯ್ಯ ಅವರು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು. ಶೇಷಾದ್ರಿಪುರಂ ಶಿಕ್ಷಣ ದತ್ತಿ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಗೌರವ ಕಾರ್ಯದರ್ಶಿ ಡಾ. ವೂಡೆ ಪಿ. ಕೃಷ್ಣ, ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಎಂ.ಎಸ್. ನಟರಾಜ್, ಪ್ರಾಚಾರ್ಯ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಇದ್ದಾರೆ.

ಸಂಯುಕ್ತ ಕರ್ನಾಟಕ । ಬೆಂಗಳೂರು । 5-4-2010

ಕುಂಚಿಟಿಗರ ಸಮಾವೇಶ

ಬೆಂಗಳೂರು, ಏ. 4: ನಗರದಲ್ಲಿ ಕುಂಚಿಟಿಗರ ಸಮಾವೇಶವನ್ನು ಹಮ್ಮಿಕೊಳ್ಳಲಾಯಿತು.

ಡಾ.ವಿ.ಆಂಜನಪ್ಪ ಬರೆದ ಕುಂಚಿಟಿಗರ ಇತಿಹಾಸ ಮತ್ತು ಸಂಸ್ಕೃತಿ ದರ್ಶನ ಕೃತಿಯನ್ನು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

ಹೊಸದುರ್ಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಶಾಂತವೀರ ಮಹಾಸ್ವಾಮೀಜಿ ಸಮಾರಂಭಕ್ಕೆ ದಿವ್ಯ ಸಾನ್ನಿಧ್ಯ ನೀಡಿದರು.

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಎಸ್. ರಂಗನಾಥ್ ಸಮಾರಂಭವನ್ನು ಉದ್ಘಾಟಿಸಿದರು. ವಾಗ್ದೇವಿ ವಿದ್ಯಾರ್ಥಿನಿ ನಿಲಯದ ಉಪಾಧ್ಯಕ್ಷೆ ಶಕುಂತಲಾ ರಮೇಶ್, ವಿಶ್ವ ಕುಂಚಿಟಿಗರ ಪರಿಷತ್ತಿನ ಉಪಾಧ್ಯಕ್ಷ ಸಿ.ಕೃಷ್ಣಮೂರ್ತಿ, ಹಿಂದುಳಿದ ವರ್ಗಗಳ ಇಲಾಖೆ ಜಂಟಿ ನಿರ್ದೇಶಕ ತಿಪ್ಪೇಸ್ವಾಮಿ, ಶಿಕ್ಷಣ ತಜ್ಞ ಡಾ.ಡಬ್ಲ್ಯೂ.ಪಿ.ಕೃಷ್ಣಪ್ಪ, ವಿಶ್ವ ಕುಂಚಿಟಿಗರ ಪರಿಷತ್‌ನ ಪ್ರಧಾನ ಕಾರ್ಯದರ್ಶಿ ಚಿಕ್ಕರಂಗಯ್ಯ, ತುಮಕೂರಿನ ಜಿ.ಎನ್.ಶಿವಣ್ಣ ವೇದಿಕೆಯಲ್ಲಿ ಉಪಸ್ಥಿತರಿದ್ದರು.


ವಿಜಯ ಕರ್ನಾಟಕ
ಸೋಮವಾರ, 5 ಏಪ್ರಿಲ್ 2010, ಬೆಂಗಳೂರು



ಬೆಂಗಳೂರಿನ ಶೇಷಾದ್ರಿಪುರಂ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಅ್ಯಂಡ್ ಮ್ಯಾನೇಜ್‌ಮೆಂಟ್ ಆಯೋಜಿಸಿದ್ದ 'ಮರ ಉಳಿಸಿ' ರ್‍ಯಾಲಿಗೆ ನಟ ಸುದೀಪ್ ಚಾಲನೆ ನೀಡಿದರು. ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ, ಪ್ರಾಚಾರ್ಯ ಪ್ರೊ.ಎಂ.ಆರ್.ಸನ್‌ತಾನಂ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡಪ್ರಭ, ಸೋಮವಾರ, 5 ಏಪ್ರಿಲ್ 2010

ಘಟಿಕೋತ್ಸವ...



ಶೇಷಾದ್ರಿಪುರ ಕಾಲೇಜ್ ಏರ್ಪಡಿಸಿದ್ದ 44ನೇ ಘಟಿಕೋತ್ಸವದಲ್ಲಿ ಡಾ|ಎಚ್.ಸಿ. ವಿಶ್ವೇಶ್ವರಯ್ಯ, ಎನ್. ಆರ್.ಪಂಡಿತಾರಾಧ್ಯ, ಡಾ|ವೊಡೇ ಪಿ.ಕೃಷ್ಣ, ಎಂ. ಎಸ್.ನಟರಾಜ್, ಡಾ|ನರಹಳ್ಳಿ ಬಾಲಸುಬ್ರಹ್ಮಣ್ಯ ಭಾಗವಹಿಸಿದ್ದರು.

ಉದಯವಾಣಿ


ಏಪ್ರಿಲ್ 4, 2010



ಶೇಷಾದ್ರಿಪುರಂ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್ ಆಯೋಜಿಸಿದ್ದ 'ಮರ ಉಳಿಸಿ' ರ್‍ಯಾಲಿಗೆ ನಟ ಸುದೀಪ್ ಚಾಲನೆ ನೀಡಿದರು. ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಪ್ರಾಂಶುಪಾಲ ಪ್ರೊ. ಎಂ.ಆರ್. ಸಂತಾನಂ ಉಪಸ್ಥಿತರಿದ್ದರು.

ಉದಯವಾಣಿ

ಏಪ್ರಿಲ್ 4, 2010



ಶೇಷಾದ್ರಿಪುರಂ ಕಾಲೇಜಿನ 44ನೇ ಘಟಿಕೋತ್ಸವ ಇತ್ತೀಚೆಗೆ ನಡೆಯಿತು. ರೂರ್ಕಿ ವಿವಿಯ ಮಾಜಿ ಕುಲಪತಿ ಡಾ. ಎಚ್.ಸಿ. ವಿಶ್ವೇಶ್ವರಯ್ಯ, ಎನ್. ಆರ್. ಪಂಡಿತಾರಾಧ್ಯ, ಡಾ. ವೂಡೇ ಪಿ. ಕೃಷ್ಣ, ಎಂ.ಎನ್. ನಟರಾಜ್, ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಉಪಸ್ಥಿತರಿದ್ದರು.

ಉದಯವಾಣಿ

ಏಪ್ರಿಲ್ 13, 2010



ಶಾದ್ರಿಪುರಂ ಕಾಲೇಜಿನ ವಿವೇಕಾನಂದ ಅಧ್ಯಯನ ಕೇಂದ್ರದ ಉದ್ಘಾಟನಾ ಕಾರ್ಯಕ್ರಮವನ್ನು ತುಮಕೂರು ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ವೀರೇಶಾನಂದ ಸರಸ್ವತಿ ನೆರವೇರಿಸಿದರು.
ಡಾ. ವೂಡೇ ಪಿ. ಕೃಷ್ಣ, ನರಹಳ್ಳಿ ಬಾಲಸುಬ್ರಹ್ಮಣ್ಯ, ಎಚ್.ಎಂ. ಗೀತಾ ಉಪಸ್ಥಿತರಿದ್ದರು.

ಪ್ರಜಾವಾಣಿ
ಭಾನುವಾರ 4ನೇ ಏಪ್ರಿಲ್ 2010



ಪ್ರಮಾಣ ಪತ್ರ ವಿತರಣೆ...

ಶೇಷಾದ್ರಿಪುರ ಕಾಲೇಜಿನ ಘಟಿಕೋತ್ಸವ ಕಾರ್ಯಕ್ರಮದಲ್ಲಿ ರೂರ್ಕಿ ವಿವಿ ವಿಶ್ರಾಂತ ಕುಲಪತಿ ಡಾ.ಎಚ್.ಸಿ.ವಿಶ್ವೇಶ್ವರಯ್ಯ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ನೀಡಿದರು. ಶೇಷಾದ್ರಿಪುರಂ ದತ್ತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಕಾರ್ಯದರ್ಶಿ ಡಾ.ವೂಡೇ.ಪಿ.ಕೃಷ್ಣ, ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಎಂ.ಎಸ್.ನಟರಾಜ್, ಪ್ರಾಚಾರ್ಯ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಚಿತ್ರದಲ್ಲಿದ್ದಾರೆ.


ಈ ಸಂಜೆ

ಶನಿವಾರ, 03 ಏಪ್ರಿಲ್, 2010



ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಏರ್ಪಡಿಸಿದ್ದ 44ನೆ ಘಟಿಕೋತ್ಸವ ಕಾರ್ಯಕ್ರಮದಲ್ಲಿ ವಿಶ್ರಾಂತ ಕುಲಪತಿ .ಎಚ್.ಸಿ.ವಿಶ್ವೇಶ್ವರಯ್ಯ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು. ಕಾಲೇಜಿನ ಪ್ರಾಂಶುಪಾಲ ನರಹಳ್ಳಿ ಬಾಲಸುಬ್ರಹ್ಮಣ್ಯ, ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ವೂಡೆ ಪಿ.ಕೃಷ್ಣ ಪಾಲ್ಗೊಂಡಿದ್ದರು.

ಕನ್ನಡಪ್ರಭ, ಗುರುವಾರ, 1 ಏಪ್ರಿಲ್ 2010



ಸಂಗೀತೋತ್ಸವ...

ಶೇಷಾದ್ರಿಪುರ ರಾಮಸೇವಾ ಸಮಿತಿ ಆಯೋಜಿಸಿದ್ದ ರಾಮನವಮಿ ಸಂಗೀತೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಡಾ|ಶ್ಯಾಮಲಾ ಜಿ.ಭಾವೆ, ಡಾ|ವಿ.ಎಸ್.ಮಳೀಮಠ, ಡಾ|ವೂಡೇ ಪಿ.ಕೃಷ್ಣ, ಎಸ್.ವೆಂಕಟರಾಮನ್, ಜಿ.ಕೆ.ಶ್ರೀನಿವಾಸ್, ರೇವತಿ ತಾರಕರಾಮ್ ಭಾಗವಹಿಸಿದ್ದರು.

ಮಂಗಳವಾರ, 23 ಮಾರ್ಚ್ 2010



ಗಾಂಧಿಶಾಂತಿ ಪ್ರತಿಷ್ಠಾನ ಮತ್ತು ಗಾಂಧಿ ಸ್ಮಾರಕ ನಿಧಿ ಆಯೋಜಿಸಿದ್ದ ಮಹಿಳಾ ದಿನಾಚರಣೆಯನ್ನು ತಜ್ಞ ವೈದ್ಯೆ ಕಾಮಿನಿರಾವ್ ಉದ್ಘಾಟಿಸಿದರು. ಪ್ರತಿಷ್ಠಾನದ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ, ಕಾರ್ಯದರ್ಶಿ ಸಿದ್ಧಾರ್ಥ ಶರ್ಮ, ಗಾಂಧಿವಾದಿ ಪ್ರೊ.ಎಚ್.ಆರ್. ದಾಸೇಗೌಡ, ಗಾಯತ್ರಿ ತ್ರಾಸಿ ಉಪಸ್ಥಿತರಿದ್ದರು.

ಪ್ರಜಾವಾಣಿ ಭಾನುವಾರ 21ನೇ ಮಾರ್ಚ್ 2010

ಭವಿಷ್ಯದಲ್ಲಿ 'ನ್ಯಾನೊ' ಬೇಡಿಕೆ ಹೆಚ್ಚಳ

ಪ್ರಜಾವಾಣಿ ವಾರ್ತೆ



ಯಲಹಂಕದ ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನಲ್ಲಿ ಗುರುವಾರ ಆಯೋಜಿಸಲಾಗಿದ್ದ 'ಆರೋಗ್ಯ ಮತ್ತು ಪರಿಸರ ಕ್ಷೇತ್ರದಲ್ಲಿ ನ್ಯಾನೊ ಜೈವಿಕ ತಂತ್ರಜ್ಞಾನದ ಭವಿಷ್ಯದ ಅವಕಾಶಗಳು' ಕುರಿತ ರಾಷ್ಟ್ರೀಯ ಕಾರ್ಯಾಗಾರವನ್ನು ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕ ಕೆ.ಜೆ.ರಾವ್ ಉದ್ಘಾಟಿಸಿದರು. ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ವೂಡೆ.ಪಿ.ಕೃಷ್ಣ ಮೊದಲಾದವರು ಚಿತ್ರದಲ್ಲಿದ್ದಾರೆ.

ಯಲಹಂಕ: 'ಭವಿಷ್ಯದಲ್ಲಿ ನ್ಯಾನೊ ವಸ್ತುಗಳಿಗೆ ಬಹಳ ಬೇಡಿಕೆ ಬರಲಿದೆ' ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕ ಕೆ.ಜೆ.ರಾವ್ ಗುರುವಾರ ಹೇಳಿದರು.

ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ, ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ ಮತ್ತು ಬಾಬಾ ಅಣು ವಿಜ್ಞಾನ ಸಂಶೋಧನಾ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಇಲ್ಲಿನ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿರುವ 'ಆರೋಗ್ಯ ಮತ್ತು ಪರಿಸರ ಕ್ಷೇತ್ರದಲ್ಲಿ ನ್ಯಾನೊ ಜೈವಿಕ ತಂತ್ರಜ್ಞಾನದ ಭವಿಷ್ಯದ ಅವಕಾಶಗಳು' ಕುರಿತ 3 ದಿನಗಳ ರಾಷ್ಟ್ರೀಯ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

'ನ್ಯಾನೊ ವಸ್ತುಗಳ ಉತ್ಪಾದನೆಯಿಂದ ನಮ್ಮ ಬೌದ್ಧಿಕ ಸಂಪನ್ಮೂಲಗಳ ಉಳಿತಾಯದ ಜೊತೆಗೆ ಯುವ ಜನಾಂಗಕ್ಕೆ ಹೆಚ್ಚಿನ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ. ಈ ದಿಸೆಯಲ್ಲಿ ವಿದ್ಯಾರ್ಥಿಗಳು ನ್ಯಾನೊ ತಂತ್ರಜ್ಞಾನದ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ, ಆಳವಾದ ಅಧ್ಯಯನ ನಡೆಸಬೇಕು' ಎಂದು ಸಲಹೆ ಮಾಡಿದರು.

'ಇಂದಿನ ಜನರಿಗೆ ಸಣ್ಣ ಗಾತ್ರದಲ್ಲಿ ಅತಿ ಸೂಕ್ಷ್ಮ ವಿಷಯಗಳನ್ನೊಳಗೊಂಡ ವಸ್ತುಗಳು ಬೇಕಾಗಿವೆ. ಅವರಿಗೆ ಅರಿವಿಲ್ಲದೆ ಬಹಳಷ್ಟು ನ್ಯಾನೊ ವಸ್ತುಗಳು ಈಗಾಗಲೆ ಬಳಕೆಯಲ್ಲಿವೆ. ಇವೆಲ್ಲವೂ ಪರಿಸರ ಮತ್ತು ಆರೋಗ್ಯದ ಮೇಲೆ ಒಳ್ಳೆಯ ಪರಿಣಾಮ ಬೀರಲಿವೆ' ಎಂದು ಅವರು ತಿಳಿಸಿದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ವೂಡೆ.ಪಿ. ಕೃಷ್ಣ ಮಾತನಾಡಿ, ವಿಜ್ಞಾನದಲ್ಲಿ ಪ್ರತ್ಯೇಕವಾಗಿರುವ ವಿವಿಧ ವಿಭಾಗಗಳು ಒಗ್ಗಟ್ಟಾಗಿ ನ್ಯಾನೊ ವಿಜ್ಞಾನವನ್ನು ಪರಿಣಾಮಕಾರಿಯಾಗಿ ಬೆಳೆಸಿದರೆ ಇಡೀ ಪ್ರಪಂಚದಲ್ಲಿ ಭಾರತ ನಾಯಕನಾಗುವ ಲಕ್ಷಣಗಳಿವೆ ಎಂದು ಅಭಿಪ್ರಾಯಪಟ್ಟರು.

ಸಂಸ್ಥೆಯ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ ಅಧ್ಯಕ್ಷತೆ ವಹಿಸಿದ್ದರು. ಸಹ ಪ್ರಾಧ್ಯಾಪಕ ಡಾ.ಅಮಿತಾವ್, ಪಾತ್ರ, ಕಾಲೇಜಿನ ಪ್ರಾಂಶುಪಾಲ ಡಾ.ಎಂ.ಪ್ರಕಾಶ್ ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ । ಬೆಂಗಳೂರು । **18-3-2010**



ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ಇತ್ತೀಚೆಗೆ ನಗರದಲ್ಲಿ ಹಮ್ಮಿಕೊಂಡಿದ್ದ ರಸಾಯನಿಕ ಮತ್ತು ಜೈವಿಕ ರಸಾಯನಿಕ ವಿಜ್ಞಾನದ ಅನುಕೂಲತೆಗಳು ಕುರಿತ ವಿಚಾರ ಸಂಕಿರಣದ ಉದ್ಘಾಟನಾ ಸಮಾರಂಭದಲ್ಲಿ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಎ. ಮಹೇಶ್, ಬೆಂಗಳೂರು ವಿವಿಯ ರಸಾಯನಶಾಸ್ತ್ರ ವಿಭಾಗದ ಅಧ್ಯಕ್ಷ ಪ್ರೊ. ಕೆ.ಎನ್. ಮಹೇಂದ್ರ, ಪ್ರಾಂಶುಪಾಲ ಡಾ. ಎಂ. ಪ್ರಕಾಶ್, ಧರ್ಮದರ್ಶಿ ಗೋಪಾಲ್ ಮತ್ತಿತರರು ಉಪಸ್ಥಿತರಿದ್ದರು.

ಕೆಂಗೇರಿ ಉಪನಗರ

ಪಾಶ್ಚಾತ್ಯ ಪ್ರಭಾವದಿಂದ ಸಂಸ್ಕೃತಿಗೆ ಧಕ್ಕೆ

ಇಲ್ಲಿನ ಸ್ನೇಹಕೂಟ ಸಾಂಸ್ಕೃತಿಕ ವೇದಿಕೆಯಿಂದ 'ಚಿಗುರಿದ ಕನಸು' ಸಿಡಿ ಲೋಕಾರ್ಪಣೆ ಮಾಡಲಾಯಿತು.

ಶೇಷಾದ್ರಿಪುರಂ ಕಾಲೇಜು ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಖ್ಯಾತ ಸುಗಮ ಸಂಗೀತ ಕಲಾವಿದ ಡಾ. ಶಿವಮೊಗ್ಗ ಸುಬ್ಬಣ್ಣ ಸಿಡಿ ಬಿಡುಗಡೆ ಮಾಡಿದರು.

ನಂತರ ಮಾತನಾಡಿ, ಇಂದಿನ ದಿನದಲ್ಲಿ ಕವನ ಸಂಕಲನಗಳನ್ನು ಗೀತೆ ರೂಪಕ್ಕೆ ತಂದು ಬಿಡುಗಡೆ ಮಾಡುವುದು ವಿರಳವಾಗಿದೆ. ಈ ಹಿನ್ನೆಲೆಯಲ್ಲಿ ಸ್ನೇಹಕೂಟ ವೇದಿಕೆಯ ಈ ಕಾರ್ಯ ಅಭಿನಂದನಾರ್ಹ ಎಂದರು. ಜತೆಗೆ 'ಆನಂದಮಯ ಈ ಜಗ ಹೃದಯ' ಗೀತೆಯನ್ನು ಹಾಡಿ ಸಭಿಕರನ್ನು ರಂಜಿಸಿದರು.


ಅಧ್ಯಕ್ಷತೆ ವಹಿಸಿದ್ದ ಜಾನಪದ ಗಾಯಕ ಏಕ ಚಿತ್ರಲೋಕ ಅಪ್ಪಗೆರೆ ತಿಮ್ಮರಾಜು, ನಮ್ಮ ಕಲೆ ಹಾಗೂ ಸಂಸ್ಕೃತಿಗೆ ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠ ಸ್ಥಾನವಿದೆ. ಆದರೆ ಪಾಶ್ಚಾತ್ಯ ಸಂಗೀತ ಹಾಗೂ ಮೂರ್ಖರ ಪೆಟ್ಟಿಗೆಯ ಪ್ರಭಾವದಿಂದಾಗಿ ನಮ್ಮ ಮೂಲ ಸಂಸ್ಕೃತಿ ಮರೆಯಾಗುತ್ತಿದೆ ಎಂದು ವಿಷಾದಿಸಿದರು.

ಡಬ್ಲ್ಯೂ.ಪಿ.ಕೃಷ್ಣ, ಡಾ. ಜೈನಾಪುರ್ ಮಾತನಾಡಿದರು. ವಾದಿರಾಜ್, ಕೊಡ್ಲೂರು ವೆಂಕಟಪ್ಪ, ಪುರಸಭೆಯ ಮಾಜಿ ಉಪಾಧ್ಯಕ್ಷ ಜಿ. ಮುನಿರಾಜು, ಸದಸ್ಯರಾದ ಎಲ್. ನಾಗರಾಜ್, ಲಲಿತಾ ಪಾರ್ಥಸಾರಥಿ, ನಾರಾಯಣ ಸ್ವಾಮಿ, ಮೋಹನ್‌ಕುಮಾರ್, ಶೈಲೇಶ್, ಸುಧೀಂದ್ರಕುಮಾರ್ ಹಾಜರಿದ್ದರು.



ಕೆಂಗೇರಿಯ ಶೇಷಾದ್ರಿಪುರಂ ಕಾಲೇಜಿನಲ್ಲಿ ಸ್ನೇಹಕೂಟ ಸಾಂಸ್ಕೃತಿಕ ಸಂಸ್ಥೆ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಚಿಗುರಿದ ಕನಸು ಸಿಡಿ ಬಿಡುಗಡೆ ಮಾಡಲಾಯಿತು. ಡಾ. ಶಿವಮೊಗ್ಗ ಸುಬ್ಬಣ್ಣ, ಅಪ್ಪಗೆರೆ ತಿಮ್ಮರಾಜು, ವೀರಣ್ಣ ಉಪಸ್ಥಿತರಿದ್ದರು.

ಕನ್ನಡಪ್ರಭ, ಭಾನುವಾರ, 14 ಮಾರ್ಚ್ 2010



ಮಹಿಳಾ ದಿನಾಚರಣೆ

ಗಾಂಧಿ ಶಾಂತಿ ಪ್ರತಿಷ್ಠಾನ ಹಮ್ಮಿಕೊಂಡ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಡಾ।ಕಾಮಿನಿ ರಾವ್, ಡಾ।ವೂಡೇ ಪಿ.ಕೃಷ್ಣ, ಸಿದ್ಧಾರ್ಥ ಶರ್ಮ, ಪ್ರೊ।ಎಚ್.ಆರ್.ದಾಸೇಗೌಡ, ಗಾಯತ್ರಿ ತ್ರಾಸಿ ಮತ್ತಿತರರು ಇದ್ದರು.

ಶನಿವಾರ 13 ಮಾರ್ಚ್ 2010 ಸಂಜೆವಾಣಿ



ಗಾಂಧೀ ಶಾಂತಿ ಪ್ರತಿಷ್ಠಾನ ಮತ್ತು ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಆಯೋಜಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಖ್ಯಾತಿ ಸ್ತ್ರೀರೋಗ ತಜ್ಞೆ ಡಾ. ಕಾಮಿನಿರಾವ್ ಉದ್ಘಾಟಿಸಿದರು. ಗಾಂಧೀ ಶಾಂತಿ ಪ್ರತಿಷ್ಠಾನ ಅಧ್ಯಕ್ಷ ಡಾ. ವೂಡೇ ಪಿ.ಕೃಷ್ಣ, ಕಾರ್ಯದರ್ಶಿ ಸಿದ್ಧಾರ್ಥ ಶರ್ಮ, ಹಿರಿಯ ಗಾಂಧೀವಾದಿ ಪ್ರೊ. ಹೆಚ್.ಆರ್. ದಾಸೇಗೌಡ ಹಾಗೂ ಸಂಪನ್ಮೂಲ ವ್ಯಕ್ತಿ ಗಾಯತ್ರಿ ತ್ರಾಸಿ ಉಪಸ್ಥಿತರಿದ್ದರು.

ಹೊಸ ದಿಗಂತ

ಶನಿವಾರ, 13 ಮಾರ್ಚ್ 2010



ಮಹಿಳಾ ದಿನ

ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಖ್ಯಾತ ಸ್ತ್ರೀರೋಗ ತಜ್ಞೆ ಡಾ.ಕಾಮಿನಿ ರಾವ್ ಉದ್ಘಾಟಿಸಿದರು. ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೇ ಪಿ.ಕೃಷ್ಣ, ಕಾರ್ಯದರ್ಶಿ ಸಿದ್ಧಾರ್ಥ ಶರ್ಮ, ಹಿರಿಯ ಗಾಂಧೀವಾದಿ ಪ್ರೊ. ಎಚ್.ಆರ್. ದಾಸೇಗೌಡ, ಗಾಯತ್ರಿ ತ್ರಾಸಿ ಉಪಸ್ಥಿತರಿದ್ದರು.

ಪ್ರಜಾವಾಣಿ
ಬುಧವಾರ 10ನೇ ಫೆಬ್ರುವರಿ 2010

ಪದವಿ ಕಾಲೇಜುಗಳಲ್ಲಿ ಕೇಂದ್ರೀಕೃತ ಪ್ರವೇಶ ಪದ್ಧತಿ ಜಾರಿ

ಖಾಸಗಿ ಶಿಕ್ಷಣ ಸಂಸ್ಥೆ ಅಪಸ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ಕಾಲೇಜುಗಳಲ್ಲಿ ಕೇಂದ್ರೀಕೃತ ಪ್ರವೇಶ ಪದ್ಧತಿ ಜಾರಿಗೊಳಿಸುವ ಸರ್ಕಾರದ ಉದ್ದೇಶಿತ ಯೋಜನೆಗೆ ಖಾಸಗಿ ಶಿಕ್ಷಣ ಸಂಸ್ಥೆಗಳು ಅಪಸ್ವರ ವ್ಯಕ್ತಪಡಿಸಿದ್ದು, ತಮ್ಮ ನಿರ್ಧಾರ ಪ್ರಕಟಿಸಲು ಹತ್ತು ದಿನಗಳ ಸಮಯ ಕೇಳಿವೆ.

ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ ಅವರ ನೇತೃತ್ವದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಸರ್ಕಾರ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳ ನಡುವೆ ಒಮ್ಮತ ವ್ಯಕ್ತವಾಗದ ಕಾರಣ ಇದೇ 22ರಂದು ಪುನಃ ಸಭೆ ಸೇರಿಸಲು ನಿರ್ಧರಿಸಲಾಯಿತು.

ಪ್ರಸಕ್ತ ವರ್ಷ ಬೆಂಗಳೂರು ಹಾಗೂ ಶಿವಮೊಗ್ಗ ನಗರಗಳ ಕಾಲೇಜುಗಳಲ್ಲಿ ಪ್ರಾಯೋಗಿಕವಾಗಿ ಕೇಂದ್ರೀಕೃತ ಪ್ರವೇಶ ಪದ್ಧತಿ ಜಾರಿಗೊಳಿಸಲು ಸರ್ಕಾರ ಯೋಜನೆ ರೂಪಿಸಿದೆ. ಈ ಸಂಬಂಧ ಸೀಟು ಹಂಚಿಕೆ ಹಾಗೂ ಶುಲ್ಕ ನಿಗದಿಪಡಿಸಲು ಸಭೆ ಕರೆಯಲಾಗಿತ್ತು. ಆದರೆ ಈ ಪದ್ಧತಿ ಅನುಷ್ಠಾನಕ್ಕೆ ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರ ತನ್ನ ಉದ್ದೇಶಿತ ಯೋಜನೆಯ ಬಗ್ಗೆ ಅನುದಾನಿತ ಹಾಗೂ ಅನುದಾನರಹಿತ ಕಾಲೇಜುಗಳ ಆಡಳಿತ ಮಂಡಳಿಗೆ ಸರಿಯಾದ ಪ್ರಸ್ತಾವ ಸಲ್ಲಿಸಿಲ್ಲ. ಯೋಜನೆಯ ಬಗ್ಗೆ ಸರಿಯಾದ ಮಾಹಿತಿಯೇ ತಿಳಿಯದಿರುವಾಗ ಅದರ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಕಷ್ಟವಾಗುತ್ತದೆ ಎಂದು ಬೆಂಗಳೂರು ಖಾಸಗಿ ಕಾಲೇಜು ಆಡಳಿತ ಮಂಡಳಿಗಳ ಸಂಘಟನೆಯ ಪ್ರತಿನಿಧಿ ಹಾಗೂ ಆರ್.ವಿ.ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಎಂ.ಕೆ.ಪಾಂಡುರಂಗ ಶೆಟ್ಟಿ ಹೇಳಿದರು.

ಪ್ರವೇಶ ಪತ್ರಗಳನ್ನು ದುಬಾರಿ ಬೆಲೆಗೆ ಮಾರಾಟ ಮಾಡಿ ಖಾಸಗಿ ಕಾಲೇಜುಗಳು ಹಣ ಸಂಪಾದಿಸುತ್ತಿವೆ ಎಂದು ಸರ್ಕಾರ ಆರೋಪಿಸಿದೆ. ಆದರೆ ಇಂತಹ ದುಸ್ಥಿತಿ ಖಾಸಗಿ ಕಾಲೇಜುಗಳಿಗೆ ಬಂದಿಲ್ಲ. ಮುಂದಿನ ವರ್ಷದಿಂದ ಉಚಿತವಾಗಿಯೇ ಪ್ರವೇಶ ಪತ್ರಗಳನ್ನು ಎಲ್ಲ ಖಾಸಗಿ ಕಾಲೇಜುಗಳು ವಿತರಿಸಲು ನಿರ್ಧಾರ ತೆಗೆದುಕೊಂಡಿವೆ ಎಂದರು.

ಪ್ರವೇಶ ಪತ್ರ ಹಾಗೂ ಕಾಲೇಜು ಬಗ್ಗೆಯ ಸಂಪೂರ್ಣ ಮಾಹಿತಿ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಕಾಲೇಜುಗಳ ವೆಬ್‌ಸೈಟ್‌ನಲ್ಲಿಯೇ ದೊರೆಯಲಿದೆ. ವಿದ್ಯಾರ್ಥಿಗಳು ಅಲ್ಲಿಂದಲೇ ಪ್ರವೇಶ ಪತ್ರ 'ಡೌನ್‌ಲೋಡ್' ಮಾಡಿಕೊಂಡು ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು.

ಸರ್ಕಾರಿ, ಅನುದಾನಿತ, ಅನುದಾನ ರಹಿತ, ಸ್ವಾಯತ್ತ ಕಾಲೇಜುಗಳಲ್ಲಿ ಪ್ರತ್ಯೇಕ ಶುಲ್ಕ ಇದೆ. ಅಲ್ಲದೆ ಅನುದಾನಿತ ಕೋರ್ಸ್‌ಗಳು, ಅನುದಾನ ರಹಿತ ಕೋರ್ಸ್‌ಗಳಿಗೆ ಬೇರೆ ಬೇರೆ ಶುಲ್ಕ ನಿಗದಿಯಾಗಿದೆ. ಅನುದಾನ ರಹಿತ ಕೋರ್ಸ್ ಮತ್ತು ಕಾಲೇಜುಗಳ ಸಿಬ್ಬಂದಿಗೆ ಸ್ಪರ್ಧಾತ್ಮಕ ವೇತನವನ್ನೂ ನೀಡಬೇಕಿದೆ. ಆದ್ದರಿಂದ ಸರ್ಕಾರ ತನ್ನ ಉದ್ದೇಶಿತ ಕೇಂದ್ರೀಕೃತ ಪ್ರವೇಶ ನೀತಿಯಲ್ಲಿ ಇದನ್ನೆಲ್ಲ ಗಮನದಲ್ಲಿಟ್ಟುಕೊಳ್ಳಬೇಕಾದ ಅಗತ್ಯ ಇದೆ ಎಂದು ಅವರು ಪ್ರತಿಪಾದಿಸಿದರು.

ಆದ್ದರಿಂದ ಈ ಕುರಿತು ಸರ್ಕಾರ ತನ್ನ ಯೋಜನೆಯ ಕರಡನ್ನು ಎಲ್ಲ ಕಾಲೇಜುಗಳಿಗೂ ಒದಗಿಸಿದರೆ, ಚರ್ಚಿಸಿ ಸರ್ಕಾರಕ್ಕೆ ತಮ್ಮ ಸ್ಪಷ್ಟ ನಿಲುವು ತಿಳಿಸಬಹುದು ಎಂದರು.

ಶೇಷಾದ್ರಿಪುರ ಕಾಲೇಜಿನ ಪ್ರತಿನಿಧಿ ಡಬ್ಲ್ಯು.ಟಿ.ಕೃಷ್ಣ ಮಾತನಾಡಿ, ಸರ್ಕಾರ ಪ್ರಾಯೋಗಿಕವಾಗಿ ಜಾರಿಗೊಳಿಸಲು ಉದ್ದೇಶಿಸಿರುವ ಈ ಯೋಜನೆಯನ್ನು ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳ ಅನುದಾನಿತ ಕೋರ್ಸ್‌ಗಳಲ್ಲಿ ಮಾತ್ರ ಜಾರಿಗೊಳಿಸುವಂತೆ ಸಲಹೆ ನೀಡಿದರು. ಅನುದಾನ ರಹಿತ ಕಾಲೇಜುಗಳಲ್ಲಿ ಈ ಪದ್ಧತಿ ಜಾರಿಗೊಳಿಸಿದರೆ ಆಡಳಿತ ಮಂಡಳಿಗೆ ಹೆಚ್ಚಿನ ಹೊರೆಯಾಗುತ್ತದೆ ಎಂದರು.

ಎಪಿಎಸ್ ಕಾಲೇಜಿನ ಡಾ. ಗೋಕುಲನಾಥ್ ಮಾತನಾಡಿ, 'ಸರ್ಕಾರ ಅನುದಾನಿತ ಕಾಲೇಜುಗಳಲ್ಲಿನ ಅನುದಾನ ರಹಿತ ಕೋರ್ಸ್‌ಗಳನ್ನು ಅನುದಾನಿತ ಕೋರ್ಸ್‌ಗಳನ್ನಾಗಿ ಪರಿವರ್ತಿಸಿ, ಅಲ್ಲಿನ ಸಿಬ್ಬಂದಿಯನ್ನು ಕಾನೂನಾತ್ಮಕವಾಗಿ ಕಾಯಂಗೊಳಿಸಿದರೆ ಈ ಪದ್ಧತಿಯನ್ನು ಅಳವಡಿಸಿಕೊಳ್ಳಬಹುದು' ಎಂದರು.

ಸಂಜೆವಾಣಿ ಶುಕ್ರವಾರ 5 ಫೆಬ್ರವರಿ 2010



ಶೇಷಾದ್ರಿಪುರಂ ಕಾಲೇಜು ವ್ಯವಸ್ಥೆ ಮಾಡಿದ್ದ ಸ್ವಯಂ ರಕ್ತದಾನ ಶಿಬಿರವನ್ನು ಖ್ಯಾತ ನಟಿ ತಾರಾವೇಣು ಉದ್ಘಾಟಿಸಿದರು. ಶಿಕ್ಷಣತಜ್ಞ ಡಾ. ವೂಡೆ ಪಿ. ಕೃಷ್ಣ, ರೆಡ್‌ಕ್ರಾಸ್ ಕೋಶಾಧ್ಯಕ್ಷ ರಾಜು, ಚಂದ್ರಶೇಖರ್, ಪ್ರಾಂಶುಪಾಲ ಡಾ. ಎನ್. ಬಾಲಕೃಷ್ಣ ಇತರರು ಉಪಸ್ಥಿತರಿದ್ದಾರೆ.

ಹೊಸ ದಿಗಂತ ಬುಧವಾರ, 3 ಫೆಬ್ರವರಿ 2010

ರಕ್ತದಾನ ಮಹಾದಾನ



ಶೇಷಾದ್ರಿಪುರಂ ಕಾಲೇಜು ಮಂಗಳವಾರ ಏರ್ಪಡಿಸಿದ್ದ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ನಟಿ ತಾರಾ ವೇಣು ಉದ್ಘಾಟಿಸಿದರು. ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ, ರಾಜ್ಯ ರೆಡ್‌ಕ್ರಾಸ್ ಕೋಶಾಧ್ಯಕ್ಷ ರಾಜು ಚಂದ್ರಶೇಖರ್, ಪ್ರಾಂಶುಪಾಲ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಎನ್.ಎಸ್.ಎಸ್. ಅಧಿಕಾರಿ ಪ್ರತಾಪ್ ಲಿಂಗಯ್ಯ, ಯುವ ರೆಡ್‌ಕ್ರಾಸ್ ಕಾರ್ಯಕ್ರಮಾಧಿಕಾರಿ ಎಸ್. ಲತ ಉಪಸ್ಥಿತರಿದ್ದರು.

ಈ ಸಂಜೆ

ಮಂಗಳವಾರ, 02 ಫೆಬ್ರುವರಿ, 2010



ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ, ಕರ್ನಾಟಕ ಸ್ವಯಂ ಪ್ರೇರಿತ ರಕ್ತದಾನಿಗಳ ಅಸೋಸಿಯೇಷನ್ ಸಂಯುಕ್ತಾಶ್ರಯದಲ್ಲಿ ನಡೆದ ಶಿಬಿರದಲ್ಲಿ ಚಿತ್ರನಟಿ ತಾರಾವೇಣು, ರೆಡ್‌ಕ್ರಾಸ್‌ನ ರಾಜು ಚಂದ್ರಶೇಖರ್, ಕಾಲೇಜಿನ ಪ್ರಾಂಶುಪಾಲ ನರಹಳ್ಳಿ ಬಾಲಸುಬ್ರಹ್ಮಣ್ಯಂ, ಶಿಕ್ಷಣ ಸಂಸ್ಥೆಯ ಮುಡೆ ಪಿ ಕೃಷ್ಣ ಪಾಲ್ಗೊಂಡಿದ್ದರು.

ಹೊಸ ದಿಗಂತ

ಸೋಮವಾರ 01, ಫೆಬ್ರವರಿ 2010

ನಾಳೆ ಸ್ವಯಂಪ್ರೇರಿತ ರಕ್ತದಾನ ಶಿಬಿರ

ಬೆಂಗಳೂರು: ನಗರದ ಶೇಷಾದ್ರಿಪುರಂ ಕಾಲೇಜು, ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಹಾಗೂ ರೋಟರಿ ಬೆಂಗಳೂರು ಮಿಡ್‌ಟೌನ್, ಕರ್ನಾಟಕ ಸ್ವಯಂಪ್ರೇರಿತ ರಕ್ತದಾನಿಗಳ ಸಂಘಗಳ ಜಂಟಿ ಆಶ್ರಯದಲ್ಲಿ ಫೆ.2ರಂದು ಸ್ವಯಂಪ್ರೇರಿತ ರಕ್ತದಾನ ಶಿಬಿರ ಆಯೋಜಿಸಲಾಗಿದೆ.

ಅಂದು ಬೆಳಗ್ಗೆ 9.30ಕ್ಕೆ ಶೇಷಾದ್ರಿಪುರಂ ಕಾಲೇಜು ಆವರಣದಲ್ಲಿ ಶಿಬಿರ ನಡೆಯಲಿದ್ದು, ಭಾರತೀಯ ರೆಡ್ ಕ್ರಾಸ್ ಸಂಘದ ಕರ್ನಾಟಕ ಶಾಖೆಯ ಉಪಾಧ್ಯಕ್ಷ ವೂಡೇ ಪಿ.ಕೃಷ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಚಲನಚಿತ್ರ ನಟಿ ತಾರಾವೇಣು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ಶಾಖೆಯ ಖಜಾಂಚಿ ರಾಜು ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಎನ್. ಜಿ.ನಾರಾಯಣ, ರೋಟರಿ ಬೆಂಗಳೂರು ಮಿಡ್ ಟೌನ್ ಅಧ್ಯಕ್ಷ ಗೋಪಾಲ ಭಾಟಿಯಾ, ಕಾಲೇಜು ಪ್ರಾಂಶುಪಾಲ ನರಹಳ್ಳಿ ಬಾಲಸುಬ್ರಹ್ಮಣ್ಯ ಮುಂತಾದವರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಆಸಕ್ತರು: 080-22264205/22268435/ 9900380238ನ್ನು ಸಂಪರ್ಕಿಸಬಹುದು.

ಇಂದು ಸಂಜೆ ಶನಿವಾರ, ಜ. 30, 2010



ಮಹಾತ್ಮ ಗಾಂಧಿಯವರ ಪುಣ್ಯ ತಿಥಿ ಅಂಗವಾಗಿ ಗಾಂಧಿಭವನದಲ್ಲಿಂದು ಹುತಾತ್ಮರ ದಿನಾಚರಣೆ ಏರ್ಪಡಿಸಲಾಗಿತ್ತು. ಗಾಂಧಿ ಭವನ ಟ್ರಸ್ಟ್ ಅಧ್ಯಕ್ಷ ಹೊ.ಶ್ರೀನಿವಾಸಯ್ಯ, ದೂರದರ್ಶನ ನಿರ್ದೇಶಕ ಮಹೇಶ್ ಜೋಷಿ ಮತ್ತಿತರರು ಪಾಲ್ಗೊಂಡಿದ್ದರು.

ಸಂಜೆವಾಣಿ

ಶನಿವಾರ 30 ಜನವರಿ 2010



ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್ ವತಿಯಿಂದ ದಿ. ಕೆ.ಸಿ ಪುಟ್ಟನರಸಯ್ಯ ಅವರ ಸ್ಮರಣಾರ್ಥ ಆಯೋಜಿಸಿದ್ದ ಅಂತರ ಪ್ರೌಢ ಶಾಲಾ ಮಟ್ಟದ ದೇವರನಾಮ ಗಾಯನ ಸ್ಪರ್ಧಾ ಸಮಾರಂಭದಲ್ಲಿ ತುಮಕೂರು ವಿಶ್ವ ವಿದ್ಯಾಲಯದ ಉಪ ಕುಲಪತಿ ಡಾ. ಎಸ್.ಸಿ ಶರ್ಮ ಅವರನ್ನು ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೆ ಪಿ. ಕೃಷ್ಣ ಅವರು ಸನ್ಮಾನಿಸಿದರು. ಸರೋಜ ನಂಜಪ್ಪ, ಕೃಷ್ಣಸ್ವಾಮಿ. ಕೆ, ಪ್ರೊ. ಕೆ.ಪಿ. ನರಸಿಂಹ ಮೂರ್ತಿ ಅವರು ಇದ್ದಾರೆ.

ಈ ಸಂಜೆ
ಶನಿವಾರ, 30 ಜನವರಿ, 2010



ಬೆಂಗಳೂರಿನ ಗಾಂಧಿ ಸ್ಮಾರಕ ನಿಧಿ ಹಾಗೂ ಗಾಂಧಿ ಶಾಂತಿ ಪ್ರತಿಷ್ಠಾನ ಹಮ್ಮಿಕೊಂಡಿದ್ದ ಸರ್ವೋದಯ ದಿನಾಚರಣೆಯಲ್ಲಿ ಶೇಷಾದ್ರಿ ವೃತ್ತದಲ್ಲಿರುವ ಗಾಂಧಿ ಪ್ರತಿಮೆಗೆ ಹೊ.ಶ್ರೀನಿವಾಸಯ್ಯ ಪುಷ್ಪನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಡಾ.ವೂಡೆ ಪಿ.ಕೃಷ್ಣ ಹಾಜರಿದ್ದರು.

ಉದಯವಾಣಿ ಜನವರಿ 28, 2010

ದೇವರನಾಮ ಗಾಯನ ಸ್ಪರ್ಧೆ

ಶೇಷಾದ್ರಿಪುರಂ

ಕೆ.ಸಿ.ಪುಟ್ಟನರಸಯ್ಯ ಸ್ಮರಣಾರ್ಥ ಅಂತರ ಪ್ರೌಢ ಶಾಲಾ ದೇವರನಾಮ ಗಾಯನ ಸ್ಪರ್ಧೆ ಇತ್ತೀಚೆಗೆ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಸಭಾಂಗಣದಲ್ಲಿ ನಡೆಯಿತು. 13 ಶಾಲೆಗಳಿಂದ 26 ಸ್ಪರ್ಧಿಗಳು ಭಾಗವಹಿಸಿದ್ದರು. ತುಮಕೂರು ವಿಶ್ವವಿದ್ಯಾಲಯ ಉಪಕುಲಪತಿ ಡಾ.ಎಸ್.ಸಿ.ಶರ್ಮಾ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶೇಷಾದ್ರಿಪುರಂ ಶಿಕ್ಷಣ ದತ್ತಿ ಉಪಾಧ್ಯಕ್ಷ ಡಬ್ಲ್ಯು. ಎಚ್.ಅನಿಲ್ ಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

ಅತಿಥಿಗಳಾಗಿ ಶೇಷಾದ್ರಿಪುರಂ ಶಿಕ್ಷಣ ದತ್ತಿ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಸಹ ಕಾರ್ಯದರ್ಶಿ ಸರೋಜ ನಂಜಪ್ಪ, ಶ್ರೀ ಕೃಷ್ಣಸ್ವಾಮಿ.ಕೆ., ಧರ್ಮದರ್ಶಿಗಳು ಪ್ರೊ. ಕೆ.ಪಿ. ನರಸಿಂಹಮೂರ್ತಿ ಹಾಗೂ ಇತರ ಗಣ್ಯರು ಹಾಜರಿದ್ದರು. ಮುಖ್ಯೋಪಾಧ್ಯಾಯಿನಿ ವಿನಯಾ ಸುವರ್ಣ, ಸಂಗೀತ ಶಿಕ್ಷಕಿ ಕೆ.ಆರ್.ಗೀತಾ ಕಾರ್ಯಕ್ರಮದ ಸಂಚಾಲಕರಾಗಿದ್ದರು.

ಪರ್ಯಾಯ ಫಲಕ ವಿಜೇತ ಶಾಲೆ ಬೆಂಗಳೂರು ಎಜ್ಯುಕೇಷನ್ ಸೊಸೈಟಿ, ಪ್ರಥಮ ಬಹುಮಾನ: ರಾಜೀವ್. ಆರ್. ಬೆಂಗಳೂರು ಎಜ್ಯುಕೇಷನ್ ಸೊಸೈಟಿ, ಮಲ್ಲೇಶ್ವರಂ, ದ್ವಿತೀಯ ಬಹುಮಾನ: ಅನಿಲ್. ಬಿ.ಎಸ್ - ವಿಜಯಾ ಪ್ರೌಢ ಶಾಲೆ, ತೃತೀಯ ಬಹುಮಾನ: ಅನಿರುದ್ಧ್ - ಪೂರ್ಣ ಪ್ರಜ್ಞ ಪ್ರೌಢ ಶಾಲೆ, ಸಮಾಧಾನಕರ ಬಹುಮಾನ: ಪೂರ್ವಿ ಡಿ ಅರಸ್ - ಮಲ್ಲೇಶ್ವರಂ ಲೇಡಿಸ್ ಅಸೋಸಿಯೇಷನ್, ವಾದಿರಾಜ್ ದೇಸಾಯಿ - ತಿರುಮಲ ವಿದ್ಯಾನಿಕೇತನ್ ಪಡೆದರು.



ಹೈಟಿಗಾಗಿ ದೇಣಿಗೆ ಸಂಗ್ರಹ

ಭಾರತೀಯ ರೆಡ್ ಕ್ರಾಸ್ ಸಂಸ್ಥೆ ರಾಜ್ಯ ಶಾಖೆ ಹೈಟಿ ಭೂಕಂಪ ಸಂತ್ರಸ್ತರಿಗೆ ನೆರವು ನೀಡಲು ಜನತೆಯಿಂದ ದೇಣಿಗೆ ಸಂಗ್ರಹ ಕಾರ್ಯ ಕೈಗೊಂಡಿದೆ. ದಾನಿಗಳು ಸಂಸ್ಥೆಗೆ ನೀಡುವ ದೇಣಿಗೆ ಸೆಕ್ಷನ್ 80ಜಿ, ಆದಾಯ ತೆರಿಗೆ ಕಾಯಿದೆ ಅಡಿಯಲ್ಲಿ ವಿನಾಯಿತಿಗೊಳಪಟ್ಟಿದೆ. ಧನ ಸಹಾಯ ಮಾಡುವವರು ಕ್ರಾಸ್ ಚೆಕ್ ಮತ್ತು ಡಿಮಾಂಡ್ ಡ್ರಾಫ್ಟನ್ನು 'ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಹೈಟಿ ಭೂಕಂಪ ಸಂತ್ರಸ್ತರ ಖಾತೆ' ಹೆಸರಿಗೆ ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, 26, ರೆಡ್ ಕ್ರಾಸ್ ಭವನ, 1ನೇ ಮಹಡಿ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು 560 001 ಅಥವಾ ಹೈಟಿ ಭೂಕಂಪ ಸಂತ್ರಸ್ತರ ಕೆನರಾ ಬ್ಯಾಂಕ್ ಖಾತೆ 2827201001198 (IFSC-CNRB-0002827)ಗೆ ನೀಡಬಹುದು ಎಂದು ಸಂಸ್ಥೆಯ ಉಪ ಕಾರ್ಯದರ್ಶಿ ವೂಡೆ. ಪಿ. ಕೃಷ್ಣ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಪ್ರಜಾವಾಣಿ ಮಂಗಳವಾರ 26ನೇ ಜನವರಿ 2010

ಸಿಟಿ ಸಮಾಚಾರ

ದೇಣಿಗೆ ಸಂಗ್ರಹಣೆ

ಹೈಟಿಯಲ್ಲಿ ಇತ್ತೀಚೆಗೆ ಸಂಭವಿಸಿದ ಭೂಕಂಪನದ ಸಂತ್ರಸ್ತರಿಗೆ ನೆರವಾಗಲು ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆಯು ಮುಂದಾಗಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರಿಂದ ದೇಣಿಗೆಯನ್ನು ಸಂಗ್ರಹಿಸುತ್ತಿದೆ.

'ಆರ್ಥಿಕವಾಗಿ ನೆರವಾಗಲು ಸಾರ್ವಜನಿಕರು ಮುಂದಾಗಬೇಕು. ದೇಣಿಗೆಯನ್ನು ಸಂತ್ರಸ್ತರ ಪುನರ್ವಸತಿಗೆ ಬಳಕೆ ಮಾಡಲಾಗುವುದು' ಎಂದು ಸಂಸ್ಥೆಯ ರಾಜ್ಯ ಶಾಖೆಯ ಉಪಾಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಆಸಕ್ತರು 'ಭಾರತೀಯ ರೆಡ್ ಕ್ರಾಸ್ ಹೈಟಿ ಭೂಕಂಪ ಸಂತ್ರಸ್ತರ ಖಾತೆ' ಹೆಸರಿನಲ್ಲಿ ಡಿಡಿ ಅಥವಾ ಕ್ರಾಸ್ ಮಾಡಿದ ಚೆಕ್ ಪಡೆದು ದೇಣಿಗೆ ನೀಡಬೇಕಾದ ಕೆನರಾ ಬ್ಯಾಂಕ್‌ನ ಖಾತೆ ಸಂಖ್ಯೆ: 2827201001198 (ಐಎಫ್‌ಎಸ್‌ಸಿ–ಸಿಎನ್‌ಆರ್‌ಬಿ–0002827). ದೂರವಾಣಿ ಸಂಖ್ಯೆ: 98441 56100.

ಈ ಸಂಜೆ
ಮಂಗಳವಾರ, 26 ಜನವರಿ, 2010

ಇಷ್ಟಪಟ್ಟು ಶಿಕ್ಷಣ ಕಲಿಯಿರಿ



ಬೆಂಗಳೂರು, ಜ.26-ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ಕಷ್ಟಪಟ್ಟು ಕಲಿಯದೆ ಇಷ್ಟಪಟ್ಟು ಕಲಿಯಬೇಕೆಂದು ತಿಳಿಸಿದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಬೆಂಗಳೂರು ಉತ್ತರ ಜಿಲ್ಲೆ ಉಪನಿರ್ದೇಶಕ ಪಿ.ನಂಜುಂಡ ಮೂರ್ತಿ, ಶ್ರದ್ಧೆಯಿಂದ ವಿದ್ಯೆ ಕಲಿತಲ್ಲಿ ಗುರಿ ಸಾಧಿಸಬಹುದು ಎಂದರು. ಶೇಷಾದ್ರಿಪುರಂ ಸಂಜೆ ಪದವಿ ಪೂರ್ವ ಕಾಲೇಜು, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಸಭಾಂಗಣದಲ್ಲಿ ಏರ್ಪಡಿಸಿದ್ದ ವಾರ್ಷಿಕೋತ್ಸವ-2010 ಸಮಾರಂಭದಲ್ಲಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ಸಮಾಜದ ಎಲ್ಲಾ ವರ್ಗದವರಿಗೂ ಗುಣಾತ್ಮಕ ಶಿಕ್ಷಣ ಕೊಡುವುದು ಸಂಸ್ಥೆಯ ಉದ್ದೇಶ. ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಮನೋಭಾವ ಬೆಳೆಸಿಕೊಂಡು ಇಷ್ಟಪಟ್ಟು ಕಲಿಯಬೇಕು ಎಂದರು. ಕಾಲೇಜಿನ ಆಡಳಿತ ಸಲಹಾ ಪರಿಷತ್ ಅಧ್ಯಕ್ಷ ಎಸ್.ವೀರಭದ್ರಯ್ಯ, ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಎಂ.ಆರ್.ಶ್ರೀನಿವಾಸ್ ಕಾರ್ಯಕ್ರಮದಲ್ಲಿ ಇದ್ದರು.

ಸಂಜೆವಾಣಿ ಶನಿವಾರ 23 ಜನವರಿ 2010

ಗಾಂಧಿ ಶಾಂತಿ ಪ್ರತಿಷ್ಠಾನದಲ್ಲಿ ಗಣರಾಜ್ಯೋತ್ಸವ

ಬೆಂಗಳೂರು, ಜ. ೨೨- ನಗರದ ಗಾಂಧಿ ಸ್ಮಾರಕ ನಿಧಿ ಹಾಗೂ ಗಾಂಧಿ ಶಾಂತಿ ಪ್ರತಿಷ್ಠಾನಗಳು ಜಂಟಿಯಾಗಿ ಜ. 26 ರಂದು ಬೆಳಗ್ಗೆ 9.30ಕ್ಕೆ ಕುಮಾರ ಪಾರ್ಕ್ ಪೂರ್ವದಲ್ಲಿರುವ ಗಾಂಧಿ ಭವನ ದಲ್ಲಿ "ಗಣರಾಜ್ಯೋತ್ಸವ" ಕಾರ್ಯಕ್ರಮ ಹಮ್ಮಿಕೊಂಡಿದೆ.

ಗಾಂಧಿಸ್ಮಾರಕ ನಿಧಿಯ ಅಧ್ಯಕ್ಷ ಡಾ.ಹೊ. ಶ್ರೀನಿವಾಸಯ್ಯ ಅವರು ರಾಷ್ಟ್ರಧ್ವಜಾರೋಹಣ ನೆರ ವೇರಿಸಲಿದ್ದು, ನವದೆಹಲಿಯ ನ್ಯಾಷನಲ್ ಗಾಂಧಿ ವಸ್ತು ಸಂಗ್ರಹಾಲಯದ ನಿರ್ದೇಶಕ ಡಾ. ವರ್ಷಾದಾಸ್ ಅವರು ಗಾಂಧೀಜಿ ಅವರ ಭಾವಚಿತ್ರಗಳ ಪ್ರದರ್ಶನ ಉದ್ಘಾಟಿಸುವರು.

ಅದೇ ಸಂದರ್ಭದಲ್ಲಿ ಮಾಜಿ ಸಚಿವ ಪ್ರೊ. ಬಿ.ಕೆ. ಚಂದ್ರಶೇಖರ್ ಅವರ ಅಧ್ಯಕ್ಷತೆಯಲ್ಲಿ ನಡೆ ಯುವ "ಭಾರತದಲ್ಲಿ ಗಣರಾಜ್ಯ ಫಲಪ್ರದವಾಗಿದೆಯೇ ?" ಎಂಬ ವಿಷಯದ ಚರ್ಚೆಯಲ್ಲಿ ನವ ದೆಹಲಿಯಲ್ಲಿ ರಾಜ್ಯ ಸರ್ಕಾರದ ವಿಶೇಷ ಪ್ರತಿನಿಧಿ ಧನಂಜಯಕುಮಾರ್, ವಿಧಾನ ಪರಿಷತ್‌ನ ಮಾಜಿ ವಿರೋಧ ಪಕ್ಷದ ನಾಯಕ ವಿ.ಎಸ್. ಉಗ್ರಪ್ಪ, ವಿಧಾನ ಪರಿಷತ್ ಸದಸ್ಯ ಎಂ.ಪಿ. ನಾಡ ಗೌಡ ಅವರು ಭಾಗವಹಿಸಲಿದ್ದು, ಗಾಂಧಿ ಶಾಂತಿ ಪ್ರತಿಷ್ಠಾನದ ಡಾ. ವೂಡೆ ಪಿ. ಕೃಷ್ಣ ಅವರು ಉಪ ಸ್ಥಿತರಿರುವರು. ಸಾಯಿಬಾಬಾ ನಗರದ ಲಿಟಲ್ ಫ್ಲವರ್ಸ್ ಪ್ರೌಢಶಾಲಾ ವಿದ್ಯಾರ್ಥಿಗಳು ರಚಿಸಿರುವ ಚಿತ್ರಗಳು ಸೇರಿದಂತೆ, ಗಾಂಧೀಜಿ ಅವರ ವಿವಿಧ ಭಾವಚಿತ್ರಗಳ ಪ್ರದರ್ಶನ ಜ. 26 ರಿಂದ ಆರಂಭ ವಾಗಿ 30ರ ವರೆಗೆ (ಪ್ರತಿದಿನ ಬೆಳಗ್ಗೆ 9 ರಿಂದ ಸಂಜೆ 7ರ ವರೆಗೆ) ನಡೆಯಲಿದೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಸಂಜೆವಾಣಿ
ಸೋಮವಾರ 25 ಜನವರಿ 2010

ಹೈಟಿಗೆ ರೆಡ್‌ಕ್ರಾಸ್ ನೆರವು

ಬೆಂಗಳೂರು, ಜ. ೨೪- ಹೈಟಿಯಲ್ಲಿ ಸಂಭವಿಸಿದ ಭೂಕಂಪದಿಂದಾಗಿ ಬೀದಿ ಪಾಲಾದ ಸಂತ್ರಸ್ತರಿಗೆ ನೆರವು ನೀಡಲು ಭಾರತೀಯ ರೆಡ್ ಕ್ರಾಸ್ ಸಂಸ್ಥೆ ದೇಣಿಗೆ ಸಂಗ್ರಹಿಸಲು ನಿರ್ಧರಿಸಿದೆ.

ಸಂಘ ಸಂಸ್ಥೆಗಳು ದಾನಿಗಳಿಂದ ಹಣದ ನೆರವು ಕೋರಲಾಗಿದೆ ಎಂದು ಪತ್ರಿಕಾಗೋಷ್ಠಿಯಲ್ಲಿಂದು ತಿಳಿಸಿದ ಸಂಸ್ಥೆಯ ರಾಜ್ಯ ವಿಭಾಗದ ಉಪಾಧ್ಯಕ್ಷ ಉಡುಪಿ ಕೃಷ್ಣ ರವರು ಕೆಳಕಂಡ ವಿಳಾಸಕ್ಕೆ ಚೆಕ್ ಅಥವಾ ಡಿಡಿ ಮೂಲಕ ಹಣ ನೀಡುವಂತೆ ಮನವಿ ಮಾಡಿದರು.

ಹಣ ನೀಡಲಿಚ್ಛಿಸುವವರು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಐಟಿ ಭೂಕಂಪ ಸಂತ್ರಸ್ತರ ಕೆನರಾ ಬ್ಯಾಂಕ್ ಖಾತೆ ಸಂಖ್ಯೆ- 2827201001198 (IFFE-CNRB-0002827) ಖಾತೆಗೆ ನೀಡಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ 9844156100,9886288703 ಸಂಪರ್ಕಿಸಬಹುದಾಗಿದೆ.

ಈ ಸಂಜೆ

ಸೋಮವಾರ, 25 ಜನವರಿ, 2010

ರೆಡ್‌ಕ್ರಾಸ್ ಸಂಸ್ಥೆಯಿಂದ ನೆರವು

ಬೆಂಗಳೂರು, ಜ.25- ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಇಲಾಖೆಯು ಹೈಟಿಯಲ್ಲಿ ಸಂಭವಿಸಿದ ಭೂಕಂಪದಿಂದ ನೊಂದು ಸಂಕಷ್ಟಕ್ಕೊಳಗಾಗಿರುವ ಸಂತ್ರಸ್ತರಿಗೆ ಆರ್ಥಿಕ ಸಹಾಯ ಒದಗಿಸಲು ಮುಂದಾಗಿದ್ದು, ಸಂಘ-ಸಂಸ್ಥೆ ಹಾಗೂ ದಾನಿಗಳು ಮತ್ತು ಸಾರ್ವಜನಿಕರಿಂದ ದೇಣಿಗೆ ಸಂಗ್ರಹಿಸಲು ಮುಂದಾಗಿದೆ.

ಭಾರತೀಯ ರೆಡ್‌ಕ್ರಾಸ್ ಸಂಸ್ಥೆಗೆ ದಾನಿಗಳು ನೀಡುವ ದೇಣಿಗೆಯು ಸೆಕ್ಷನ್ 80 ಜಿ ಆದಾಯ ತೆರಿಗೆ ಕಾಯ್ದೆ ಅಡಿಯಲ್ಲಿ ವಿನಾಯಿತಿಗೆ ಒಳಪಟ್ಟಿರುವುದರಿಂದ ಸಂಘ-ಸಂಸ್ಥೆಗಳು, ಸಾರ್ವಜನಿಕರು, ದಾನಿಗಳು ಮುಕ್ತ ಮನಸ್ಸಿನಿಂದ ಉದಾರವಾಗಿ ದೇಣಿಗೆ ನೀಡುವಂತೆ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಕರ್ನಾಟಕ ಶಾಖೆ ಉಪಾಧ್ಯಕ್ಷ ವೂಡೆ.ಪಿ.ಕೃಷ್ಣ ಪತ್ರಿಕಾಗೋಷ್ಠಿಯಲ್ಲಿ ಮನವಿ ಮಾಡಿದರು.


ಧನ ಸಹಾಯ ಮಾಡುವವರು ಕ್ರಾಸ್ ಮಾಡಿದ ಚೆಕ್ ಮತ್ತು ಡಿಡಿಗಳನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಹೈಟಿ ಭೂಕಂಪ ಸಂತ್ರಸ್ತರ ಖಾತೆ ಹೆಸರಿಗೆ ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ನಂ.26, ರೆಡ್‌ಕ್ರಾಸ್ ಭವನ, 1ನೆ ಮಹಡಿ, ರೇಸ್‌ಕೋರ್ಸ್ ರೋಡ್, ಬೆಂಗಳೂರು-01 ಇಲ್ಲಿಗೆ ಕಳುಹಿಸುವಂತೆ ಕೋರಿ ಮನವಿ ಮಾಡಿದರು.

ದಾನಿಗಳು ದೇಣಿಗೆಯನ್ನು ಇಸಿಎಸ್ ಮಾದರಿಯಲ್ಲಿ ಚೆಕ್ ಅಥವಾ ಡಿಡಿ ಮೂಲಕ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಹೈಟಿ ಭೂಕಂಪ ಸಂತ್ರಸ್ತರ ಕೆನರಾ ಬ್ಯಾಂಕ್ ಖಾತೆ ಸಂಖ್ಯೆ 2827 201001198 (ಐಎಫ್‌ಎಸ್‌ಸಿ-ಸಿಎನ್ ಆರ್‌ಬಿ-0002827) ನೀಡುವಂತೆ ಮನವಿ ಮಾಡಿದರು.

ಪ್ರಜಾವಾಣಿ


ಸೋಮವಾರ 18ನೇ ಜನವರಿ 2010

ಯುವ ದಿನಾಚರಣೆ



ಬೆಂಗಳೂರಿನ ಗಾಂಧಿ ಶಾಂತಿ ಪ್ರತಿಷ್ಠಾನದಿಂದ ಗಾಂಧಿ ಭವನದಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ರಾಷ್ಟ್ರೀಯ ಯುವ ದಿನಾಚರಣೆಯನ್ನು ಸಾಹಿತಿ ಡಾ. ಪ್ರಭುಶಂಕರ್ ಉದ್ಘಾಟಿಸಿದರು. ತುಮಕೂರು ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ವೀರೇಶಾನಂದ ಸರಸ್ವತಿ, ಪ್ರತಿಷ್ಠಾನದ ಅಧ್ಯಕ್ಷ ಡಾ.ವೂಡೇ. ಪಿ.ಕೃಷ್ಣ, ಗಾಂಧಿವಾದಿ ಡಾ.ಹೋ.ಶ್ರೀನಿವಾಸಯ್ಯ, ಪ್ರೊ.ಎಚ್.ಆರ್.ದಾಸೇಗೌಡ ಇತರರಿದ್ದಾರೆ.

ಸಂಜೆವಾಣಿ ಶನಿವಾರ 16 ಜನವರಿ 2010



ನಗರದ ಗಾಂಧಿ ಶಾಂತಿ ಪ್ರತಿಷ್ಠಾನ ಇತ್ತೀಚೆಗೆ ಗಾಂಧಿ ಭವನದಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಯುವ ದಿನಾಚರಣೆ ಕಾರ್ಯಕ್ರಮವನ್ನು ಸಾಹಿತಿ ಡಾ. ಪ್ರಭುಶಂಕರ್ ಉದ್ಘಾಟಿಸಿದರು. ಚಿತ್ರದಲ್ಲಿ ತುಮಕೂರು ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮ ಅಧ್ಯಕ್ಷ ಸ್ವಾಮಿ ವಿರೇಶಾನಂದ ಸರಸ್ವತಿ, ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೆ ಪಿ. ಕೃಷ್ಣ, ಡಾ. ಹೋ. ಶ್ರೀನಿವಾಸಯ್ಯ ಮತ್ತು ಪ್ರೊ. ಹೆಚ್.ಆರ್. ದಾಸೇಗೌಡ ಇದ್ದಾರೆ.

ಈ ಸಂಜೆ

ಭಾನುವಾರ, 17 ಜನವರಿ, 2010



ಗಾಂಧೀ ಭವನದಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಯುವ ದಿನಾಚರಣೆಯನ್ನು ಸಾಹಿತಿ ಡಾ.ಪ್ರಭು ಶಂಕರ ಉದ್ಘಾಟಿಸಿದರು. ತುಮಕೂರು ಶ್ರೀ ವೀರೇಶಾನಂದ ಸರಸ್ವತಿ, ಗಾಂಧೀ ಶಾಂತಿ ಪ್ರತಿಷ್ಠಾನ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಹಿರಿಯ ಗಾಂಧಿವಾದಿಗಳಾದ ಡಾ.ಹೋ.ಶ್ರೀನಿವಾಸಯ್ಯ, ಪ್ರೊ.ಎಚ್.ಆರ್.ದಾಸೇಗೌಡ ಪಾಲ್ಗೊಂಡಿದ್ದರು.

ಕನ್ನಡಪ್ರಭ, ಗುರುವಾರ, 13 ಜನವರಿ 2011



ಸನ್ಮಾನ...

ಶೇಷಾದ್ರಿಪುರ ಕಾಲೇಜು ಯೂತ್ ರೆಡ್‌ಕ್ರಾಸ್ ಸಹಯೋಗದೊಂದಿಗೆ ಏರ್ಪಡಿಸಿದ್ದ ರಾಷ್ಟ್ರೀಯ ಸ್ವಯಂ ಸೇವಕರ ಪಾರ್ವಚರಣೆಯ ಸಮಯದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ.ಎಸ್.ಪಿ.ಅಗರ್‌ವಾಲ್ ಅವರನ್ನು ಡಾ.ವೂಡೇ ಪಿ.ಕೃಷ್ಣ ಹಾಗೂ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಸನ್ಮಾನಿಸಿದರು.

ಪ್ರಜಾವಾಣಿ

ಮಂಗಳವಾರ 12ನೇ ಜನವರಿ 2010

ವಿವೇಕಾನಂದರ ಜನ್ಮದಿನ



ಗಾಂಧಿ ಸ್ಮಾರಕ ನಿಧಿ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ: ಮಂಗಳವಾರ ಸ್ವಾಮಿ ವಿವೇಕಾನಂದರ 147ನೇ ಜನ್ಮದಿನ ಆಚರಣೆ. ಪ್ರಭುಶಂಕರ್ ಅವರಿಂದ 'ರಾಷ್ಟ್ರ ಪ್ರಗತಿಯಲ್ಲಿ ಯುವಶಕ್ತಿಯ ಪಾತ್ರ' ಉಪನ್ಯಾಸ. ಅಧ್ಯಕ್ಷತೆ: ಸ್ವಾಮಿ ವಿವೇಕಾನಂದ ಸರಸ್ವತಿ. ಅತಿಥಿಗಳು: ಹೊ. ಶ್ರೀನಿವಾಸಯ್ಯ, ವೂಡೆ ಪಿ. ಕೃಷ್ಣ. ಸ್ಥಳ: ಗಾಂಧಿಭವನ, ಶಿವಾನಂದ ವೃತ್ತ ಬಳಿ. ಸಂಜೆ 5.30.

ಜನತಾ ಶಿಕ್ಷಣ ಸಂಸ್ಥೆ: ಜನತಾ ಶಿಕ್ಷಣ ಸಂಸ್ಥೆ, ವಿವೇಕಾನಂದ ಶಾಲಾ ಕಾಲೇಜುಗಳು: ಮಂಗಳವಾರ. ವಿವೇಕಾನಂದ ಜಯಂತಿ. ಅಧ್ಯಕ್ಷತೆ: ಎ.ಸಿ. ರಘುರಾಂ. ಅತಿಥಿಗಳು: ಸ್ವಾಮಿ ಓಂಕಾರಾನಂದ ಮಹಾರಾಜ್ ಜಿ, ಎಸ್.ಟಿ. ನಾರಾಯಣಗೌಡ, ಸಿ.ಎನ್. ಮಂಚೇಗೌಡ, ಎಚ್.ಜಿ. ಬಾಲಗೋಪಾಲ್, ಕೆ.ಬಿ. ಜಯರಾಂ. ಸ್ಥಳ: ರಾಜ್‌ಕುಮಾರ್ ರಸ್ತೆ, ರಾಜಾಜಿನಗರ. ಬೆಳಿಗ್ಗೆ 10.30.

ಸಂಜೆವಾಣಿ
ಶುಕ್ರವಾರ 8 ಜನವರಿ 2010

ಕಾಲೇಜು ವಾರ್ಷಿಕೋತ್ಸವ

ಬೆಂಗಳೂರು, ಜ. ೮: ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು ವಾರ್ಷಿಕೋತ್ಸವದ ಅಂಗವಾಗಿ ನಾಳೆ ಬೆಳಗ್ಗೆ 10 ಗಂಟೆಗೆ ಕಾಲೇಜು ಸಭಾಂಗಣದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೆ ಪಿ. ಕೃಷ್ಣ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಬಿ.ಎಂ. ಪಾರ್ಥಸಾರಥಿ, ವಿಶ್ರಾಂತ ಪ್ರಾಧ್ಯಾಪಕರಾದ ಎಂ.ಜಿ. ಪಾರ್ಥಸಾರಥಿ ಹಾಗೂ ಪಿ. ಶೇಷಾದ್ರಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಕಾಲೇಜಿನ ಪ್ರಾಚಾರ್ಯ ಪ್ರೊ. ಎಂ.ಆರ್. ಶ್ರೀನಿವಾಸ್ ಅವರು ಅಧ್ಯಕ್ಷತೆ ವಹಿಸುವರು.


ಇದೇ ಸಂದರ್ಭದಲ್ಲಿ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಗುವುದು.

ಉದಯವಾಣಿ ಜನವರಿ 5, 2010



ರಾಷ್ಟ್ರಮಟ್ಟದ ಜೂನಿಯರ್ ರೆಡ್‌ಕ್ರಾಸ್ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ದೇವರಾಜ್ ಅರಸು ವಿಶ್ವವಿದ್ಯಾಲಯ ಕುಲಪತಿ ಡಾ. ಎಸ್. ಚಂದ್ರಶೇಖರ್ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು.


ಸಂಜೆವಾಣಿ ಶನಿವಾರ 2 ಜನವರಿ 2010



ಡಿ. 30ರಂದು ನಡೆದ ರಾಷ್ಟ್ರಮಟ್ಟದ ಜೂನಿಯರ್ ರೆಡ್‌ಕ್ರಾಸ್ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ದೇವರಾಜ್ ಅರಸು ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್. ಚಂದ್ರಶೇಖರ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ, ರಾಜ್ಯ ರೆಡ್‌ಕ್ರಾಸ್ ಖಜಾಂಚಿ ರಾಜು ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಡಾ. ಎನ್.ಜಿ. ನಾರಾಯಣ, ಜೂನಿಯರ್ ರೆಡ್‌ಕ್ರಾಸ್ ಉಪಸಮಿತಿ ಅಧ್ಯಕ್ಷ ಸಿ.ಎನ್. ರಾಜು ಹಾಗೂ ಇತರರು ಉಪಸ್ಥಿತರಿದ್ದರು.

ಇಂದು ಸಂಜೆ

ಶುಕ್ರವಾರ, ಜ,1, 2010



ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಬೆಂಗಳೂರು ಇದರ ವತಿಯಿಂದ ನಡೆದ ರಾಷ್ಟ್ರಮಟ್ಟದ ಜೂನಿಯರ್ ರೆಡ್‌ಕ್ರಾಸ್ ತರಬೇತಿ ಶಿಬಿರದಲ್ಲಿ ದೇವರಾಜು ಅರಸು ವಿವಿಯ ಕುಲಪತಿ ಡಾ.ಎಸ್.ಚಂದ್ರಶೇಖರ್‌ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಡಾ.ವೂಡೇ ಪಿ.ಕೃಷ್ಣ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡಪ್ರಭ, ಶುಕ್ರವಾರ, 1 ಜನವರಿ 2010

ಪುಟ 9

ಸನ್ಮಾನ...



ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ರಾಜ್ಯ ಶಾಖೆ ಆಯೋಜಿಸಿದ್ದ ರೆಡ್‌ಕ್ರಾಸ್ ತರಬೇತಿ ಶಿಬಿರದಲ್ಲಿ ಡಾ।ಎಸ್.ಚಂದ್ರಶೇಖರ ಶೆಟ್ಟಿ ಅವರನ್ನು ಗೌರವಿಸಲಾಯಿತು. ಡಾ।ಎನ್.ಜಿ.ನಾರಾಯಣ, ಸಿ.ಎನ್.ಎನ್.ರಾಜು, ಪೂಡೇ ಪಿ.ಕೃಷ್ಣ, ರಾಜು ಚಂದ್ರಶೇಖರ್ ಹಾಜರಿದ್ದರು.